

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಏಪ್ರಿಲ್ 12 ಬುಧವಾರ 2023

ಸಂಪುಟ: 43 | ಸಂಚಿಕೆ: 352 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


₹4



ಬಿಜೆಪಿಯ 189 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ

■52 ಹೊಸ ಮುಖಗಳಿಗೆ ಮಣೆ ■51 ವೀರಶೈವ ಲಿಂಗಾಯಿತರು, 41 ಒಕ್ಕಲಿಗ, 7 ಕುರುಬ, 30 ಎಸ್‌ಸಿ, 16 ಎಸ್‌ಟಿ ಸಮುದಾಯಕ್ಕೆ ಅವಕಾಶ ■ಮೈಸೂರಿನ ಕೆಆರ್, ಹೆಚ್.ಡಿ.ಕೋಟೆ ಸೇರಿ 35 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರು ಬಾಕಿ ■ಡಾಕ್ಟರ್–9, ಸ್ನಾತಕೋತ್ತರ ಪದವಿ–31, ಮಹಿಳೆಯರು–8, ವಕೀಲರು–5, IAS ಮತ್ತು IPS ನಿವೃತ್ತ 1+1, ನಿವೃತ್ತ ಸರ್ಕಾರಿ ಅಧಿಕಾರಿ–3, ಸಾಮಾಜಿಕ ಕಾರ್ಯಕರ್ತರು–8

● ಚಾಮರಾಜ–ಎಲ್.ನಾಗೇಂದ್ರ ● ಎನ್‌ಆರ್–ಸಂದೇಶ್‌ಸ್ವಾಮಿ ● ಚಾಮುಂಡೇಶ್ವರಿ–ಕವೀಶ್‌ಗೌಡ ● ಮಡಿಕೇರಿ–ಅಪ್ಪಚ್ಚು ರಂಜನ್ ● ವಿರಾಜಪೇಟೆ–ಕೆ.ಜಿ.ಬೋಪಯ್ಯ ● ಪಿರಿಯಾಪಟ್ಟಣ–ಸಿ.ಹೆಚ್.ವಿಜಯಶಂಕರ್ ● ಕೆ.ಆರ್.ನಗರ–ವೆಂಕಟೇಶ್ ಹೊಸಹಳ್ಳಿ ● ಹುಣಸೂರು–ದೇವರಹಳ್ಳಿ ಸೋಮಶೇಖರ್ ● ನಂಜನಗೂಡು (ಎಸ್‌ಸಿ)–ಬಿ.ಹರ್ಷವರ್ಧನ್ ● ವರುಣಾ–ವಿ.ಸೋಮಣ್ಣ ● ತಿ.ನರಸೀಪುರ (ಎಸ್‌ಸಿ)–ಡಾ.ರೇವಣ್ಣ ● ಹನೂರು–ಡಾ.ಪ್ರೀತನ್ ನಾಗಪ್ಪ ● ಕೊಳ್ಳೇಗಾಲ (ಎಸ್‌ಸಿ)–ಎನ್.ಮಹೇಶ್ ● ಚಾಮರಾಜನಗರ–ವಿ.ಸೋಮಣ್ಣ ● ಗುಂಡ್ಲುಪೇಟೆ–ಸಿ.ಎಸ್.ನಿರಂಜನ ಕುಮಾರ್ ● ಮದ್ದೂರು–ಎಸ್.ಪಿ.ಸ್ವಾಮಿ ● ಮೇಲುಕೋಟೆ–ಡಾ.ಇಂದ್ರೇಶ್ ಕುಮಾರ್ ● ಮಂಡ್ಯ–ಅಶೋಕ್ ಜಯರಾಂ ● ಶ್ರೀರಂಗಪಟ್ಟಣ–ಇಂಡುವಾಳು ಸಚ್ಚಿದಾನಂದ ● ನಾಗಮಂಗಲ–ಸುಧಾ ಶಿವರಾಂ ● ಕೆ.ಆರ್.ಪೇಟೆ–ಡಾ.ಕೆ.ಸಿ.ನಾರಾಯಣ ಗೌಡ ● ಮಳವಳ್ಳಿ–ಮುನಿರಾಜು ● ಬೇಲೂರು–ಹುಲ್ಲಹಳ್ಳಿ ಕೆ.ಸುರೇಶ್ ● ಹಾಸನ–ಜೆ.ಪ್ರೀತಂಗೌಡ ● ಹೊಳೆನರಸೀಪುರ–ದೇವರಾಜೇಗೌಡ ● ಅರಕಲಗೂಡು–ಯೋಗಾ ರಮೇಶ್ ● ಸಕಲೇಶಪುರ–ಸಿಮೆಂಟ್ ಮಂಜು



ಬಸವರಾಜ ಬೊಮ್ಮಾಯಿ | ಗೋವಿಂದ ಕಾರಜೋಳ | ಅಶ್ವತ್ಥ್ ನಾರಾಯಣ | ಕಾಗೇರಿ | ಶ್ರೀರಾಮುಲು | ವಿಜಯೇಂದ್ರ

ನವದೆಹಲಿ, ಏ.11– ರಾಜ್ಯ ನಾಯಕರ ಒತ್ತಡಕ್ಕೆ ಮಣಿದ ಬಿಜೆಪಿ ಹೈಕಮಾಂಡ್ ಸೀಮಿತ ಕ್ಷೇತ್ರಗಳಲ್ಲಿ ಹಾಲಿ ಶಾಸಕರ ಬದಲಾವಣೆ ಮಾಡಿ 189 ಕ್ಷೇತ್ರಗಳ ಮೊದಲ ಪಟ್ಟಿ ಪ್ರಕಟಿಸಿದೆ. ಮೊದಲ ಪಟ್ಟಿ ಬಿಡುಗಡೆಯಾದ ಬೆನ್ನಲ್ಲೆ ಕೆಲವು ಕ್ಷೇತ್ರಗಳಲ್ಲಿ ಭಿನ್ನಮತ ಸ್ಫೋಟಕ ಗೊಂಡಿದ್ದು, ಬಿಜೆಪಿ ವರಿಷ್ಠರ ನಿದ್ದೆಗೆಡಿಸಿದೆ. ಪ್ರಸಕ್ತ ರಾಜ್ಯ ವಿಧಾನ ಸಭಾ ಚುನಾವಣೆಗೆ ಕಳೆದ 3 ದಿನಗಳಿಂದ ವಿವಿಧ ಹಂತ ಗಳಲ್ಲಿ ಕಸರತ್ತು ನಡೆಸಿದ ಬಿಜೆಪಿ ವರಿಷ್ಠರು, ಹಾಲಿ ಕೆಲವು ಶಾಸಕರಿಗೆ ಟಿಕೆಟ್ ತಪ್ಪಿಸಿ 52 ಮಂದಿ ಹೊಸಬರಿಗೆ ಅವಕಾಶ ಕಲ್ಪಿಸಿದ್ದಾರೆ.

ಮೊದಲ ಪಟ್ಟಿಯಲ್ಲಿ ಮೈಸೂರಿನ ಚಾಮರಾಜ ಕ್ಷೇತ್ರದಿಂದ ಶಾಸಕ ಎಲ್.ನಾಗೇಂದ್ರ ಮತ್ತೆ ಕಣಕ್ಕಿಳಿದಿದ್ದರೆ, ನರಸಿಂಹ ಕ್ಷೇತ್ರದಿಂದ ಸಂದೇಶ್ ಸ್ವಾಮಿಗೆ ಪುನಃ ಟಿಕೆಟ್ ನೀಡಲಾಗಿದೆ. ಇತ್ತೀಚೆಗೆ ಪಕ್ಷ ಸೇರಿದ ಕವೀಶ್‌ಗೌಡ ಅವರನ್ನು ಚಾಮುಂಡೇಶ್ವರಿ ಕ್ಷೇತ್ರದಿಂದ ಕಣಕ್ಕಿಳಿಸುತ್ತಿದ್ದು, ಮಡಿಕೇರಿಯಿಂದ ಅಪ್ಪಚ್ಚು ರಂಜನ್, ವಿರಾಜಪೇಟೆ ಕೆ.ಜಿ.ಬೋಪಯ್ಯ, ಪಿರಿಯಾಪಟ್ಟಣ ಸಿ.ಹೆಚ್.ವಿಜಯ ಶಂಕರ್, ಕೆ.ಆರ್.ನಗರ ವೆಂಕಟೇಶ್ ಹೊಸಹಳ್ಳಿ, ಹುಣಸೂರು ದೇವರಹಳ್ಳಿ ಸೋಮಶೇಖರ್, ನಂಜನಗೂಡು (ಎಸ್‌ಸಿ) ಬಿ.ಹರ್ಷವರ್ಧನ್, ವರುಣಾ ವಿ.ಸೋಮಣ್ಣ, ತಿ.ನರಸೀಪುರ (ಎಸ್‌ಸಿ) ಡಾ.ರೇವಣ್ಣ, ಹನೂರು ಡಾ.ಪ್ರೀತನ್ ನಾಗಪ್ಪ ಕೊಳ್ಳೇಗಾಲ (ಎಸ್‌ಸಿ) ಎನ್.ಮಹೇಶ್, ಚಾಮರಾಜನಗರ ವಿ.ಸೋಮಣ್ಣ ಮತ್ತು ಗುಂಡ್ಲುಪೇಟೆಯಿಂದ ಸಿ.ಎಸ್. ನಿರಂಜನ ಕುಮಾರ್ ಸ್ಪರ್ಧೆಗೆ ಅವಕಾಶ ಮಾಡಿಕೊಡಲಾಗಿದೆ. ಮಂಡ್ಯ ಜಿಲ್ಲೆ ಮದ್ದೂರಿಂದ ಎಸ್.ಪಿ. ಸ್ವಾಮಿ, ಮೇಲುಕೋಟೆ ಡಾ. ಇಂದ್ರೇಶ್ ಕುಮಾರ್, ಮಂಡ್ಯ ಅಶೋಕ್ ಜಯರಾಂ, ▶ 8ನೇ ಪುಟಕ್ಕೆ [ಅಭ್ಯರ್ಥಿಗಳ ಪೂರ್ಣ ಪಟ್ಟಿ ಪುಟ–6]



ಎಲ್.ನಾಗೇಂದ್ರ | ಕವೀಶ್‌ಗೌಡ | ಸಂದೇಶ್‌ಸ್ವಾಮಿ | ಸಿ.ಹೆಚ್.ವಿಜಯಶಂಕರ್ | ಹರ್ಷವರ್ಧನ್ | ವೆಂಕಟೇಶ್ | ಸೋಮಶೇಖರ್ | ಡಾ.ರೇವಣ್ಣ

ಸುಧಾ ಶಿವರಾಮೇಗೌಡ | ನಾರಾಯಣಗೌಡ | ಅಶೋಕ್‌ಜಯರಾಮ್ | ಡಾ.ಇಂದ್ರೇಶ್ | ಸಚ್ಚಿದಾನಂದ | ಎಸ್.ಪಿ.ಸ್ವಾಮಿ | ಮುನಿರಾಜು

ಅಪ್ಪಚ್ಚು ರಂಜನ್ | ಕೆ.ಜಿ.ಬೋಪಯ್ಯ | ಎನ್.ಮಹೇಶ್ | ಪ್ರೀತನ್ ನಾಗಪ್ಪ | ಪ್ರೀತಂಗೌಡ | ಯೋಗಾ ರಮೇಶ್ | ಸಿಮೆಂಟ್ ಮಂಜು | ದೇವರಾಜೇಗೌಡ | ಹುಲ್ಲಹಳ್ಳಿ ಸುರೇಶ್

ಕಾರು, ಗೂಡ್ಸ್ ವಾಹನ ಮುಖಾಮುಖಿ ಡಿಕ್ಕಿ

ಇಬ್ಬರ ಸಾವು, 20ಕ್ಕೂ ಹೆಚ್ಚು ಮಂದಿಗೆ ಗಾಯ

ಮಳವಳ್ಳಿ, ಏ.11(ಮೋಹನ್ ರಾಜ್)– ಕಾರು ಮತ್ತು ಬೊಲೆರೋ ಗೂಡ್ಸ್ ವಾಹನದ ನಡುವೆ ಮುಖಾ ಮುಖಿ ಡಿಕ್ಕಿ ಸಂಭವಿಸಿ, ಸ್ಥಳದಲ್ಲೇ ಇಬ್ಬರು ಸಾವನ್ನಪ್ಪಿ, 20ಕ್ಕೂ ಹೆಚ್ಚು ಮಂದಿ ಗಾಯಗೊಂಡಿರುವ ಘಟನೆ ತಾಲೂಕಿನ ದಾಸನದೊಡ್ಡಿಯಲ್ಲಿ ನಡೆದಿದೆ.

ಕೊಳ್ಳೇಗಾಲ ತಾಲೂಕಿನ ಸತ್ತೇಗಾಲ ಸಮೀಪದ ಜಾಗೇರಿ ಗ್ರಾಮದ ಮಾದಲಿಯಮ್ಮ (60), ಜೋಸೆಫ್ ಮೇರಿ (52) ಸಾವನ್ನಪ್ಪಿದ್ದು, ಗಾಯಗೊಂಡವರ ಪೈಕಿ ಐವರ ಸ್ಥಿತಿ ಗಂಭೀರವಾಗಿದೆ. ಮಳವಳ್ಳಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಜಿಲ್ಲಾಸ್ಪತ್ರೆ, ಮೈಸೂರಿನ ಆಸ್ಪತ್ರೆಗೆ ರವಾನಿಸಲಾಗಿದೆ. ಮದ್ದೂರು ತಾಲೂಕಿನ ಕೆ.ಪಿ. ದೊಡ್ಡಿ ಸೇರಿದಂತೆ ಸುತ್ತಮುತ್ತಲ ಗ್ರಾಮಗಳ 20ಕ್ಕೂ ಹೆಚ್ಚು ಮಂದಿ ಬೊಲೆರೋ ಗೂಡ್ಸ್ ವಾಹನದಲ್ಲಿ ಶಿವನಸಮುದ್ರದ ಮಾರಮ್ಮನ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಿ ಊಟ ಮುಗಿಸಿಕೊಂಡು ಸ್ವಗ್ರಾಮಕ್ಕೆ ಹಿಂತಿರುಗುತ್ತಿದ್ದರು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರು, ಸ್ಥಳೀಯರ ಸಹಾಯದಿಂದ ಗಾಯಾಳುಗಳನ್ನು ಆಂಬುಲೆನ್ಸ್ ಮೂಲಕ ಚಿಕಿತ್ಸೆಗಾಗಿ ಮಳವಳ್ಳಿ ಆಸ್ಪತ್ರೆಗೆ ರವಾನಿಸಿದರು. ಈ ವೇಳೆ ಅಪರ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ, ಡಿವೈಎಸ್ಪಿ ನವೀನ್ ಕುಮಾರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಇಬ್ಬರು ಪ್ರಭಾವಿ ನಾಯಕರಿಗೆ ಬಿಜೆಪಿ ಹೈಕಮಾಂಡ್ ಬಹುದೊಡ್ಡ ಟಾಸ್ಕ್

ಸಿದ್ದರಾಮಯ್ಯ ವಿರುದ್ಧ ಸೋಮಣ್ಣ, ಡಿ.ಕೆ.ಶಿವಕುಮಾರ್ ವಿರುದ್ಧ ಅಶೋಕ್

● ಈ ಇಬ್ಬರು ನಾಯಕರಿಗೆ ಎರಡು ಕ್ಷೇತ್ರದಲ್ಲಿ ಸ್ಪರ್ಧೆಗೆ ಅವಕಾಶ
● ಚೆನ್ನಪಟ್ಟಣದಲ್ಲಿ ಹೆಚ್‌ಡಿಕೆ ವಿರುದ್ಧ ಯೋಗೇಶ್ವರ್ ಕಣಕ್ಕೆ



ಮೈಸೂರು,ಏ.11–ಬಿಜೆಪಿ ಹೈಕಮಾಂಡ್ ರಾಜ್ಯದ ಇಬ್ಬರು ಪ್ರಭಾವಿ ನಾಯಕರಿಗೆ ಮಹತ್ವದ ಟಾಸ್ಕ್ ನೀಡಿದೆ. ಒಂದು ವೇಳೆ ಇದರಲ್ಲಿ ಈ ಇಬ್ಬರು ನಾಯಕರು ಯಶಸ್ವಿಯಾದರೆ ಇವರಿಗೆ ಹೈಕಮಾಂಡ್ ಬಹುದೊಡ್ಡ ಬಳುವಳಿಯನ್ನೇ ನೀಡುವ ಸಾಧ್ಯತೆಗಳಿವೆ. ಅಂತಹ ಸವಾಲಿಗೆ ಸಜ್ಜಾಗಿರುವ ನಾಯಕರೆಂದರೆ ಸಚಿವರಾದ ಆರ್.ಅಶೋಕ್ ಮತ್ತು ವಿ.ಸೋಮಣ್ಣ. ಆರ್.ಅಶೋಕ್ ಇದುವರೆಗೆ ಬೆಂಗಳೂರಿನ ಪದ್ಮನಾಭನಗರ ಕ್ಷೇತ್ರವನ್ನು ಪ್ರತಿನಿಧಿಸುತ್ತಾ ಬಂದಿದ್ದಾರೆ. ಈ ಬಾರಿಯೂ ಇದೇ ಕ್ಷೇತ್ರದಿಂದ ಅವರಿಗೆ ಸ್ಪರ್ಧಿಸಲು ಅವಕಾಶ ಕಲ್ಪಿಸುವುದರೊಂದಿಗೆ ರಾಜ್ಯ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿರುದ್ಧ ಕನಕಪುರದಿಂದ ಸ್ಪರ್ಧಿಸಲು ಟಿಕೆಟ್ ನೀಡಲಾಗಿದೆ. ಒಕ್ಕಲಿಗರ ಪ್ರಾಬಲ್ಯವಿರುವ ಈ ಕ್ಷೇತ್ರದಲ್ಲಿ ಆರ್.ಅಶೋಕ್ ಕಣಕ್ಕಿಳಿಸುವ ಮೂಲಕ ಆ ಸಮುದಾಯದ ಅಧಿಕ ಮತ ಗಳಿಸುವುದರೊಂದಿಗೆ ಹಿಂದುತ್ವದ ನೆಲೆಯಲ್ಲಿ ಗೆಲುವು ಸಾಧಿಬಹುದೆಂಬ ಲೆಕ್ಕಾಚಾರ ಬಿಜೆಪಿ ವರಿಷ್ಠರದ್ದಾಗಿದೆ. ಚನ್ನಪಟ್ಟಣ ಕ್ಷೇತ್ರದಲ್ಲಿ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ವಿರುದ್ಧ ಸಿ.ಪಿ.ಯೋಗೇಶ್ವರ್ ಅವರನ್ನು ಕಣಕ್ಕಿಳಿಸಲಾಗಿದೆ. ಹಾಗೆಯೇ ಬೆಂಗಳೂರಿನ ಗೋವಿಂದರಾಜನಗರ ಕ್ಷೇತ್ರವನ್ನು ಪ್ರತಿನಿಧಿಸುತ್ತಾ ಬಂದಿರುವ ವಿ.ಸೋಮಣ್ಣ ▶ 8ನೇ ಪುಟಕ್ಕೆ





ಕೃಷ್ಣರಾಜ, ಹೆಚ್.ಡಿ.ಕೋಟೆ ಸೇರಿದಂತೆ 35 ಕ್ಷೇತ್ರಗಳಿಗೆ ಟಿಕೆಟ್ ಘೋಷಣೆ ಬಾಕಿ

ಬೆಂಗಳೂರು: ಮೈಸೂರು ಜಿಲ್ಲೆಯ ಕೃಷ್ಣರಾಜ ಮತ್ತು ಹೆಚ್.ಡಿ.ಕೋಟೆ ಸೇರಿದಂತೆ ಉಳಿದ 35 ಕ್ಷೇತ್ರಗಳ ಅಭ್ಯರ್ಥಿಗಳ ಹೆಸರನ್ನು 2ನೇ ಪಟ್ಟಿಯಲ್ಲಿ ರಿಲೀಸ್ ಮಾಡಲಿದೆ. ಈ ಪೈಕಿ ದೇವರಹಿಪ್ಪರಗಿ, ಬಸವನಬಾಗೇವಾಡಿ, ನಾಗಠಾಣ, ಇಂಡಿ, ಗುರುಮಿಟ್ಕಲ್, ಸೇಡಂ, ಬೀದರ್ ನಗರ, ಬಾಲ್ಕಿ, ಮಾನ್ವಿ, ಗಂಗಾವತಿ, ಕೊಪ್ಪಳ, ರೋಣ, ಹುಬ್ಬಳ್ಳಿ ಧಾರವಾಡ ಸೆಂಟ್ರಲ್, ಕಲಘಟಗಿ, ಹಾನಗಲ್, ಹಾವೇರಿ, ಹರಪನಹಳ್ಳಿ, ಹಗರಿ ಬೊಮ್ಮನಹಳ್ಳಿ, ದಾವಣಗೆರೆ ಉತ್ತರ, ದಾವಣಗೆರೆ ದಕ್ಷಿಣ, ಮಾಯಕೊಂಡ, ಚನ್ನಗಿರಿ, ಶಿವಮೊಗ್ಗ ನಗರ, ಬೈಂದೂರು, ಮೂಡಿಗೆರೆ, ಗುಬ್ಬಿ, ಶಿಡ್ಲಘಟ್ಟ, ಕೆಜಿಎಫ್, ಹೆಬ್ಬಾಳ, ಗೋವಿಂದರಾಜನಗರ, ಅರಸೀಕೆರೆ, ಶ್ರವಣಬೆಳಗೊಳ, ಮಹದೇವಪುರ ಕ್ಷೇತ್ರಗಳಿಗೆ ಇನ್ನೂ ಟಿಕೆಟ್ ಘೋಷಿಸಿಲ್ಲ. 35 ಕ್ಷೇತ್ರಗಳ ಪೈಕಿ 16 ಹಾಲಿ ಶಾಸಕರ ಕ್ಷೇತ್ರಗಳಿಗೆ ಇನ್ನೂ ಟಿಕೆಟ್ ಘೋಷಣೆ ಮಾಡಿಲ್ಲ.

ಮತ್ತೆ 'ಮಿತ್ರ'ನಿಗೆ ಓದುಗರ ಶಹಬ್ಬಾಷ್...



ಮೈಸೂರು, ಏ.11– ವರುಣಾ ಕ್ಷೇತ್ರದಿಂದ ಬಿಜೆಪಿಯಿಂದ ವಿ.ಸೋಮಣ್ಣ ಅವರನ್ನು ಕಣಕ್ಕಿಳಿಸುವ ಬಗ್ಗೆ 'ಮೈಸೂರು ಮಿತ್ರ'ನ ಏಪ್ರಿಲ್ 5ರ ಸಂಚಿಕೆಯ ಮುಖಪುಟದಲ್ಲಿ ವರದಿ ಪ್ರಕಟವಾಗಿತ್ತು. ಪ್ರತಿಷ್ಠಿತ ವರುಣಾ ವಿಧಾನಸಭಾ ಕ್ಷೇತ್ರದಲ್ಲಿ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ವಿರುದ್ಧ ವಸತಿ ಸಚಿವ ವಿ.ಸೋಮಣ್ಣ ಅವರನ್ನು ಕಣಕ್ಕಿಳಿಸಲು ಬಿಜೆಪಿ ನಿರ್ಧರಿಸಿದ್ದರ ಬಗ್ಗೆ ಉನ್ನತ ಮೂಲಗಳ ಮಾಹಿತಿ ಆಧರಿಸಿ **'ವರುಣಾದಲ್ಲಿ ಸಿದ್ದು ವಿರುದ್ಧ ಸೋಮಣ್ಣ ಸ್ಪರ್ಧೆ'** ಶೀರ್ಷಿಕೆಯಡಿ ವರದಿ ಪ್ರಕಟಿಸಲಾಗಿತ್ತು. ಈ ವಿಚಾರವಾಗಿ ಪ್ರತಿಕ್ರಿಯಿಸಿದ್ದ ವಿ.ಸೋಮಣ್ಣ, ವರುಣಾದಿಂದ ಸ್ಪರ್ಧಿಸುವ ಪ್ರಶ್ನೆಯೇ ಇಲ್ಲ ಎಂದು ಹೇಳಿದ್ದರು. ರಾಜಕೀಯ ವಿಶ್ಲೇಷಕರೂ ಕೂಡ ಸೋಮಣ್ಣ ವರುಣಾದಲ್ಲಿ ಸ್ಪರ್ಧಿಸುವ ಸಾಧ್ಯತೆಯನ್ನು ತಳ್ಳಿ ಹಾಕಿದ್ದರು. ಆದರೆ 6 ದಿನಗಳ ಹಿಂದಿನ 'ಮೈಸೂರು ಮಿತ್ರ'ನ ಭವಿಷ್ಯ ನಿಜವಾಗಿದ್ದು, ಅನೇಕ ಓದುಗರು 'ಮಿತ್ರ'ನ ಕಚೇರಿಗೆ ಕರೆ ಮಾಡಿ ಭವಿಷ್ಯ ನಿಜವಾದ ಬಗ್ಗೆ ಅಚ್ಚರಿ ವ್ಯಕ್ತಪಡಿಸಿ, ವಿಶ್ವಾಸಾರ್ಹ, ನಿಖರ ಮಾಹಿತಿಗಾಗಿ ಪ್ರಶಂಸಿಸಿದ್ದಾರೆ. ವಿಧಾನಸಭಾ ಚುನಾವಣೆ ವೇಳಾಪಟ್ಟಿಯ ದಿನಾಂಕದ ಬಗ್ಗೆಯೂ 'ಮಿತ್ರ'ನ ಭವಿಷ್ಯ ಸತ್ಯವಾಗಿತ್ತು. ಈ ಸಂದರ್ಭದಲ್ಲೂ ಓದುಗರು ಪ್ರಶಂಸಿಸಿದ್ದರು.

ಸವದಿಗೆ ಸೆಡ್ಡು ಹೊಡೆದ ರಮೇಶ್ ಜಾರಕಿಹೊಳಿ

ಬೆಂಗಳೂರು: ಬಿಜೆಪಿ ಮೊದಲ ಅಭ್ಯರ್ಥಿಗಳ ಪಟ್ಟಿಯಲ್ಲಿ ಮಾಜಿ ಡಿಸಿಎಂ ಲಕ್ಷ್ಮಣ್ ಸವದಿಗೆ ಟಿಕೆಟ್ ಕೈ ತಪ್ಪಿದೆ. ಅವರು ಪ್ರತಿನಿಧಿಸುತ್ತಿದ್ದ ಅಥಣಿ ವಿಧಾನಸಭಾ ಕ್ಷೇತ್ರದ ಟಿಕೆಟ್ ಅನ್ನು ಹಾಲಿ ಶಾಸಕ ಮಹೇಶ್ ಕುಮಟಳ್ಳಿಗೆ ನೀಡಲಾಗಿದೆ.

ಮಾಜಿ ಸಚಿವ ರಮೇಶ್ ಜಾರಕಿಹೊಳಿ ತಮ್ಮ ಆಪ್ತ ಮಹೇಶ್ ಕುಮಟಳ್ಳಿಗೆ ಟಿಕೆಟ್ ನೀಡಲು ಪಟ್ಟು ಹಿಡಿದಿದ್ದರು. ಮಹಾರಾಷ್ಟ್ರ ಸಿಎಂ ದೇವೇಂದ್ರ ಫಡ್ನವಿಸ್ ಮೂಲಕ ಲಾಬಿ ನಡೆಸಿದ್ದರು. ರಮೇಶ್ ಜಾರಕಿಹೊಳಿ ಒತ್ತಡಕ್ಕೆ ಮಣಿದಿರುವ ಬಿಜೆಪಿ ಹೈಕಮಾಂಡ್ ಮಹೇಶ್ ಕುಮಟಳ್ಳಿಗೆ ಟಿಕೆಟ್ ನೀಡಿದೆ. ಭಾರೀ ನಿರೀಕ್ಷೆಯಲ್ಲಿದ್ದ ಲಕ್ಷ್ಮಣ್ ಸವದಿಗೆ ಬಿಜೆಪಿ ಟಿಕೆಟ್ ಪಡೆಯುವಲ್ಲಿ ವಿಫಲರಾಗಿದ್ದಾರೆ.

ಸಂತೋಷ್ ಆಟಕ್ಕೆ ಬಿಎಸ್‌ವೈ ಬಲಿ, ಜೋಶಿ ಆಟಕ್ಕೆ ಶೆಟ್ಟರ್ ಗಲಿಬಿಲಿ



ಬೆಂಗಳೂರು, ಏ.11–ರಾಜ್ಯ ಬಿಜೆಪಿ ಹಿರಿಯ ನಾಯಕರಾದ ಕೆ.ಎಸ್.ಈಶ್ವರಪ್ಪ, ಜಗದೀಶ್ ಶೆಟ್ಟರ್ ಅವರಿಗೆ ಟಿಕೆಟ್ ನೀಡಲು ಹೈಕಮಾಂಡ್ ನಿರಾಕರಿಸಿರುವ ವಿಚಾರಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ವ್ಯಂಗ್ಯವಾಡಿದೆ.

ಬಿಜೆಪಿ ಟಿಕೆಟ್ ಹಂಚಿಕೆ ವಿಚಾರ ಪ್ರಸ್ತಾಪಿಸಿ ಸರಣಿ ಟ್ವೀಟ್ ಮಾಡಿರುವ ಕಾಂಗ್ರೆಸ್, ಯಡಿಯೂರಪ್ಪ, ಈಶ್ವರಪ್ಪ, ಜಗದೀಶ್ ಶೆಟ್ಟರ್ ಬಿಜೆಪಿ ಎಂಬ ಕಳೆಗೆ ನೀರು ಗೊಬ್ಬರ ಹಾಕಿ ಬೆಳೆಸಿದ ನಾಯಕರನ್ನು ಅಗೌರವದ ನಿರ್ಗಮನ ದಾರಿ ತೋರಿಸಿದೆ ಬಿಜೆಪಿ ಎಂದು ಲೇವಡಿ ಮಾಡಿದೆ. ನಾವೇ ಎಲ್ಲ ಎನ್ನುತ್ತಿದ್ದವರಿಗೆ 'ನೀವೇನೂ ಅಲ್ಲ' ಎನ್ನುತ್ತಿದೆ ಮೋದಿ–ಅಮಿತ್ ಶಾ ಜೋಡಿ. ಗೊಡ್ಡು ಹಸುಗಳನ್ನು ▶ 8ನೇ ಪುಟಕ್ಕೆ

ಬಿಜೆಪಿ ಹಿರಿಯ ಮುಖಂಡ ಕೆ.ಎಸ್.ಈಶ್ವರಪ್ಪ ರಾಜಕೀಯ ನಿವೃತ್ತಿ ಘೋಷಣೆ

● ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾರಿಗೆ ಕನ್ನಡದಲ್ಲೇ ಪತ್ರ ● ಈ ಬಾರಿ ಚುನಾವಣೆಯಲ್ಲಿ ಯಾವುದೇ ಕ್ಷೇತ್ರಕ್ಕೆ ತಮ್ಮನ್ನು ಪರಿಗಣಿಸದಂತೆ ಮನವಿ



ಬೆಂಗಳೂರು, ಏ.11(ಕೆಎಂಶಿ)–ಮಾಜಿ ಉಪಮುಖ್ಯಮಂತ್ರಿ, ಬಿಜೆಪಿ ನಾಯಕ ಕೆ.ಎಸ್.ಈಶ್ವರಪ್ಪ ಚುನಾವಣಾ ರಾಜಕೀಯಕ್ಕೆ ನಿವೃತ್ತಿ ಘೋಷಣೆ ಮಾಡಿದ್ದಾರೆ.

ಈ ಕುರಿತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ಕನ್ನಡದಲ್ಲೇ ಪತ್ರ ಬರೆದಿರುವ ಅವರು, ನಾನು ಸ್ವ ಇಚ್ಛೆಯಿಂದ ಚುನಾವಣಾ ರಾಜಕೀಯದಿಂದ ನಿವೃತ್ತಿಯಾಗಲು ಬಯಸಿದ್ದೇನೆ.

ಹೀಗಾಗಿ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ನನ್ನ ಹೆಸರನ್ನು ಯಾವುದೇ ಕ್ಷೇತ್ರಕ್ಕೆ ಪರಿಗಣಿಸಬಾರದೆಂದು ವಿನಂತಿಸಿದ್ದಾರೆ. ಕಳೆದ ನಾಲ್ಕು ದಶಕದ ರಾಜಕೀಯ ಜೀವನದಲ್ಲಿ ವಿವಿಧ ಹಂತಗಳಿಂದ ಉಪಮುಖ್ಯಮಂತ್ರಿಯ ವರೆಗೂ ಗೌರವದ ಸ್ಥಾನಮಾನಗಳನ್ನು ಪಕ್ಷ ನೀಡಿದೆ. ಅದಕ್ಕೆ ನಾನು ಋಣಿಯಾಗಿರುತ್ತೇನೆ ▶ 8ನೇ ಪುಟಕ್ಕೆ

ಒಂದೆಡೆ ಅಭಿವೃದ್ಧಿ, ಜೊತೆ ಜೊತೆಗೆ ಜನಸೇವೆ ನನ್ನ ಮಹದುದ್ದೇಶ...

ಸಂವಾದ ಕಾರ್ಯಕ್ರಮದಲ್ಲಿ ಹುಣಸೂರಿನ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡ ಮನದಾಸೆ ಅನಾವರಣ

ಹುಣಸೂರು, ಏ.11(ಕೆಕೆ)–ವ್ಯವಸ್ಥೆಯ ಸುಧಾರಣೆ, ರೈತರ, ದಮನಿತರ ಮತ್ತು ಯುವ ಸಮೂಹದ ಸಮಸ್ಯೆಗಳ ಶಾಶ್ವತ ಪರಿಹಾರಕ್ಕೆ ಆದ್ಯತೆ ನೀಡುತ್ತೇನೆ. ಅಭಿವೃದ್ಧಿ ಮಂತ್ರದೊಂದಿಗೆ ಜನಸೇವೆಗೆ ಬದ್ಧನಾಗಿದ್ದೇನೆ ಎಂದು ಹುಣಸೂರು ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡ ತಿಳಿಸಿದರು. ನಗರದ ಪತ್ರಕರ್ತರ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ಬಾರಿಯ ಚುನಾವಣೆಯಲ್ಲಿ ತಾಲೂಕಿನ ಜನತೆ ನನ್ನನ್ನು ಆಶೀರ್ವದಿಸಲಿದ್ದಾರೆ ಎಂಬ ಪೂರ್ಣ ವಿಶ್ವಾಸವಿದೆ. ತಾಲೂಕಿನ ಸಮಗ್ರ ಅಭಿವೃದ್ಧಿಗಾಗಿ ವಿಶೇಷ ಯೋಜನೆಗಳನ್ನು ಘೋಷಿಸುವುದಕ್ಕಿಂತ ಮೊದಲು ಇರುವ ವ್ಯವಸ್ಥೆ ಸರಿಪಡಿಸುವ ಕಾರ್ಯ ಮಾಡಲಿದ್ದೇನೆ. ವ್ಯವಸ್ಥೆಯ ಲೋಪದೋಷಗಳನ್ನು ಸರಿಪಡಿಸಿದಲ್ಲಿ ಸೌಲಭ್ಯಗಳು ದೊರಕುತ್ತವೆ ಸಾಮಾಜಿಕ ಸಾಮರಸ್ಯ, ಶೋಷಿತರ ಅಭಿವೃದ್ಧಿ, ಆರ್ಥಿಕ, ಶಿಕ್ಷಣ, ನೀರಾವರಿ, ತಾಲೂಕಿನ ಜೀವನದಿ ಲಕ್ಷ್ಮಣತೀರ್ಥ ಶುದ್ಧೀಕರಣ, ಉದ್ಯೋಗ ಸೃಷ್ಟಿ ಮುಂತಾದ ಪ್ರಮುಖ ವಿಷಯಗಳ ಬಗ್ಗೆ ಹೆಚ್ಚಿನ ಗಮನ ಹರಿಸುತ್ತೇನೆ ಎಂದರು.



ಉದ್ಯೋಗ ಸೃಷ್ಟಿ!

ಕಳೆದ 2010 ರಿಂದ ನಾನು ಹುಣಸೂರು ಜನರ ನಡುವೆಯೇ ಇದ್ದು ಕೆಲಸ ಮಾಡುತ್ತಾ ಬರುತ್ತಿದ್ದೇನೆ. ನನ್ನ ತಂದೆ ಜಿ.ಟಿ.ದೇವೇಗೌಡರು 2 ಬಾರಿ ಶಾಸಕರಾಗಿ ಕೇವಲ 40 ತಿಂಗಳ ಕಾಲ ಅಧಿಕಾರದಲ್ಲಿದ್ದರೂ, ತಾಲೂಕಿನ ಜನತೆ ಎಂದಿಗೂ ಮರೆಯದಂತಹ ಅಭಿವೃದ್ಧಿ ಕಾರ್ಯಗಳನ್ನು ಮಾಡಿ ದ್ದಾರೆ. ನನ್ನ ತಾಯಿ ಲಲಿತಾ ಜಿ.ಟಿ.ದೇವೇಗೌಡರು ಜಿಪಂ ಸದಸ್ಯರಾಗಿ ಜನಪರ ಕಾರ್ಯ ಕೈಗೊಂಡಿದ್ದರು. ಹೀಗೆ ಒಂದಲ್ಲ ಒಂದು ರೀತಿ ನಮ್ಮ ಕುಟುಂಬ ಹುಣಸೂರನ್ನು ಕರ್ಮಭೂಮಿ ಮಾಡಿಕೊಂಡಿದೆ. ಹುಣಸೂರು ಮಿನಿ ಭಾರತವಿದ್ದಂತೆ. ಇಲ್ಲಿ ಎಲ್ಲಾ ಜಾತಿ, ಜನಾಂಗ, ಧರ್ಮ ಗಳ ಜನರು ಒಂದಾಗಿ ಬಾಳುತ್ತಿದ್ದಾರೆ. ತಾಲೂಕಿನ ಯುವ ಸಮೂಹದ ಉದ್ಯೋಗ ಸೃಷ್ಟಿಗಾಗಿ ನಾನು ಈ ಹಿಂದೆಯೇ ಜಿಟಿಡಿ ಫೌಂಡೇಶನ್ ಮೂಲಕ ಉಚಿತವಾಗಿ ಸಿಇಟಿ ಕೋಚಿಂಗ್ ಕಲ್ಪಿಸಿದ್ದೆ. ಸಹಕಾರ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ ನಂತರ ತಾಲೂಕಿನಲ್ಲಿದ್ದ ಕೇವಲ 48 ಹಾಲು ಉತ್ಪಾದಕರ ಸಂಘಗಳನ್ನು 205ಕ್ಕೆ ಏರಿಸಿದ್ದೇನೆ. ಆ ಮೂಲಕ 1000ಕ್ಕೂ ಹೆಚ್ಚು ಮಂದಿಗೆ ಉದ್ಯೋಗ ನೀಡಲಾಗಿದೆ ಎಂದು ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ಫೀಡ್ಸ್, ಗಾರ್ಮೆಂಟ್ ಆರಂಭ

ಕೆಎಂಎಫ್ ಮತ್ತು ಮೈಮೂಲ್ ಸಹಯೋಗದಲ್ಲಿ ಹುಣಸೂರು ಮತ್ತು ಪಿರಿಯಾಪಟ್ಟಣ ತಾಲೂಕಿನ ರೈತರು ಮತ್ತು ಯುವಕರಿಗಾಗಿ ಫೀಡ್ಸ್ ಫ್ಯಾಕ್ಟರಿ ಆರಂಭಿಸಲು ಸರ್ಕಾರ ನಿರ್ಧರಿಸಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ. 300 ಕೋಟಿ ರೂ.ಗಳ ▶ 2ನೇ ಪುಟಕ್ಕೆ



ಬೇಸಿಗೆ ಏರ್ ರೈಫಲ್ ಶೂಟಿಂಗ್ ಶಿಬಿರ

ಮೈಸೂರು, ಏ.11(ಎಂಕೆ)– ಮೈಸೂರು ಜಿಲ್ಲಾ ರೈಫಲ್ ಅಸೋಸಿಯೇಷನ್



ವತಿಯಿಂದ ಏ.19ರಿಂದ 10 ದಿನಗಳ 'ಬೇಸಿಗೆ ಏರ್ ರೈಫಲ್ ಶೂಟಿಂಗ್ ಶಿಬಿರ' ಆಯೋಜಿಸಲಾಗಿದೆ. ಶಿಬಿರದಲ್ಲಿ ಭಾಗವಹಿಸುವವರಿಗೆ ರೈಫಲ್ ಹಾಗೂ ಬುಲೆಟ್‌ಗಳನ್ನು ಒದಗಿಸಲಾಗುವುದು. ತರಬೇತುದಾರ ಎಂ.ಎಸ್.ಸುರೇಶ್ ನೇತೃತ್ವದಲ್ಲಿ ಶಿಬಿರ ನಡೆಯಲಿದ್ದು, ಹೆಚ್ಚಿನ ಮಾಹಿತಿಗಾಗಿ ಮೊ.ನಂ.9620636121ಗೆ ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.



ಕಾಗಿನೆಲೆಯ ಕನಕ ಗುರು ಪೀಠದ ನಿರಂಜನಾನಂದಪುರಿ ಸ್ವಾಮಿ ಅವರ ಜನ್ಮದಿನದ ಅಂಗವಾಗಿ ಮೈಸೂರಿನ ಸದ್ವಿದ್ಯಾ ವೃತ್ತದ ಬಳಿ ಕಾಂಗ್ರೆಸ್ ಮುಖಂಡ ಕೆ.ಹರೀಶ್ ಗೌಡ ಸಾರ್ವಜನಿಕರಿಗೆ ಎಳನೀರನ್ನು ವಿತರಿಸಿದರು. ಈ ಸಂದರ್ಭದಲ್ಲಿ ಕುರುಬರ ಸಂಘದ ನಿರ್ದೇಶಕರಾದ ಅಭಿಲಾಶ್, ಗುರುರಾಜ್, ಆನಂದ್, ಲೋಕೇಶ್, ರವಿಚಂದ್ರನ್, ಮಂಜುನಾಥ್, ನವೀನ್ ಇನ್ನಿತರರು ಉಪಸ್ಥಿತರಿದ್ದರು

ಒಂದನೇ ಪುಟದಿಂದ

ಜನಸೇವೆ ನನ್ನ ಮಹದುದ್ದೇಶ...

ಈ ಯೋಜನೆ ಯಿಂದ ಈ ಭಾಗದ ಸಾವಿರಾರು ಯುವಕರಿಗೆ ಉದ್ಯೋಗ ಸಿಗಲಿದೆ. ಹುಣಸೂರಿನಲ್ಲಿ ಗಾರ್ಮೆಂಟ್ ಆರಂಭಿಸಲು ಅವಕಾಶವಿಲ್ಲವೆಂಬ ಸುಳ್ಳು ಮಾಹಿತಿ ಹರಿದಾಡುತ್ತಿದೆ. ಖಂಡಿತ ಮಾಡಬಹುದಾಗಿದ್ದು, ತಾಲೂಕಿನಲ್ಲಿ ಇಂಡಸ್ಟ್ರಿಯಲ್ ಕ್ಲಸ್ಟರ್ ಆರಂಭಿಸುವ ಯೋಚನೆ ಹೊಂದಿದ್ದೇನೆ ಎಂದರು.

ಡಿಪ್ಲೊಮಾ, ಇಂಜಿನಿಯರಿಂಗ್ ಕಾಲೇಜುಗಳ ಸ್ಥಾಪನೆ: ನನ್ನ ತಂದೆ ತಮ್ಮ ಅಧಿಕಾರಾವಧಿಯಲ್ಲಿ ತಾಲೂಕಿನಲ್ಲಿ 3 ಪದವಿ ಕಾಲೇಜು, ಐದು ಪಿಯು ಕಾಲೇಜು, 16 ಪ್ರೌಢಶಾಲೆಗಳನ್ನು ತೆರೆದಿದ್ದರು. ಉನ್ನತ ಶಿಕ್ಷಣ ಸಚಿವರಾಗಿದ್ದ ವೇಳೆ ತಾಲೂಕಿನ ಪದವಿ ಕಾಲೇಜುಗಳಿಗೆ ಒಟ್ಟು 20 ಕೋಟಿ ರೂ. ಅನುದಾನ ನೀಡಿದ್ದರು. ನಗರದ ದೇವರಾಜ ಅರಸು ಕಾಲೇಜಿಗೆ ಪಿಜಿ ಕೋರ್ಸ್‌ಗಳನ್ನು ತರುವಲ್ಲಿ ನನ್ನ ಪಾತ್ರವೂ ಇದೆ. ಮುಂದಿನ ದಿನಗಳಲ್ಲಿ ತಾಲೂಕಿಗೆ ಅವಶ್ಯವಿರುವ ಡಿಪ್ಲೊಮಾ, ಇಂಜಿನಿಯರಿಂಗ್ ಕಾಲೇಜುಗಳ ಸ್ಥಾಪನೆ ಗುರಿ ಹೊಂದಿದ್ದೇನೆ. ತಾಲೂಕು ಕ್ರೀಡಾಂಗಣದ ಅಭಿವೃದ್ಧಿ, ಸ್ಪೋರ್ಟ್ಸ್ ಅಕಾಡೆಮಿ ಸ್ಥಾಪನೆ, ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೋರ್ಸ್‌ಗಳನ್ನು ಒದಗಿಸುವುದು, ಶಿಕ್ಷಕರ ವೃತ್ತಿ ತರಬೇತಿಗೆ ಆದ್ಯತೆ, ಸರ್ಕಾರೇತರ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಸರ್ಕಾರಿ ಶಾಲೆಗೆ ಮೂಲ ಸೌಕರ್ಯಗಳನ್ನು ಹೆಚ್ಚಿಸುವುದು ಹೀಗೆ ಹತ್ತು ಹಲವು ಕಾರ್ಯಕ್ರಮ ಕೈಗೆತ್ತಿಕೊಳ್ಳಲಾಗುವುದು ಎಂದರು.

ಆರೋಗ್ಯಕ್ಕೆ ಆದ್ಯತೆ: ಹುಣಸೂರಿನ ಗ್ರಾಮೀಣ ಭಾಗಗಳ ಹಾಗೂ ನಗರದ ಸಾರ್ವಜನಿಕ ಆಸ್ಪತ್ರೆಯ ಅವ್ಯವಸ್ಥೆ ಕಂಡಿದ್ದೇನೆ. ನೂತನವಾಗಿ ಆಸ್ಪತ್ರೆ ಕಟ್ಟಡ ನಿರ್ಮಾಣವಾಗುತ್ತಿದ್ದು, ಎಲ್ಲ ಸೌಲಭ್ಯಗಳು ಸಿಗುವಂತಾಗಬೇಕಿದೆ. ಇದಕ್ಕಾಗಿ ಶ್ರಮಿಸುತ್ತೇನೆ. ಯಶಸ್ವಿನಿ ಯೋಜನೆಯಡಿ ತಾಲೂಕಿನಲ್ಲಿ 35 ಸಾವಿರ ಸಹಕಾರಿಗಳನ್ನು ಒಳಪಡಿಸಲಾಗಿದೆ. ಹುಣಸೂರು ಉಪವಿಭಾಗ ಕೇಂದ್ರವಾಗಿದ್ದರೂ ಹೆರಿಗೆ ಆಸ್ಪತ್ರೆಯಿಲ್ಲ, ಕೆ.ಆರ್.ನಗರ, ಹೆಚ್.ಡಿ.ಕೋಟೆ ತಾಲೂಕಿಗೆ ಹೋಗುವ ಪರಿಸ್ಥಿತಿ ಇದೆ. ತುರ್ತು ಚಿಕಿತ್ಸೆಗಳಿಗಾಗಿ ಮೈಸೂರು, ಬೆಂಗಳೂರಿಗೆ ತೆರಳುವುದು ನಿಲ್ಲಬೇಕಿದೆ. ಪ್ರತಿ ಗ್ರಾಮದಲ್ಲೂ 25ಕ್ಕೂ ಹೆಚ್ಚು ಮಂದಿ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಲಿದ್ದೇನೆ ಎಂದರು.

ನೀರಾವರಿ, ತಂಬಾಕು ಕೃಷಿ: ತಾಲೂಕಿನ ರೈತರ ಸಮಸ್ಯೆಗಳಿಗೆ ಶೀಘ್ರ ಪರಿಹಾರ ಒದಗಿಸುವುದು ನನ್ನ ಆದ್ಯ ಕರ್ತವ್ಯವಾಗಿದೆ. ತಂಬಾಕಿಗೆ ವೈಜ್ಞಾನಿಕ ದರ ಒದಗಿಸುವುದು, ತಂಬಾಕು ಮಂಡಳಿ ನಿರ್ದೇಶಕರ ಕಚೇರಿಯನ್ನು ಬೆಂಗಳೂರಿನಿಂದ ಮೈಸೂರಿಗೆ ಸ್ಥಳಾಂತರಿಸುವ ಮತ್ತು ಪ್ರಾದೇಶಿಕ ವ್ಯವಸ್ಥಾಪಕರ ಕಚೇರಿಯನ್ನು ಮೈಸೂರಿನಿಂದ ಹುಣಸೂರಿಗೆ ಸ್ಥಳಾಂತರಿಸುವ ಕುರಿತಾದ ರೈತರ ಬಹುವರ್ಷಗಳ ಒತ್ತಾಯ ಪರಿಗಣಿಸಿದ್ದೇನೆ. ಬಿಳಿಕೆರೆ ಭಾಗದಲ್ಲಿ ನೀರಾವರಿ ಯೋಜನೆಗಳ ಜಾರಿಯಲ್ಲಿ ಕೊರತೆ ಇದ್ದು, ಕಾಲುವೆಗಳ ನಿರ್ಮಾಣ, ಕೆರೆಗಳನ್ನು ತುಂಬಿಸುವ ಕಾರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಲಿದ್ದೇನೆ ಎಂದರು.

ದುರಸ್ತಿ, ಪೋಡು, ಸಾಗುವಳಿ ಸಮಸ್ಯೆಗಳು: ಕಂದಾಯ ಮತ್ತು ಸರ್ವೇ ಇಲಾಖೆಗಳು ರೈತರ ಸಮಸ್ಯೆಗಳಿಗೆ ಪರಿಹಾರ ನೀಡಲು ಸತಾಯಿಸುತ್ತಿವೆ. ಏಕಗವಾಕ್ಷಿ ಪದ್ಧತಿ ಮೂಲಕ ರೈತರಿಗೆ ಅವಶ್ಯವಾದ ಪಹಣಿ, ಪೋಡು, ದುರಸ್ತಿಯಂತಹ ಕಾರ್ಯಗಳು ಆಗಬೇಕೆನ್ನುವುದು ನನ್ನಾಸೆ. ಗೋಮಾಳವನ್ನು ಸಾಗುವಳಿಗೆ ನೀಡುವ ಕುರಿತು ಸರ್ಕಾರದ ದ್ವಂದ್ವ ನೀತಿ ಖಂಡನೀಯ. ಜಿ.ಟಿ.ದೇವೇಗೌಡರ ಅವಧಿಯಲ್ಲಿ ತಾಲೂಕಿನ ಆಸ್ಪತ್ರೆ ಕಾವಲ್ ಸೊಸೈಟಿ ಭೂಮಿ ಹಕ್ಕುಪತ್ರ ಸಮಸ್ಯೆಗೆ ತಾರ್ಕಿಕ ಅಂತ್ಯ ನೀಡಿದ್ದರು. ಆದರೆ ಅದರ ಜಾರಿಯಲ್ಲಿ 15 ವರ್ಷಗಳೇ ಸಂದರೂ ಆಗದಿರುವುದು ಬೇಸರವಾಗಿದೆ ಎಂದರು.

ನಗರಸಭೆ ಅವಾಂತರಗಳಿಗೆ ಅಂತ್ಯ ಹಾಡಬೇಕಿದೆ: ಹುಣಸೂರು ನಗರದಾದ್ಯಂತ ಸಂಚರಿಸುವ ವೇಳೆ ನಾಗರಿಕರಿಂದ ನಗರಸಭೆ ಆಡಳಿತ ವೈಖರಿ ಕುರಿತು ಅಸಮಾಧಾನದ ಮಾತುಗಳು ಬಹುವಾಗಿ ಕೇಳಿ ಬಂದಿವೆ. ಗಂಗಾನದಿ ಶುದ್ಧೀಕರಣ ಆಗುತ್ತದೆ ಎನ್ನುವುದಾದರೆ ಲಕ್ಷ್ಮಣತೀರ್ಥ ನದಿ ಶುದ್ಧೀಕರಣ ಆಗುತ್ತಿಲ್ಲವೇಕೆ? 15 ವರ್ಷಗಳಿಂದಲೂ ಯೋಜನೆಗಳು ಹೊರ ಬೀಳುತ್ತಿವೆಯೇ ಹೊರತು ಕಾರ್ಯರೂಪ ಆಗುತ್ತಿಲ್ಲ. 15 ವರ್ಷಗಳಿಂದ ನಗರ ವ್ಯಾಪ್ತಿಯಲ್ಲಿ ಬಡವರಿಗೆ ನಿವೇಶನ ನೀಡಿಲ್ಲವೆನ್ನುವುದಾದರೆ ಅನುಮಾನದ ಪ್ರಶ್ನೆಗಳು ಜನರ ಮನದಲ್ಲಿ ಸಹಜವಾಗಿ ಮೂಡಿದೆ. ಅಕ್ರಮ ಬಡಾವಣೆಗಳ ನಿವೇಶನಕ್ಕೂ ಖಾತೆ ನೀಡುವ ಕುರಿತು ನನ್ನ ತಂದೆ ಸರ್ಕಾರದ ಮುಂದೆ ಪ್ರಸ್ತಾಪಿಸಿರುವ ಸಲಹೆಗಳು ಕಾರ್ಯರೂಪಕ್ಕೆ ಬರಲಿದ್ದು, ರಾಜ್ಯಾದ್ಯಂತ ಜಾರಿಗೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನನ್ನನ್ನು ತಾಲೂಕಿನ ಮನೆಮಗ ಎನ್ನುತ್ತಿದ್ದಾರೆ: ಬೇರೆ ಊರಿನಿಂದ ನೀವು ಬಂದಿದ್ದೀರಿ, ಸ್ಥಳೀಯರಲ್ಲ ಎನ್ನುವ ಆರೋಪಗಳನ್ನು ವಿರೋಧಿಗಳು ಮಾಡುತ್ತಿದ್ದಾರಲ್ಲ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 2010 ರಿಂದ ನನ್ನ ಕಾರ್ಯ ಕ್ಷೇತ್ರವನ್ನಾಗಿ ಹುಣಸೂರನ್ನು ಆಯ್ದುಕೊಂಡಿದ್ದೇನೆ. ಜಿಟಿಡಿ ಫೌಂಡೇಶನ್ ಮೂಲಕ ಆರೋಗ್ಯ ತಪಾಸಣೆ, ಪರಿಸರ ಕಾಳಜಿ, ವಿದ್ಯಾರ್ಥಿಗಳಿಗೆ ಕೋಚಿಂಗ್ ಕ್ಲಾಸ್ ಮಾಡಿಕೊಂಡು ಬಂದಿದ್ದೇನೆ. 2012ರಲ್ಲಿ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮೂಲಕ ನಿರ್ದೇಶಕನಾದೆ. 2013ರಲ್ಲಿ ಡಿಸಿಸಿ ನಿರ್ದೇಶಕ, 2018 ರಲ್ಲಿ ಅಧ್ಯಕ್ಷ, ನಂತರ ರಾಜ್ಯ ಅಪೆಕ್ಸ್ ಬ್ಯಾಂಕ್ ನಿರ್ದೇಶಕ ಮತ್ತು ಉಪಾಧ್ಯಕ್ಷನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಇವೆಲ್ಲವೂ ನಾನು ಹುಣಸೂರಿನ ಜನರ ಆಶೀರ್ವಾದದಿಂದಲೇ ಆಗಿದ್ದು, ಚುನಾವಣಾ ಪ್ರಚಾರಕ್ಕೆ ತೆರಳಿದ ಸಂದರ್ಭ ಜನರು ನೀನು ನಮ್ಮ ಮನೆ ಮಗ ಎಂದು ಪ್ರೀತಿ ತೋರಿ ಆಶೀರ್ವದಿಸುತ್ತಿದ್ದಾರೆ. ಹಾಗಿದ್ದಾಗ ನಾನು, ನನ್ನ ಕುಟುಂಬ ಬೇರೆ ಊರಿನವರು ಎಂದು ಹೇಳುವುದು ಸರಿಯೇ ಎಂದು ಪ್ರಶ್ನಿಸಿದರು.

ಸಹಕಾರ ಕ್ಷೇತ್ರ ವಿಶಾಲವಾದುದು: ಸಹಕಾರ ಕ್ಷೇತ್ರವನ್ನು ರಾಜಕೀಯ ಲಾಭಕ್ಕೆ ಬಳಸುತ್ತಿದ್ದೀರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಸಹಕಾರಿ ಕ್ಷೇತ್ರದ ವ್ಯಾಪ್ತಿ ವಿಶಾಲವಾಗಿದೆ. ಆ ಮೂಲಕ ನನಗೆ ರಾಜಕೀಯ ಲಾಭ ಇರಬಹುದು. ಹಾಗೆಂದ ಮಾತ್ರಕ್ಕೆ ಯಾವತ್ತೂ ಸಹಕಾರಿ ಸಿಬ್ಬಂದಿಗಳನ್ನು ರಾಜಕೀಯ ಉದ್ದೇಶಕ್ಕೆ ಬಳಸಿಲ್ಲ. ಬಳಸುವುದೂ ಇಲ್ಲ. ಸಹಕಾರಿ ಕ್ಷೇತ್ರದ ಮಹತ್ವ ಮತ್ತು ವ್ಯಾಪ್ತಿಯನ್ನು ಅರಿಯದವರು ಈ ರೀತಿ ಟೀಕಿಸಬಹುದು. ಅಷ್ಟೇ ಎಂದರು.

ಪಕ್ಷ ಬೇಧ ಮರೆತು ಸಾಲಮನ್ನಾ: ಸಹಕಾರಿ ಕ್ಷೇತ್ರದಲ್ಲಿ ಪಕ್ಷಭೇದವಿಲ್ಲ. 2013ರವರೆಗೆ ತಾಲೂಕಿಗೆ ಸಹಕಾರ ಕ್ಷೇತ್ರದಿಂದ ಗರಿಷ್ಠ 20 ಕೋಟಿ ರೂ. ಸಾಲಸೌಲಭ್ಯ ದೊರಕುತ್ತಿತ್ತು. ನಾನು ಡಿಸಿಸಿ ಬ್ಯಾಂಕ್ ಅಧ್ಯಕ್ಷನಾದ ನಂತರ(2018) ತಾಲೂಕಿಗೆ 160 ಕೋಟಿ ರೂ. ಸಾಲಸೌಲಭ್ಯ ನೀಡಿದ್ದೇನೆ. ಕುಮಾರಣ್ಣನ ಸರ್ಕಾರ ಸಾಲಮನ್ನಾ ಯೋಜನೆಯಡಿ ತಾಲೂಕಿನ 130 ಕೋಟಿ ರೂ.ಗಳ ಪೈಕಿ 122 ಕೋಟಿ ರೂ. ಸಾಲಮನ್ನಾ ಮಾಡಿದೆ. ಇದು ರಾಜಕೀಯ ಪಕ್ಷದ ಆಧಾರದಡಿ ಆದ ಮನ್ನಾ ಆಗಿಲ್ಲವೆಂದು ಸಹಕಾರಿ ಕ್ಷೇತ್ರದಲ್ಲಿ ರಾಜಕೀಯವೆಂದು ಟೀಕಿಸಿದವರಿಗೆ ಟಾಂಗ್ ನೀಡಿದರು. ತಾಲೂಕಿನಲ್ಲಿ 3 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ವ್ಯಾಪ್ತಿಯಲ್ಲಿ ಜನತಾ ಬಜಾರ್ ಸ್ಥಾಪಿಸಿದ್ದು, ಮಿಕ್ಕ 24 ಸಂಘಗಳ ವ್ಯಾಪ್ತಿಯಲ್ಲೂ ಜನತಾ ಬಜಾರ್ ಸ್ಥಾಪಿಸಲಾಗುವುದು. ಆ ಮೂಲಕ ಮಹಿಳೆಯರು ಉತ್ಪಾದಿಸಿದ ವಸ್ತುಗಳಿಗೆ ಮಾರುಕಟ್ಟೆ ಕಲ್ಪಿಸಿಕೊಡಲಾಗುವುದು ಎಂದರು.

ಹುಣಸೂರು ಉಪವಿಭಾಗವನ್ನು ಒಳಗೊಂಡು ಜಿಲ್ಲೆಯಾಗಬೇಕೆಂಬ ಕೂಗು ಹಲವು ವರ್ಷಗಳಿಂದ ಎದ್ದಿದೆ. ಜಿಲ್ಲೆಯಾಗಬೇಕೆಂಬುದಕ್ಕೆ ನನ್ನ ಬೆಂಬಲವಿದೆ. ಆದರೆ ಅದರ ಸಾಧಕ ಬಾಧಕಗಳನ್ನು ಸಮಗ್ರವಾಗಿ ಪರಿಗಣಿಸಿ ಮುಂದಡಿ ಇಡಬೇಕಿದೆ.

ನಂದಿನಿ ಕನ್ನಡಿಗರ ಹೆಮ್ಮೆ: ಕೆಎಂಎಫ್‌ನ ನಂದಿನಿಯನ್ನು ಅಮುಲ್‌ನೊಂದಿಗೆ ವಿಲೀನಗೊಳಿಸುವ ಕುರಿತು ಎದ್ದಿರುವ ವಿವಾದದ ಕುರಿತು ಉತ್ತರಿಸಿದ ಅವರು ನಂದಿನಿ ಕನ್ನಡಿಗರ ಅಸ್ಮಿತೆ, ಕನ್ನಡಿಗರ ಹೆಮ್ಮೆ. ಕೆಎಂಎಫ್ ಒಂದು ಸ್ವಾಯತ್ತ ಸಂಸ್ಥೆ. ದೇಶದಲ್ಲಿ ಅತೀ ದೊಡ್ಡ ಎರಡನೇ ಸಹಕಾರಿ ಸಂಸ್ಥೆಯಾಗಿದೆ. ಇದನ್ನು ಮತ್ತೊಂದು ಸಂಸ್ಥೆಯೊಂದಿಗೆ ವಿಲೀನಗೊಳಿಸುವುದು ಇಲ್ಲಿನ ರೈತರಿಗೆ ಅನ್ಯಾಯವೆಸಗಿದಂತೆ. ಇದನ್ನು ನಾನು ವಿರೋಧಿಸುತ್ತೇನೆ. ಕನ್ನಡಿಗರ ಸ್ವಾಭಿಮಾನವನ್ನು ಪ್ರಶ್ನಿಸಿದಂತೆ ಆಗಲಿದೆ. ಯಾವುದೇ ಸರ್ಕಾರ ಇಂತಹ ಕ್ರಮಕ್ಕೆ ಮುಂದಾಗಬಾರದು ಎಂದರು.

ಆದಿವಾಸಿಗಳ ಸಮಸ್ಯೆ, ಕಾಡಂಚಿನ ರೈತರ ಕೂಗು: ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ದಂಚಿನಲ್ಲಿರುವ ರೈತರ ಜಮೀನುಗಳ ಸಮಸ್ಯೆ ಪರಿಹಾರವಾಗಬೇಕಿದೆ. ಸ್ಪಷ್ಟತೆಯಿಲ್ಲದೇ ರೈತರು ತೊಂದರೆಗೆ ಸಿಲುಕಿದ್ದಾರೆ. ತಾಲೂಕಿನಲ್ಲಿ ಆದಿವಾಸಿಗಳ ಸಮಸ್ಯೆ ಜ್ವಲಂತವಾಗಿದ್ದು, ಪರಿಹಾರಕ್ಕಾಗಿ ಸರ್ಕಾರದ ಮಟ್ಟದಲ್ಲಿ ದನಿಯೆತ್ತುವ ಅವಶ್ಯಕತೆಯಿದೆ ಎಂದರು. ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಕೃಷ್ಣಕುಮಾರ್, ಪ್ರಧಾನ ಕಾರ್ಯದರ್ಶಿ ನೇರಳಕುಪ್ಪೆ ಮಹದೇವ್ ಹಾಜರಿದ್ದರು.

ನ್ಯಾಯದಾನ ಮಾಡಬೇಕಾದ ನ್ಯಾಯಾಂಗ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ...

• ನಿವೃತ್ತ ಲೋಕಾಯುಕ್ತ ನ್ಯಾ.ಎನ್.ಸಂತೋಷ್ ಹೆಗ್ಡೆ ವಿಷಾದ • ಇದು ಸಮಾಜಕ್ಕೆ ಅತ್ಯಂತ ಮಾರಕ; ಭ್ರಷ್ಟಾಚಾರ ಈಗ ಸರ್ವವ್ಯಾಪಿ

ಮೈಸೂರು, ಏ.11(ಎಂಟಿವೈ)– ನೊಂದವರಿಗೆ ನ್ಯಾಯದಾನ ಮಾಡಬೇಕಾದ ನ್ಯಾಯಾಂಗ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ಕಂಡು ಬರುತ್ತಿರುವುದು ಸಮಾಜಕ್ಕೆ ಮಾರಕ ಎಂದು ನಿವೃತ್ತ ಲೋಕಾಯುಕ್ತ ನ್ಯಾ.ಎನ್. ಸಂತೋಷ್ ಹೆಗ್ಡೆ ವಿಷಾದಿಸಿದ್ದಾರೆ.



ಮೈಸೂರಿನ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಮಂಗಳವಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಆಯೋಜಿಸಿದ್ದ ವಿಜ್ಞಾನ–ತಂತ್ರಜ್ಞಾನ ಕನ್ನಡೋತ್ಸವದ ಸಮಾರೋಪ ಸಮಾರಂಭದಲ್ಲಿ ನಿವೃತ್ತ ಲೋಕಾಯುಕ್ತ ನ್ಯಾ.ಎನ್.ಸಂತೋಷ್ ಹೆಗ್ಡೆ ಮಾತನಾಡಿದರು.

ಮೈಸೂರಿನ ಹೊರವಲಯದ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಮಂಗಳವಾರ ಮಧ್ಯಾಹ್ನ ಆಯೋಜಿಸಿದ್ದ ವಿಜ್ಞಾನ–ತಂತ್ರಜ್ಞಾನ ಕನ್ನಡೋತ್ಸವದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಸಂವಿಧಾನದ ಆಧಾರಸ್ತಂಭಗಳಾದ ಕಾರ್ಯಾಂಗ, ಶಾಸಕಾಂಗದಂತೆ ನ್ಯಾಯಾಂಗದಲ್ಲೂ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಈ ಮೂರು ವ್ಯವಸ್ಥೆಯಲ್ಲಿರುವ ಸಿಬ್ಬಂದಿಗಳಾರು ಸ್ವರ್ಗಲೋಕದಿಂದ ಬಂದಿರುವವರಲ್ಲ. ಅವರು ಎಲ್ಲರಂತೆ ನಮ್ಮ ಸಮುದಾಯದಲ್ಲಿರುವವರೇ ಆಗಿದ್ದಾರೆ. ಹಾಗಾಗಿ, ಅಲ್ಲಿಯೂ ಲಂಚಾವತಾರ ನುಸುಳಿದೆ. ಪ್ರತಿಯೊಬ್ಬರಲ್ಲೂ ದುರಾಸೆ ಎಂಬ ರೋಗ ಹೆಚ್ಚಾಗುತ್ತಿದೆ. ಇದಕ್ಕೆ ಮದ್ದು, ಮಿತಿಯೂ ಇಲ್ಲದಂತಾಗಿದೆ. ಯಾವುದೇ ಕಾನೂನಿನ ಹಿಡಿತಕ್ಕೂ ಸಿಗುತ್ತಿಲ್ಲ. ಭ್ರಷ್ಟಾಚಾರಕ್ಕೆ ಚೀನಾದಲ್ಲಿ ಗಲ್ಲು ಶಿಕ್ಷೆ ವಿಧಿಸಿದರೆ, ಭಾರತದಲ್ಲಿ 7 ವರ್ಷ ಜೈಲು ಶಿಕ್ಷೆ ಇದೆ. ಇದರಿಂದ ನಮ್ಮಲ್ಲಿ ಭ್ರಷ್ಟರಿಗೆ ಕಾನೂನು, ಶಿಕ್ಷೆಯ ಭಯವಿಲ್ಲದಂತಾಗಿದೆ. ಈ ಕಾರಣದಿಂದ ಭ್ರಷ್ಟಾಚಾರ ಸರ್ವವ್ಯಾಪಿಯಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

> “ಆಡಳಿತ ನಡೆಸುವ ಎಲ್ಲ ಸರ್ಕಾರದಲ್ಲೂ ಭ್ರಷ್ಟಾಚಾರ ಇದ್ದೇ ಇರುತ್ತದೆ. ಹಿಂದಿನ ಸರ್ಕಾರದಲ್ಲಿ ಶೇ.20ರಷ್ಟು ಕಮಿಷನ್ ಇದ್ದರೆ, ಈಗಿನ ಸರ್ಕಾರದಲ್ಲಿ ಶೇ.40ರಷ್ಟು ಕಮಿಷನ್ ಇದೆ. ಅದರಲ್ಲಿ ವ್ಯತ್ಯಾಸವಿಲ್ಲ. ಇದು ಹೆಚ್ಚಾಗುತ್ತಲೇ ಹೋಗುತ್ತದೆ ಹೊರತು, ಕಡಿಮೆಯಾಗುವುದಿಲ್ಲ. ಗಾದೆ ಮಾತಿನಂತೆ ಅಡಿಕೆ ಕದ್ದರೂ ಕಳ್ಳನೇ, ಆನೆ ಕದ್ದರೂ ಕಳ್ಳನೇ. ಭ್ರಷ್ಟಾಚಾರದಲ್ಲಿ ಹೆಚ್ಚು–ಕಡಿಮೆ ಎನ್ನುವುದಿಲ್ಲ. ಕದ್ದ ಹಣಕ್ಕೆ ಜಾತಿ, ಧರ್ಮ, ಪಕ್ಷಗಳಿಲ್ಲ. **–ಸಂತೋಷ್ ಹೆಗ್ಡೆ**

ಸ್ವಯಂ ತೃಪ್ತಿ ಇದ್ದಾಗ ಮಾತ್ರ ಭ್ರಷ್ಟಾಚಾರ, ಲಂಚಗುಳಿತನಕ್ಕೆ ಕಡಿವಾಣ ಹಾಕಬಹುದು. ಭ್ರಷ್ಟ ವ್ಯವಸ್ಥೆ ಬದಲಾವಣೆ ಯುವ ಜನರಿಂದ ಮಾತ್ರ ಸಾಧ್ಯ. ಪ್ರತಿಯೊಬ್ಬರು ಬದಲಾವಣೆಗೆ ಕೈಜೋಡಿಸಬೇಕು. ಯುವ ಜನರು ದಾರಿ ತಪ್ಪಿದರೆ, ಭ್ರಷ್ಟಾಚಾರಿಗಳ ಸಂಖ್ಯೆ ಇನ್ನಷ್ಟು ಹೆಚ್ಚಾಗಲಿದೆ. ಆಗ ಸಮಾಜದಲ್ಲಿ ಶಾಂತಿ–ನೆಮ್ಮದಿ ನಿರ್ಮಾಣ ಅಸಾಧ್ಯ ಎಂದರು.

ರಾಷ್ಟ್ರಪತಿಯಿಂದ ಹಿಡಿದು ಜವಾನನವರೆಗೆ, ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಿಂದ ಹಿಡಿದು ಕೆಳಹಂತದ ನೌಕರರವರೆಗೂ ಎಲ್ಲರೂ ಜನರ ಸೇವಕರು. ಇವರ್‍ಯಾರು ಜನರ ಮಾಲೀಕರಲ್ಲ. ಆದರೀಗ ಸೇವೆ ಮಾಡುವವರು ಅಧಿಕಾರವನ್ನು ಚಲಾಯಿಸುತ್ತಿದ್ದಾರೆ, ಪ್ರದರ್ಶಿಸುತ್ತಿದ್ದಾರೆ. ಮಾನವೀಯತೆ ಬೆಳೆಸಿಕೊಳ್ಳದಿದ್ದರೆ ಕನ್ನಡಿಗರು ಆಗಲ್ಲ. ಇದೀಗ ನೀತಿ– ನೈತಿಕತೆ ಯಾರಿಗೂ ಬೇಡವಾಗಿದೆ. ಇದು ಸರಿಯಲ್ಲ. ಯುವ ಜನರು ಮಾನವೀಯತೆ, ನೈತಿಕ ಗುಣವನ್ನು ಮೈಗೂಡಿಸಿಕೊಳ್ಳಬೇಕು ಎಂದರು. ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಾಜಿ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ, ಉಪಾಧ್ಯಕ್ಷ ಜಾಕೀರ್ ಹುಸೇನ್, ಮುಖಂಡ ಡಾ.ಕೆ.ರಘುರಾಮ್ ವಾಜಪೇಯಿ ಇನ್ನಿತರರು ಉಪಸ್ಥಿತರಿದ್ದರು.

ಏ.14ರಂದು ಡಾ.ಅಂಬೇಡ್ಕರ್ ಜಯಂತಿ ಆಚರಣೆ



ಮೈಸೂರು,ಏ.11–ಜಿಲ್ಲಾಡಳಿತ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ 132ನೇ ಜನ್ಮದಿನಾಚರಣೆ ಅಂಗವಾಗಿ ಏ.14ರಂದು ಬೆಳಗ್ಗೆ 9.30 ಗಂಟೆಗೆ ಟೌನ್‌ಹಾಲ್‌ನಲ್ಲಿರುವ ಡಾ.ಅಂಬೇಡ್ಕರ್ ಅವರ ಪ್ರತಿಮೆಗೆ ಪುಷ್ಪಾರ್ಚನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿಗಳೂ ಆದ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ಅಧ್ಯಕ್ಷ ಡಾ.ಕೆ.ವಿ.ರಾಜೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಭಾರತೀಯ ಜನತಾ ಪಾರ್ಟಿ ಅಭ್ಯರ್ಥಿಯಾಗಿ ಆಯ್ಕೆಯಾದ ಕವಿಶ್‌ಗೌಡ ಅವರನ್ನು ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಬಿ.ಎಂ.ರಘು, ಮುಖಂಡರಾದ ವೇದರಾಜ್, ಶಿವಕುಮಾರ್, ಲೋಕೇಶ್, ಪ್ರತಾಪ್ ಇನ್ನಿತರರು ಅವರ ನಿವಾಸದಲ್ಲಿ ಭೇಟಿಯಾಗಿ ಆತ್ಮೀಯವಾಗಿ ಅಭಿನಂದಿಸಿದರು.

ಇಂದು ಟಿಬೆಟಿಯನ್ನರ ಜಾನಪದ ನೃತ್ಯ ಪ್ರದರ್ಶನ

ಮೈಸೂರು,ಏ.11(ಪಿಎಂ)– ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು, ಟಿಬೆಟಿಯನ್ ಇನ್ಸ್‌ಟಿಟ್ಯೂಟ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್ ಮತ್ತು ಇಂಡೋ ಟಿಬೆಟಿಯನ್ ಫ್ರೆಂಡ್‌ಶಿಪ್ ಸೊಸೈಟಿ ಸಂಯುಕ್ತಾಶ್ರಯದಲ್ಲಿ ಹಿಮಾಚಲ ಪ್ರದೇಶದ ಧರ್ಮಶಾಲಾ ಟಿಬೆಟಿಯನ್ನರ ಸಾಂಸ್ಕೃತಿಕ ತಂಡದಿಂದ ಟಿಬೆಟಿಯನ್ನರ ಜಾನಪದ ನೃತ್ಯ ಪ್ರದರ್ಶನ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ವಿದ್ಯಾವರ್ಧಕ ಸಂಘದ ಖಜಾಂಚಿ ಶ್ರೀಶೈಲ ರಾಮಣ್ಣವರ್ ತಿಳಿಸಿದರು. ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 2ಕ್ಕೆ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಸಾಹುಕಾರ್ ಚೆನ್ನಯ್ಯ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದೆ. 32 ಮಂದಿ ಕಲಾವಿದರು ಪ್ರದರ್ಶನ ನೀಡಲಿದ್ದಾರೆ. ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ ಎಂದರು. ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕ ಡಾ.ಜಗದೀಶ್, ಕೇಂದ್ರೀಯ ಟಿಬೆಟಿಯನ್ ಆಡಳಿತದ ದಕ್ಷಿಣ ವಲಯ ಬೆಂಗಳೂರಿನ ಮುಖ್ಯ ಪ್ರತಿನಿಧಿ ಜಿಗ್ಮಿ ಸುಲ್ಟ್ರಿಮ್, ಟಿಬೆಟಿಯನ್ ಯುವತಿ ತೆನ್ಸಿನ್ ಛೋಡಾನ್ ಗೋಷ್ಠಿಯಲ್ಲಿದ್ದರು.



ಇಂದಿನಿಂದ ರಿಫ್ಲೆಕ್ಸೋಲಾಜಿ ಉಚಿತ ಚಿಕಿತ್ಸಾ ಶಿಬಿರ

ಮೈಸೂರು,ಏ.11(ಪಿಎಂ)– ರೋಟರಿ ಮೈಸೂರು ಉತ್ತರ ಮತ್ತು ರೋಟರಿ ಮೈಸೂರು ಸ್ವಾರ್ಸ್‌ನ ಜಂಟಿ ಆಶ್ರಯದಲ್ಲಿ ಏ.12ರಿಂದ 17ರವರೆಗೆ ರಿಫ್ಲೆಕ್ಸೋಲಾಜಿ, ಸುಜೋಕ್ ಮ್ಯಾಗ್ನೆಟ್ ಮತ್ತು ವೈಬ್ರೇಷನ್ ಥೆರಪಿಯ ಉಚಿತ ಚಿಕಿತ್ಸಾ ಶಿಬಿರ ಏರ್ಪಡಿಸಲಾಗಿದೆ ಎಂದು ರೋಟರಿ ಮೈಸೂರು ಉತ್ತರದ ಅಧ್ಯಕ್ಷ ಡಾ.ಎಸ್.ಹೆಚ್.ಜಗದೀಶ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ವಿಜಯನಗರದ ರೋಟರಿ ಭವನದಲ್ಲಿ ಪ್ರತಿದಿನ ಬೆಳಗ್ಗೆ 9ರಿಂದ ಸಂಜೆ 4ರವರೆಗೆ ಶಿಬಿರ ನಡೆಯಲಿದೆ. ರಿಫ್ಲೆಕ್ಸೋಲಾಜಿ ಚಿಕಿತ್ಸಾ ಪದ್ಧತಿಯು ಪ್ರಾಕೃತಿಕ ಚಿಕಿತ್ಸೆಯ ಒಂದು ಅಂಗ. ಈ ಚಿಕಿತ್ಸೆಯಿಂದ ಶರೀರದ ರಕ್ತ ಚಲನೆಯ ಮೇಲೆ ಪ್ರಭಾವ ಉಂಟು ಮಾಡಿ ಯಾವುದೇ ಔಷಧಗಳ ಸೇವನೆಯಿಲ್ಲದೆ ಗುಣಮುಖರಾಗಲು ಸಹಕರಿಸುತ್ತದೆ ಎಂದರು. ರೋಟರಿ ಪದಾಧಿಕಾರಿಗಳಾದ ರಾಜಶೇಖರ ಕದಂಬ, ರಾಜಶೇಖರ ಮೂರ್ತಿ, ಲೋಕನಾಥ್, ಸಂತೋಷ್ ಎಸ್.ಗೌಡ ಮತ್ತಿತರರು ಗೋಷ್ಠಿಯಲ್ಲಿದ್ದರು.

ಮೈಸೂರು ಬಸ್ ನಿಲ್ದಾಣದಲ್ಲಿ ಬೆಳಗಾವಿ ಮಹಿಳೆ ರಕ್ಷಣೆ

ಮೈಸೂರು, ಏ. 11 (ಆರ್‌ಕೆ)– ಬೆಳಗಾವಿ ಮಹಿಳೆಯೊಬ್ಬರನ್ನು ಮೈಸೂರಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಲಷ್ಕರ್ ಠಾಣೆ ಪೊಲೀಸರು ರಕ್ಷಿಸಿದ್ದಾರೆ.

ಮುಂಜಾನೆ 4 ಗಂಟೆಗೆ ಸಾರಿಗೆ ಬಸ್ಸಿನಲ್ಲಿ ಬಂದಿಳಿದ ಮಹಿಳೆ, ಎಲ್ಲಿಗೆ ಹೋಗಬೇಕೆಂದು ತೋಚದೆ, ನಿತ್ರಾಣಗೊಂಡು ಪರದಾಡುತ್ತಿದ್ದನ್ನು ಗಮನಿಸಿದ ಸಾರ್ವಜನಿಕರು, ಲಷ್ಕರ್ ಪೊಲೀಸರಿಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಬಂದ ಇನ್ಸ್‌ಪೆಕ್ಟರ್ ಪಿ.ಪಿ. ಸಂತೋಷ್ ಆಕೆಗೆ ಉಪಾಹಾರ ಕೊಡಿಸಿ, ಠಾಣೆಗೆ ಕರೆತಂದು ಮಹಿಳಾ ಸಿಬ್ಬಂದಿ ಮೂಲಕ ವಿಚಾರಣೆ ನಡೆಸಿದಾಗ ಆಕೆ ಬೆಳಗಾವಿ ಮೂಲದವ ರಾಗಿದ್ದು, ಗಂಡ, ಮಕ್ಕಳು ನಿರ್ಲಕ್ಷಿಸಿದ್ದರಿಂದ ಮನೆ ಬಿಟ್ಟು ಬಂದಿದ್ದಾಗಿ ತಿಳಿಸಿದರು. ವೃದ್ಧಾಶ್ರಮಕ್ಕೆ ಕಳುಹಿಸಲು ಪೊಲೀಸರು ವ್ಯವಸ್ಥೆ ಮಾಡುತ್ತಿರುವಾಗಲೇ ಆ ಮಹಿಳೆ ತಾನು ವೃದ್ಧಾಶ್ರಮಕ್ಕೆ ಹೋಗುವುದಿಲ್ಲ. ಕೋಲಾರದಲ್ಲಿ ನಮ್ಮ ಸಂಬಂಧಿಕರಿದ್ದಾರೆ. ನನ್ನನ್ನು ಅಲ್ಲಿಗೆ ಕಳುಹಿಸಿಕೊಡಿ ಎಂದು ಕೇಳಿಕೊಂಡರು. ಹಾಗಾಗಿ ಲಿಖಿತ ಹೇಳಿಕೆ ಪಡೆದುಕೊಂಡು ಆಕೆಯನ್ನು ಬಸ್ ಸ್ಟ್ಯಾಂಡಿಗೆ ಕರೆ ದೊಯ್ದು ಕೋಲಾರ ಬಸ್‌ನಲ್ಲಿ ಕೂರಿಸಿ ಕಂಡಕ್ಟರ್ ಮತ್ತು ಡ್ರೈವರ್‌ಗೆ ನಿಗಾ ವಹಿಸುವಂತೆ ಹೇಳಿ ಕಳುಹಿಸಿಕೊಟ್ಟು ಪೊಲೀಸರು ಮಾನವೀಯತೆ ಮೆರೆದಿದ್ದಾರೆ.

ಕಟ್ಟಡದಿಂದ ಬಿದ್ದು ಅಪರಿಚಿತ ವ್ಯಕ್ತಿ ಸಾವು

ಮೈಸೂರು,ಏ.11(ಆರ್‌ಕೆ)–ಅಪರಿಚಿತ ವ್ಯಕ್ತಿಯೋರ್ವ ಹೋಟೆಲ್ ಕಟ್ಟಡದ ಮಹಡಿಯಿಂದ ಬಿದ್ದು ಸಾವನ್ನಪ್ಪಿರುವ ಘಟನೆ ಮೈಸೂರಿನ ಲಷ್ಕರ್ ಮೊಹಲ್ಲಾದಲ್ಲಿ ಏ.9ರಂದು ಸಂಜೆ ಸಂಭವಿಸಿದೆ. ಅಂದು ಮಧ್ಯಾಹ್ನ 3–4 ಗಂಟೆಯಲ್ಲಿ ಸೇಂಟ್ ಫಿಲೋಮಿನಾ ಚರ್ಚ್ ಬಳಿ ಇರುವ ಹೋಟೆಲ್ ಪ್ಲಾಜಾಗೆ ಬಂದ ಸುಮಾರು 25ರಿಂದ 30 ವರ್ಷದ ವ್ಯಕ್ತಿ ಕೊಠಡಿ ಬಾಡಿಗೆಗೆ ಬೇಕು ಎಂದು ಕೇಳಿದ. 2ನೇ ಮಹಡಿಗೆ ಕರೆದೊಯ್ದು ರೂಮ್ ತೋರಿಸಿದರೂ ಆತ ಏನನ್ನೂ ಹೇಳದೆ ಹೊರಗೆ ಹೋಗಿದ್ದ.

ಅದಾದ ಐದೇ ನಿಮಿಷದಲ್ಲಿ ಆ ವ್ಯಕ್ತಿ ಹೋಟೆಲ್ ಕಟ್ಟಡದ ಕೊನೆ ಮಹಡಿಯಿಂದ ಕೆಳಕ್ಕೆ ಬಿದ್ದಿದ್ದನ್ನು ಕಂಡ ಸಿಬ್ಬಂದಿ ತಕ್ಷಣ ಕೆ.ಆರ್. ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿ ದರಾದರೂ ಆತ ಸಾವನ್ನಪ್ಪಿದ್ದಾನೆ ಎಂದು ಲಷ್ಕರ್ ಠಾಣೆ ಪೊಲೀಸರು ತಿಳಿಸಿದ್ದಾರೆ. 5.7 ಅಡಿ ಎತ್ತರ, ದೃಢಕಾಯ ಶರೀರ, ದುಂಡುಮುಖ, ಗೋಧಿ ಮೈಬಣ್ಣ ಹೊಂದಿರುವ ಅಪರಿಚಿತ ವ್ಯಕ್ತಿಯ ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿರಿಸಲಾಗಿದೆ. ವಾರಸುದಾರರಿದ್ದಲ್ಲಿ ಲಷ್ಕರ್ ಪೊಲೀಸ್ ಠಾಣೆ (0821–2418307) ಅಥವಾ ನಗರ ಪೊಲೀಸ್ ಕಂಟ್ರೋಲ್ ರೂಂ (0821–2418339) ಸಂಪರ್ಕಿಸುವಂತೆ ಕೋರಲಾಗಿದೆ.

ಕಾಂಗ್ರೆಸ್‌ಗೆ ನೇಮಕ

ಮೈಸೂರು, ಏ. 11– ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಸಹ ಸಂಚಾಲಕರನ್ನಾಗಿ ಮೈಸೂರಿನ ಗಾಂಧಿನಗರದ ಎಂ. ಸಿದ್ದರಾಜು ಅವರನ್ನು ನೇಮಕ ಮಾಡಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಿಧನ

ಹೆಚ್.ಕೆ. ರಂಗರಾವ್



ಮೈಸೂರು,ಏ. 11– ಮೈಸೂರು ನಗರದ ಚಾಮರಾಜ ಮೊಹಲ್ಲಾ ನಿವಾಸಿ ಹೆಚ್.ಕೆ. ರಂಗರಾವ್ (101) ಸೋಮವಾರ ರಾತ್ರಿ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಿದ್ದರಾಜು



ಮೈಸೂರಿನ ಹೆಬ್ಬಾಳ್ 1ನೇ ಹಂತದ ಸುಭಾಷ್ ನಗರದ ನಿವಾಸಿ, ಬೃಂದಾವನ ಬಡಾವಣೆಯ ಬೃಂದಾವನ ಪ್ರೌಢಶಾಲೆಯ ನಿವೃತ್ತ ಅಟೆಂಡರ್ ಸಿದ್ದರಾಜು (72) ಮಂಗಳವಾರ ನಿಧನರಾದರು.

ಮೃತರಿಗೆ ಪತ್ನಿ ಜಯಮ್ಮ, ಓರ್ವ ಪುತ್ರ ಚಂದ್ರಶೇಖರ್, ಸೊಸೆಯಂದಿರು, ಮೊಮ್ಮಕ್ಕಳು ಇದ್ದಾರೆ. ಕಳೆದ 5 ತಿಂಗಳ ಹಿಂದಷ್ಟೆ ಇವರ ದ್ವಿತೀಯ ಪುತ್ರ ಪತ್ರಿಕಾ ವಿತರಕರಾಗಿದ್ದ ಎಸ್.ನಾಗರಾಜ್ ನಿಧನರಾಗಿದ್ದರು. ಮೃತರು ಹೆಬ್ಬಾಳ್ ಮುಖ್ಯರಸ್ತೆಯಲ್ಲಿ ಪತ್ರಿಕೆ ಮಾರಾಟದ ಅಂಗಡಿ ಇಟ್ಟುಕೊಂಡಿದ್ದರು. ಮೃತರ ಅಂತ್ಯಸಂಸ್ಕಾರ ಬುಧವಾರ ಬೆಳಗ್ಗೆ 11ಕ್ಕೆ ನೆರವೇರಲಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.4.2023 ಬುಧವಾರ, ಮಳೆ ನಕ್ಷತ್ರ: ರೇವತಿ, 31.03.2023 ರಿಂದ 13.04.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಮೂಲ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಶಾರದಾ ವಿಲಾಸ ಫಾರ್ಮಸಿ ಕಾಲೇಜು :** ವಿಶ್ವ ಆರೋಗ್ಯ ದಿನಾಚರಣೆ, ಮುಖ್ಯ ಅತಿಥಿಗಳು : ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಎನ್. ಚಂದ್ರಶೇಖರ್, ಎನ್‌ಐಇ ಎಲೆಕ್ಟ್ರಾನಿಕ್ಸ್ ಮತ್ತು ಸಂವಹನ ವಿಭಾಗದ ಮುಖ್ಯಸ್ಥರಾದ ಡಾ. ಎಸ್. ಪರಮೇಶ್ವರ, ಅಧ್ಯಕ್ಷತೆ : ಶಾರದಾ ವಿಲಾಸ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ. ಹನುಮಂತಾಚಾರ್ ಜೋಶಿ, ಸ್ಥಳ: ಪ್ರೊ. ಎಸ್. ಚಿನ್ನಸ್ವಾಮಿ ಶೆಟ್ಟಿ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಭೀಮಸೇನಾಚಾರ್ಯ ಪಾಂಡುರಂಗಿ ಅವರಿಂದ ಭಗವದ್ಗೀತೆ ಪ್ರವಚನ – ಅಧ್ಯಾಯ 7 ಕುರಿತು ಪ್ರವಚನ, ಸ್ಥಳ: ಶ್ರೀರಾಯರ ಮಠ, ಜಯಲಕ್ಷ್ಮಿಪುರಂ, ಸಂಜೆ 5 ಗಂಟೆಗೆ

■ **ಅದಮ್ಯ ರಂಗಶಾಲೆ :** ಬಾಲಂಗೋಚಿ ಪಟಾಣಿಗಳ ಪಂಡಾಟ ಮಕ್ಕಳ ಬೇಸಿಗೆ ಶಿಬಿರ, ಉದ್ಘಾಟನೆ : ಕರ್ನಾಟಕ ಕಾವಲು ಪಡೆ ರಾಜ್ಯಾಧ್ಯಕ್ಷ ಎಂ. ಮೋಹನ್‌ಕುಮಾರ್‌ಗೌಡ, ಅಧ್ಯಕ್ಷತೆ : ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ನಿಕಟಪೂರ್ವ ರಾಜ್ಯಾಧ್ಯಕ್ಷ ಹೆಚ್.ಕೆ. ರಾಮು, ಮುಖ್ಯ ಅತಿಥಿಗಳು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ನಿವೃತ್ತ ಉಪ ನಿರ್ದೇಶಕರಾದ ಶ್ರೀಮತಿ ಮಂಜುಳಾ ಮಿರ್ಲೆ, ಅದಮ್ಯ ರಂಗಶಾಲೆ ಕಾರ್ಯದರ್ಶಿ ಟಿ. ಸತೀಶ್ ಜವರೇಗೌಡ, ಸ್ಥಳ: ಕುವೆಂಪು ರಂಗಮಂದಿರ, ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಜಯಲಕ್ಷ್ಮಿಪುರಂ, ಸಂಜೆ 6ಕ್ಕೆ.


■ **ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಇಂಜಿನಿಯರ್ ಹೆಚ್. ಗುರುಪ್ರಸಾದ್ ಅವರಿಂದ ಎ.ಸಿ. ಮೋಟಾರ್ಸ್ ಫಾರ್ ಇಂಡಸ್ಟ್ರಿಯಲ್ ಅಪ್ಲಿಕೇಷನ್ಸ್ ಕುರಿತು ಉಪನ್ಯಾಸ, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಶ್ರೀ ಉತ್ತರಾದಿ ಮಠ ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಶ್ರೀ ಭಗವದ್ಗೀತಾ ಅಭಿಯಾನದ ಅಂಗವಾಗಿ ಪಂಡಿತ್ ಭೀಮಸೇನಾಚಾರ್ಯ ಪಾಂಡುರಂಗಿ ಅವರಿಂದ ಭಗವದ್ಗೀತೆ ಪ್ರವಚನ – ಅಧ್ಯಾಯ 7 ಕುರಿತು ಪ್ರವಚನ, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ, ಅಗ್ರಹಾರ, ಸಂಜೆ 6.30 ರಿಂದ.

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ :** ಶಯನೋತ್ಸವ, ವಿದುಷಿ ಪೂಜಾ ಸುಗಮ್ ಮತ್ತು ವೃಂದದವರಿಂದ ದೇವರನಾಮ ಕಾರ್ಯಕ್ರಮ, ಸ್ಥಳ: ಶ್ರೀರಾಮ ಮಂದಿರ, ಶ್ರೀರಾಮಪೇಟೆ, ಸಂಜೆ 6.30ಕ್ಕೆ

■ **ಶ್ರೀರಾಮ ಮಂದಿರ :** ಶ್ರೀ ರಾಮನವಮಿ, ಬೆಳಗ್ಗೆ ಶ್ರೀ ರಾಮತಾರಕ ಹೋಮ, ಸಂಜೆ 6.30ಕ್ಕೆ ವಿದ್ವಾನ್ ಡಾ. ರಾ.ಸ. ನಂದಕುಮಾರ್ ಅವರಿಂದ ಸಂಗೀತ, ಸ್ಥಳ: ಶ್ರೀರಾಮ ಮಂದಿರ, ಜಯನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.40 ಅರಿವಿನ ಶಿಖರ, ಗಾಯನ–ಅಂಬಯ್ಯನುಲಿ, ಸದಾಶಿವ ಪಾಟೀಲ್,ಟಿ.ಎಸ್. ಸ್ನೇಹಾ, ವ್ಯಾಖ್ಯಾನ–ಡಾ.ಹೆಚ್.ಎಂ. ಕಲಾಶ್ರೀ, 8.30 ಜನಪದ ರೂಪಕ "ನೆಲದ ಹಾಡು", 9.00 ವೃತ್ತಿ ಮಾರ್ಗದರ್ಶನ–ಗ್ರಾಮೀಣ ಅಭಿವೃದ್ಧಿ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಮತ್ತು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿನ ಅಧ್ಯಯನ ಅನುಭವಗಳು ಕುರಿತು ಪ್ರಶಾಂ ಎಸ್. ಚಿನ್ನಪ್ಪನವರ್ ಅವರೊಂದಿಗೆ ಮಾತುಕತೆ, 10.00 ಹಿಂದೂಸ್ಥಾನಿ ಸಂಗೀತ–ಇಮ್ರತ್ ಖಾನ್–ಸಿತಾರ್, 11.00 ಸ್ಪೆಷಲ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳೀಮಠ್ ಮತ್ತು ಕೆ.ಬಿ. ಮೀನಾ

ಮಧ್ಯಾಹ್ನ: 12.00 ಮಿಶ್ರ ಮಾಧುರ್ಯ, 12.30 ದೇವರನಾಮ–ವಿದ್ಯಾಭೂಷಣ, ವಾಣಿ ಅರವಿಂದ್, 12.45 ಕನ್ನಡಿಯಲ್ಲಿ ಕಂಡಂತೆ ಮಾಲಿಕೆಯಲ್ಲಿ ಪ್ರಹಸನ "ಅಜ್ಜಿ ಮತ್ತು ಆಟದ ಸಾಮಾನು", ರಚನೆ– ಇ.ಆರ್. ರಾಮಚಂದ್ರನ್, ನಿರ್ಮಾಣ– ಪ್ರಭುಸ್ವಾಮಿ ಮಳಿಮಠ್, 1.00 ರಂಗಗೀತೆಗಳು –ನಿರ್ದೋಷಿ ನಾಟಕದ ಹಾಡುಗಳು, 1.20 ಭಾವಗೀತೆ–ಪಂಚಮ್ ಹಳಿಬಂಡಿ, ಎಂ.ಕೆ. ಜಯಶ್ರೀ, 3.00 ಲಯ ಸಂಭ್ರಮ –"ತಾಳ ಮತ್ತು ವಿವಿಧ ಲಯ ವಾದ್ಯಗಳ ಪರಿಚಯ", ಪ್ರಸ್ತುತಿ– ಹೆಚ್.ಎಲ್. ಶಿವಶಂಕರಸ್ವಾಮಿ, 4.00 ಮಹಿಳಾರಂಗ–ಸ್ತ್ರೀ ಚೇತನ. ಉಪನ್ಯಾಸಕಿ, ಲೇಖಕಿ ಸುಧಾ ಜಿ. ಅವರೊಂದಿಗೆ ಮಾತುಕತೆ, 5.05 ಮಿಶ್ರ ಮಾಧುರ್ಯ, 6.50 ಕೃಷಿರಂಗ–ಕಿಸಾನ್‌ವಾಣಿ–ಕೋಳಿ ಸಾಕಾಣಿಕೆಯಲ್ಲಿನ ಅನುಭವ ಕುರಿತು ಎನ್. ಭಾಸ್ಕರ್ ಅವರೊಂದಿಗೆ ಸಂದರ್ಶನ, 9.30 ಹಿಂದೂಸ್ಥಾನಿ ಸಂಗೀತ–ಪಂಡಿತ್ ರಾಂ ಬಾವು ಬಿಜಾಪುರೇ–ಹಾರ್ಮೋನಿಯಂ, 10.00 ಜನಪದ ಸಂಗೀತ–ಡಾ. ಪಿ.ಕೆ. ರಾಜಶೇಖರ್ ಮತ್ತು ವೃಂದ

ದೇವರಾಜ ಅರಸು ರಸ್ತೆಗೆ ಗುಣಮಟ್ಟದ ಡಾಂಬರೀಕರಣ

ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಭರವಸೆ

ಮೈಸೂರು, ಏ.11(ಎಂಕೆ)– ಡಿ.ದೇವರಾಜ ಅರಸು ರಸ್ತೆ ಡಾಂಬರೀಕರಣ ವ್ಯವಸ್ಥಿತವಾಗಿ ನಡೆದಿಲ್ಲ ಎಂಬುದು ಗಮನಕ್ಕೆ ಬಂದ ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ಡಾಂಬರೀಕರಣವಾಗಿದ್ದ ಅಷ್ಟನ್ನೂ ತೆರವುಗೊಳಿಸಲಾಗಿದೆ ಎಂದು ಶಾಸಕ ಎಲ್.ನಾಗೇಂದ್ರ ಸ್ಪಷ್ಟಪಡಿಸಿದ್ದಾರೆ. ಏ.11ರ 'ಮೈಸೂರು ಮಿತ್ರ' ಸಂಚಿಕೆಯಲ್ಲಿ **'ರಾತ್ರೋರಾತ್ರಿ ದೇವರಾಜ ಅರಸು ರಸ್ತೆ ಡಾಂಬರೀಕರಣ: ಬೆಳಗ್ಗೆ ನೋಡಿದರೆ ಸಂಪೂರ್ಣ ಕಳಪೆ ಕಾಮಗಾರಿ'** ಶೀರ್ಷಿಕೆಯಡಿ ಸುದ್ದಿ ಪ್ರಕಟವಾದ ಹಿನ್ನೆಲೆಯಲ್ಲಿ ಸ್ಪಷ್ಟನೆ ನೀಡಿರುವ ಅವರು, ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಕಾಮಗಾರಿ ನಡೆಯುವ ವೇಳೆ ಸ್ಥಳ ಪರಿಶೀಲನೆ ನಡೆಸಲು ಸಾಧ್ಯವಿಲ್ಲ. ಆದರೆ ಡಾಂಬರೀಕರಣ ವ್ಯವಸ್ಥಿತವಾಗಿ ನಡೆದಿಲ್ಲ ಎಂದು ಗಮನಕ್ಕೆ ಬಂದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ದೇವರಾಜ ಅರಸು ರಸ್ತೆ ಅರ್ಧದಷ್ಟು ಡಾಂಬರೀಕರಣವಾಗಿದ್ದರೂ ಅಷ್ಟೂ ಡಾಂಬರ್ ಅನ್ನು ತೆರವುಗೊಳಿಸಲಾಗಿದೆ. ಸುಮಾರು 25–30 ಲೋಡ್ ಡಾಂಬರ್ ತೆಗೆದಿದ್ದು, ಮತ್ತೆ ವ್ಯವಸ್ಥಿತವಾಗಿ ಡಾಂಬರೀಕರಣವಾಗಬೇಕು ಎಂದು ಇಂಜಿನಿಯರ್‌ಗಳಿಗೆ ಸೂಚಿಸಿದ್ದೇನೆ. ರಾತ್ರಿ ವೇಳೆ ಡಾಂಬರೀಕರಣ ನಡೆದಿದ್ದರಿಂದ ಕಾಮಗಾರಿಯ ಗುಣಮಟ್ಟ ಕಡಿಮೆಯಾಗಿದೆ. ಕ್ಷೇತ್ರದ ಶಾಸಕನಾಗಿ ನನಗೂ ಜವಾಬ್ದಾರಿ ಎಂಬುದಿದೆ. ಆದ್ದರಿಂದ ಪ್ರತಿಷ್ಠಿತ ಅರಸು ರಸ್ತೆಗೆ ಮತ್ತೆ ವ್ಯವಸ್ಥಿತವಾಗಿ ಡಾಂಬರೀಕರಣ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ರಸ್ತೆ, ಚರಂಡಿ ಸೇರಿ ಅಂದಾಜು ಕೋಟಿ ರೂ.ವೆಚ್ಚದ ಕಾಮಗಾರಿ ಇದಾಗಿದೆ. ಹಾಗೆಯೇ ದೇವರಾಜ ಅರಸು ರಸ್ತೆ ಡಾಂಬರೀಕರಣ ಮಾಡುತ್ತಿರುವ ಗುತ್ತಿಗೆದಾರರು ಈಗಾಗಲೇ ನಗರದ ಪ್ರಮುಖ ರಸ್ತೆಗಳಿಗೆ ಡಾಂಬರೀಕರಣ ಮಾಡಿದ್ದು, ಎಲ್ಲಿಯೂ ಕಳಪೆಯಾಗಿಲ್ಲ. ಕಳೆದ ಐದು ವರ್ಷಗಳಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರದ ಬಹುತೇಕ ರಸ್ತೆಗಳು ಅಭಿವೃದ್ಧಿಯಾಗಿವೆ. ಕಾಮಗಾರಿಯ ವೇಳೆ ಗುಣಮಟ್ಟಕ್ಕೆ ಆದ್ಯತೆ ನೀಡಲಾಗಿದೆ ಎಂದು ಶಾಸಕ ಎಲ್.ನಾಗೇಂದ್ರ ತಿಳಿಸಿದ್ದಾರೆ.

ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿ

ಪಂಜಾಬ್‌ನ ಲವ್‌ಲೀ ಪ್ರೊಫೆಷನಲ್ ವಿವಿ ಚಾಂಪಿಯನ್



ಮೈಸೂರು, ಏ.11(ಎಂಕೆ)– ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್(ಎಸ್‌ಜೆಸಿಇ) ಕಾಲೇಜು ಹಾಗೂ ಕೆಎಸ್‌ಸಿಎ ಸಹಯೋಗದಲ್ಲಿ ನಡೆದ 'ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿ–2023'ಯಲ್ಲಿ ಪಂಜಾಬ್‌ನ ಲವ್‌ಲೀ ಪ್ರೊಫೆಷನಲ್ ವಿಶ್ವವಿದ್ಯಾನಿಲಯ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತು.

ಕೆಎಸ್‌ಸಿಎ(ಜೆಎಸ್‌ಎಸ್ ಎಸ್‌ಟಿಯು) ಮೈದಾನದಲ್ಲಿ ಮಂಗಳವಾರ ನಡೆದ ಫೈನಲ್ ಹಣಾಹಣೆಯಲ್ಲಿ ಹರಿಯಾಣದ ಎಂಡಿ ವಿಶ್ವವಿದ್ಯಾನಿಲಯ ರೋಹಟಕ್ ತಂಡದ ವಿರುದ್ಧ ಪಂಜಾಬ್‌ನ ಲವ್ ಲೀ ಪ್ರೊಫೆಷನಲ್ ವಿಶ್ವವಿದ್ಯಾನಿಲಯ ತಂಡ 4 ವಿಕೆಟ್‌ಗಳ ಭರ್ಜರಿ ಜಯದೊಂದಿಗೆ ಚಾಂಪಿಯನ್ ಆಯಿತು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಹರಿಯಾಣದ ಎಂಡಿ ವಿಶ್ವವಿದ್ಯಾನಿಲಯ ರೋಹಟಕ್ ತಂಡ ನಿಗದಿತ 25 ಓವರ್‌ಗಳಲ್ಲಿ ಎಲ್ಲಾ 10 ವಿಕೆಟ್ ಕಳೆದುಕೊಂಡು 126 ರನ್‌ಗಳಿಸಲಷ್ಟೇ ಸಾಧ್ಯವಾಯಿತು. ತಂಡ ಪರ ಭಾವನಾ 55, ತನು 18 ಗಳಿಸಿದರೆ ಲವ್‌ಲೀ ಪ್ರೊಫೆಷನಲ್ ವಿಶ್ವವಿದ್ಯಾನಿಲಯ ತಂಡ ಪರವಾಗಿ ಸೋನಾಲ್ 17ಕ್ಕೆ3, ಶಿವಾನಿ ಜಂಗಿದ್ 24ಕ್ಕೆ2 ವಿಕೆಟ್ ಪಡೆದು ಗಮನ ಸೆಳೆದರು.

127 ರನ್‌ಗಳ ಗುರಿ ಬೆನ್ನತ್ತಿದ ಪಂಜಾಬ್‌ನ ಲವ್‌ಲೀ ಪ್ರೊಫೆಷನಲ್ ವಿಶ್ವವಿದ್ಯಾನಿಲಯ ತಂಡ 24.1 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 127 ರನ್ ಗಳಿಸುವ ಮೂಲಕ 4 ವಿಕೆಟ್‌ಗಳ ಜಯ ದಾಖಲಿಸಿತು. ನಜ್ಮಾ 65, ದೀಪಾಕುಮಾರಿ 25 ರನ್‌ಗಳ ಕಾಣಿಕೆ ನೀಡಿದರು. ಎಂಡಿ ವಿಶ್ವವಿದ್ಯಾನಿಲಯ ಪರವಾಗಿ ಸುಮನ್ ಗುಲಿಯಾ 24ಕ್ಕೆ 1 ವಿಕೆಟ್ ಗಳಿಸಿದ್ದು ಬಿಟ್ಟರೆ ಇನ್ನಿತರೆ ಬೌಲರ್‌ಗಳು ವಿಕೆಟ್ ಪಡೆಯುವಲ್ಲಿ ವಿಫಲರಾದರು. ಈ ಮೂಲಕ ಎಂಡಿ ವಿಶ್ವವಿದ್ಯಾನಿಲಯ ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿಪಡಬೇಕಾಯಿತು.

3ನೇ ಸ್ಥಾನ ಪಡೆದ ಗುರುನಾನಕ್ ದೇವ್ ವಿವಿ: ಪುಣೆಯ ಸಾವಿತ್ರಿ ಬಾಯಿ ಪುಲೆ ವಿವಿ ಹಾಗೂ ಪಂಜಾಬ್‌ನ ಗುರುನಾನಕ್ ದೇವ್ ವಿವಿ ನಡುವೆ 3ನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಪಂಜಾಬ್‌ನ ಗುರುನಾನಕ್ ದೇವ್ ವಿಶ್ವವಿದ್ಯಾನಿಲಯ ತಂಡ 3 ವಿಕೆಟ್‌ಗಳ ಜಯದೊಂದಿಗೆ ಟೂರ್ನಿಯಲ್ಲಿ 3ನೇ ಸ್ಥಾನ ಪಡೆಯಿತು. ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಸಾವಿತ್ರಿ ಬಾಯಿ ಪುಲೆ ವಿವಿ ತಂಡ ನಿಗದಿತ 25 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 159 ರನ್ ಗಳಿಸಿತು. ಈಶ್ವರಿ ಸಾವ್ಕರ್ 54, ಪ್ರಿಯಾಂಕಾ ಘೋಡಕೆ ಅಜೇಯ 57 ರನ್ ಗಳಿಸಿದರೆ, ಬೌಲಿಂಗ್‌ನಲ್ಲಿ ಪ್ರಿಯಾಂಕ್ ಮುತ್ರೇಜಾ 31ಕ್ಕೆ 1 ವಿಕೆಟ್ ಪಡೆದರು. 160 ರನ್‌ಗಳ ಗುರಿ ಪಡೆದ ಪಂಜಾಬ್‌ನ ಗುರುನಾನಕ್ ದೇವ್ ವಿಶ್ವವಿದ್ಯಾನಿಲಯ ತಂಡ 24 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 161 ರನ್‌ಗಳಿಸುವ ಮೂಲಕ 3ನೇ ಸ್ಥಾನವನ್ನು ತನ್ನದಾಗಿಸಿಕೊಂಡಿತು.

ಬಹುಮಾನ ವಿತರಣೆ: ಬಳಿಕ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್(ಎಸ್‌ಜೆಸಿಇ) ಕಾಲೇಜಿನ ಸೆಮಿನಾರ್ ಹಾಲ್‌ನಲ್ಲಿ ನಡೆದ ಸಮಾರೋಪ ಕಾರ್ಯಕ್ರಮದಲ್ಲಿ ಕೆಎಸ್‌ಸಿಎ ಮೈಸೂರು ವಿಭಾಗದ ಮುಖ್ಯಸ್ಥ ಬಾಲಚಂದರ್, ವಿಜೇತ ಹಾಗೂ ರನ್ನರ್ ಅಪ್ ತಂಡಗಳಿಗೆ ಬಹುಮಾನ ವಿತರಿಸಿ, ಅಭಿನಂದಿಸಿದರು. ಅಲ್ಲದೆ ಪಂದ್ಯಾವಳಿ ಯಶಸ್ಸಿಗೆ ಸಹಕರಿಸಿದ ಎಲ್ಲರಿಗೂ ನೆನಪಿನ ಸ್ಮರಣಿಕೆ ನೀಡಲಾಯಿತು.

ನಂತರ ಮಾತನಾಡಿದ ಅವರು, ದೇಶದಲ್ಲಿ ಮಹಿಳಾ ಕ್ರಿಕೆಟ್ ಆರಂಭವಾಗಿ 50 ವರ್ಷಗಳಾಗಿದ್ದು, ಸಾಕಷ್ಟು ಬದಲಾವಣೆ ಜೊತೆಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿದೆ. ಕ್ರಿಕೆಟ್‌ನಲ್ಲಿ ಮಹಿಳೆಯರಿಗೆ ಸಾಕಷ್ಟು ಅವಕಾಶಗಳಿದ್ದು, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಅರ್ಹತೆ ಪಡೆಯಬೇಕು. ಒಮ್ಮೆ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಆಡುವ ಅವಕಾಶ ಲಭಿಸಿದರೆ ನಿಮ್ಮ ಜೀವನದ ಸ್ಥಿತಿ–ಗತಿಯೇ ಬದಲಾಗುತ್ತದೆ. ಆದ್ದರಿಂದ ಗುರಿ ತಲುಪುವ ಕಡೆಗೆ ಗಮನವಿಡಿ ಎಂದು ಕಿವಿಮಾತು ಹೇಳಿದರು.

ಕೆಎಸ್‌ಸಿಎ ಮೈಸೂರು ವಿಭಾಗದ ಸಂಯೋಜಕ ಹರಿಕೃಷ್ಣ, ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿ ಕುಲಪತಿ ಡಾ.ಎ.ಎನ್.ಸಂತೋಷ್ ಕುಮಾರ್, ಕುಲಸಚಿವ ಡಾ.ಎಸ್.ಎ.ಧನರಾಜ್, ದೈಹಿಕ ಶಿಕ್ಷಣ ವಿಭಾಗದ ಮುಖ್ಯಸ್ಥ ಡಾ.ಸಿ.ರೇವಣ್ಣ ಉಪಸ್ಥಿತರಿದ್ದರು.

ಬಿಜೆಪಿ ನಾಯಕರು ನನ್ನನ್ನು ಅರ್ಥ ಮಾಡಿಕೊಂಡಿಲ್ಲ

ನಾನು ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ

ಕಲ್ಪಟ್ಟಾ(ವಯನಾಡ್): ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಸರ್ಕಾರದ ವಿರುದ್ಧ ಮಂಗಳವಾರ ಮತ್ತೆ ವಾಗ್ದಾಳಿ ನಡೆಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಅವರು ಎಲ್ಲವನ್ನೂ ಕಸಿದುಕೊಳ್ಳಬಹುದು, ನನ್ನನ್ನು ಮತ್ತೆ ಜೈಲಿಗೆ ಕಳುಹಿಸಬಹುದು. ಆದರೆ ನನ್ನನ್ನು ಹೆದರಿಸಲು ಅಥವಾ ನನ್ನಲ್ಲಿ ಭಯಹುಟ್ಟಿಸಲು ಸಾಧ್ಯವಿಲ್ಲ. ನಾನು ಪ್ರಶ್ನೆಗಳನ್ನು ಕೇಳುತ್ತಲೇ ಇರುತ್ತೇನೆ ಎಂದು ಹೇಳಿದ್ದಾರೆ. ಲೋಕಸಭೆಯಿಂದ ಅನರ್ಹಗೊಂಡ ನಂತರ ಕೇರಳದಲ್ಲಿರುವ ತಮ್ಮ ಲೋಕಸಭಾ ಕ್ಷೇತ್ರಕ್ಕೆ ರಾಹುಲ್ ಮೊದಲನೇ ಬಾರಿ ಭೇಟಿ ನೀಡಿದ್ದಾರೆ. ವಯನಾಡಿನಲ್ಲಿ ಭಾವಾತ್ಮಕವಾಗಿ ಭಾಷಣ ಮಾಡಿದ ರಾಹುಲ್, ಸರ್ಕಾರದ ವಿರುದ್ಧದ ನನ್ನ ಹೋರಾಟವು ನಾಲ್ಕು ಅಥವಾ ಐದು ಜನರಿಂದ ಮಾರ್ಗದರ್ಶನ ಮತ್ತು ನಿಯಂತ್ರಿಸಲ್ಪಟ್ಟಿದೆ. ಅದು ಮುಂದುವರಿಯಲಿದೆ.

ಅವರು ಪೊಲೀಸರನ್ನು ಕಳುಹಿಸಿದರೆ, ನನ್ನ ಮನೆ ಕಸಿದುಕೊಂಡರೆ ಅಥವಾ ಕೆಲವು ಪ್ರಕರಣಗಳನ್ನು ದಾಖಲಿಸಿದರೆ ಅಥವಾ ನನ್ನನ್ನು ಸಂಸತ್ತಿನಿಂದ ಹೊರಹಾಕಿದರೆ ನಾನು ಹೆದರುತ್ತೇನೆ ಎಂದು ಅವರು ಭಾವಿಸುತ್ತಾರೆ. ಆದರೆ ಅವರ ಆ ಭಾವನೆ ತಪ್ಪು. ನಾನು ನನ್ನ ಹೋರಾಟವನ್ನು ಮುಂದುವರಿಸುತ್ತೇನೆ. ಪ್ರಶ್ನೆಗಳನ್ನು ಕೇಳುವುದನ್ನು ಮುಂದುವರಿಸುತ್ತೇನೆ. ಇದು ಎರಡು ದೃಷ್ಟಿಕೋನಗಳ ನಡುವಿನ ಹೋರಾಟವಾಗಿದೆ, ಒಂದು ದ್ವೇಷ ಮತ್ತು ವಿಭಜನೆಯಿಂದ ಮುಂದುವರಿದರೆ ಮತ್ತು ಇನ್ನೊಂದು, ಸಹಾನುಭೂತಿಯಿಂದ ಮುಂದೆ ಸಾಗುತ್ತದೆ.

ನನ್ನ ಎಂಪಿ ಟ್ಯಾಗ್ ಕಿತ್ತುಕೊಳ್ಳಲಾಗಿದೆ ಆದರೆ ವಯನಾಡಿನ ಜನರೊಂದಿಗೆ ನನ್ನ ಒಡನಾಟವನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಇದು ನಾನು ಮನೆಗೆ ವಾಪಾಸ್ ಬಂದಂತೆ. ನೀವು ನನ್ನನ್ನು ಕುಟುಂಬದ ಸದಸ್ಯರಂತೆ ಪರಿಗಣಿಸುತ್ತೀರಿ ಎಂದು ರಾಹುಲ್ ಹೇಳಿದ್ದಾರೆ. 2019ರಲ್ಲಿ 4,00,000 ಮತಗಳ ಅಂತರದಿಂದ ವಯನಾಡ್ ಲೋಕಸಭಾ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದರು.

ನಾನು ಕೇಳಿದ ಪ್ರಶ್ನೆಗಳಿಂದಾಗಿ ಸಂಸತ್ತಿನಲ್ಲಿ ಮಾತನಾಡಲು ಅವಕಾಶ ನೀಡಲಿಲ್ಲ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.



ನಾನು ಪ್ರಧಾನಿಗೆ ಒಂದೇ ಒಂದು ಪ್ರಶ್ನೆ ಕೇಳಿದೆ. ದೇಶದಲ್ಲಿ 609ನೇ ಸ್ಥಾನದಲ್ಲಿದ್ದ ಕೈಗಾರಿಕೋದ್ಯಮಿ (ಗೌತಮ್ ಅದಾನಿ) ಮೋದಿ ಅಧಿಕಾರಕ್ಕೆ ಬಂದ ನಂತರ 2ನೇ ಸ್ಥಾನಕ್ಕೇರಿದ್ದು ಹೇಗೆ? ಅವರಿಗಾಗಿ ವಿಮಾನ ನಿಲ್ದಾಣ ಮತ್ತು ಬಂದರು ನಿಯಮಗಳನ್ನು ಬದಲಾಯಿಸಿರುವುದನ್ನು ನಾವು ನೋಡಿದ್ದೇವೆ. ಯಾರೂ ನನ್ನನ್ನು ಮೌನಗೊಳಿಸಲು ಸಾಧ್ಯವಿಲ್ಲ. ನಾನು ಪ್ರಶ್ನೆಗಳನ್ನು ಕೇಳುವುದನ್ನು ಮುಂದುವರಿಸುವೆ ಎಂದಿದ್ದಾರೆ ರಾಹುಲ್. ನಾನು ಹಿಂದೆ ಸರಿಯುವುದಿಲ್ಲ ಎಂದು ಬಿಜೆಪಿ ಮತ್ತು ಅದರ ನಾಯಕರಿಗೆ ಗೊತ್ತಿಲ್ಲ. ಅವರಿಗೆ ನಾನು ಹೆದರುವುದೂ ಇಲ್ಲ ಹಲವು ವರ್ಷಗಳ ನಂತರ ಬಿಜೆಪಿ ಮತ್ತು ಅದರ ನಾಯಕರು ನನ್ನನ್ನು ಅರ್ಥಮಾಡಿಕೊಳ್ಳಲು ವಿಫಲರಾಗಿದ್ದಾರೆ ಎಂದು ನನಗೆ ಆಶ್ಚರ್ಯವಾಗಿದೆ. ನಾನು ನನ್ನ ಹೋರಾಟವನ್ನು ಮುಂದುವರಿಸುತ್ತೇನೆ. 4 ವರ್ಷಗಳ ಹಿಂದೆ ವಯನಾಡ್‌ಗೆ ಸ್ಪರ್ಧಿಸಲು ಬಂದಾಗ, ಪ್ರಚಾರವು ವಿಭಿನ್ನವಾಗಿತ್ತು. ಅದರಲ್ಲಿ ಹೆಚ್ಚು ಪ್ರೀತಿ ಕಾಣುತ್ತಿತ್ತು. ಆ ಸಂಬಂಧವನ್ನು ನಾನು ಮುಂದುವರಿಸುತ್ತೇನೆ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ. ರಾಹುಲ್ ಜೊತೆ ನಿಂತಿದ್ದಕ್ಕಾಗಿ ವಯನಾಡ್ ಜನತೆಗೆ ಧನ್ಯವಾದ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಹೇಳಿದ್ದಾರೆ ಸರ್ಕಾರ ಮತ್ತು ಅದರ ಕುರಿತ ಪ್ರಶ್ನೆಯನ್ನು ಕೇಳಿದ ವ್ಯಕ್ತಿಯ ಮೇಲೆ ಹೇಗೆ ದಾಳಿ ಮಾಡಿದೆ ಎಂಬುದು ನಿಮಗೆಲ್ಲರಿಗೂ ತಿಳಿದಿದೆ. ಆದರೆ ನೀವು ಅವನನ್ನು ಹೀಗೆ ಮೌನಗೊಳಿಸಲು ಸಾಧ್ಯವಿಲ್ಲ. ಯಾವಾಗಲೂ ಸುಳ್ಳು ಹೇಳುವವರಿಗೆ ಸತ್ಯವು ಯಾವಾಗಲೂ ಅಹಿತಕರವಾಗಿರುತ್ತದೆ ಎಂಬುದು ಸತ್ಯ ಎಂದರು.

ಕಾಲ್ನಡಿಗೆ ಜಾಥಾ, ಮಾನವ ಸರಪಳಿ ಮೂಲಕ ಮತದಾನದ ಬಗ್ಗೆ ಜಾಗೃತಿ



ಮೈಸೂರು,ಏ.11–ಜಿಲ್ಲೆಯ ಹೆಚ್.ಡಿ.ಕೋಟೆ ಪಟ್ಟಣದಲ್ಲಿ ಕಾಲ್ನಡಿಗೆ ಜಾಥಾ ಹಾಗೂ ಮಾನವ ಸರಪಳಿ ನಿರ್ಮಿಸುವ ಮೂಲಕ ಸಾರ್ವಜನಿಕರಿಗೆ ಮತದಾನದ ಬಗ್ಗೆ ಜಾಗೃತಿ ಮೂಡಿಸಲಾಯಿತು.

ವಿಧಾನಸಭಾ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ತಾಲೂಕು ಸ್ವೀಪ್ ಸಮಿತಿ ವತಿಯಿಂದ ತಾಲೂಕು ಪಂಚಾಯ್ತಿ ಆವರಣದಿಂದ ಬಸ್ ನಿಲ್ದಾಣದವರೆಗೆ ಕಾಲ್ನಡಿಗೆ ಜಾಥಾ, ಪುರಸಭೆ ಮುಂಭಾಗ, ಮೇಟಿಕುಪ್ಪೆ ಸರ್ಕಲ್ ಹಾಗೂ ಬಸ್ ನಿಲ್ದಾಣದ ಬಳಿ ಮಾನವ ಸರಪಳಿ ನಿರ್ಮಿಸಿ, ಮತದಾನ ಪ್ರತಿಜ್ಞಾ ವಿಧಿ ಬೋಧಿಸಲಾಯಿತು. 'ಮತದಾನ ನಮ್ಮ ಹಕ್ಕು', 'ಜಾಗೃತ ಮತದಾರ ಪ್ರಜಾಪ್ರಭುತ್ವದ ನೇತಾರ', 'ನಿಮ್ಮ ಬೆರಳಿಗೆ ಇಂಕು ಪ್ರಜಾಪ್ರಭುತ್ವಕ್ಕೆ ಲಿಂಕು' ಇನ್ನಿತರ ಘೋಷಣೆ ಕೂಗಲಾಯಿತು. ಪುರಸಭೆ ಮುಂಭಾಗದ ರಸ್ತೆಯಲ್ಲಿ ತೋರು ಬೆರಳಿಗೆ ಇಂಕು ಹಾಕಿರುವ ಚಿತ್ರ ಬಿಡಿಸಿ, ಮೇ 10ರಂದು ಕಡ್ಡಾಯವಾಗಿ ಮತದಾನ ಮಾಡುವಂತೆ ಅರಿವು ಮೂಡಿಸಿದ್ದು ವಿಶೇಷವಾಗಿತ್ತು. ಹೆಚ್.ಡಿ.ಕೋಟೆ ತಹಸೀಲ್ದಾರ್ ಮಹೇಶ್ ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನ ಪ್ರತಿಯೊಬ್ಬ ಪ್ರಜೆಯ ಹಕ್ಕು. ಅದನ್ನು ತಪ್ಪದೇ ಚಲಾಯಿಸಬೇಕು. ಎಲ್ಲಾ ಮತದಾರರು ಚುನಾವಣಾ ಹಬ್ಬದಲ್ಲಿ ಸಂಭ್ರಮದಿಂದ ಭಾಗವಹಿಸಬೇಕು. ದೇಶದ ಅಭಿವೃದ್ಧಿಗೆ ಒಂದೊಂದು ಮತವೂ ಮಹತ್ವದ್ದಾಗಿದ್ದು, ಈ ಬಗ್ಗೆ ನಿರ್ಲಕ್ಷ್ಯ ತೋರದೆ ಸ್ವಇಚ್ಛೆಯಿಂದ ಮತಗಟ್ಟೆಗೆ ತೆರಳಿ ಮತಚಲಾಯಿಸಬೇಕು. ಆ ಮೂಲಕ ನೆರೆಹೊರೆಯವರಿಗೂ ಮತದಾನಕ್ಕೆ ಪ್ರೇರೇಪಣೆ ನೀಡಬೇಕು ಎಂದು ಮನವಿ ಮಾಡಿದರು.

ತಾಲೂಕು ಸ್ವೀಪ್ ಸಮಿತಿ ಅಧ್ಯಕ್ಷ ಜೆರಾಲ್ಡ್ ರಾಜೇಶ್ ಮಾತನಾಡಿ, ಬಲಿಷ್ಠ ಭಾರತ ನಿರ್ಮಾಣ ಮಾಡಲು ಪ್ರತಿಯೊಬ್ಬ ಮತದಾರರೂ ಮತ ಚಲಾಯಿಸಬೇಕು. ಮತದಾನ ಪ್ರಮಾಣ ಹೆಚ್ಚಿಸಲು ಸ್ವೀಪ್ ಸಮಿತಿ ಮೂಲಕ ಸಾಕಷ್ಟು ಕಾರ್ಯಕ್ರಮ ನಡೆಸಲಾಗಿದೆ ಎಂದರು. ಈ ಸಂದರ್ಭದಲ್ಲಿ ಪುರಸಭೆ ಮುಖ್ಯಾಧಿಕಾರಿ ಸುರೇಶ್, ತಾಲೂಕು ಯೋಜನಾಧಿಕಾರಿ ರಂಗಸ್ವಾಮಿ, ಸಹಾಯಕ ನಿರ್ದೇಶಕ ಕಿರಣ್ ಆರ್.ಜಹಗೀರ್‌ದಾರ್ ಸೇರಿದಂತೆ ಅನೇಕ ಅಧಿಕಾರಿಗಳು ಇದ್ದರು.

ಪ್ರತಿ ಮತಗಟ್ಟೆ ಮತದಾರ ಸ್ನೇಹಿಯಾಗಿರಲಿ

ಅಧಿಕಾರಿಗಳಿಗೆ ಡಿಸಿ ಡಾ.ರಾಜೇಂದ್ರ ಸಲಹೆ



ಮೈಸೂರು, ಏ.11– ಪ್ರತಿಯೊಂದು ಮತಗಟ್ಟೆಯೂ ಮತದಾರ ಸ್ನೇಹಿಯಾಗಿರುವಂತೆ ನಿಗಾ ವಹಿಸಬೇಕೆಂದು ಜಿಲ್ಲಾ ಮುಖ್ಯ ಚುನಾವಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಿಡಿಯೋ ಕಾನ್ಫರೆನ್ಸ್ ನಂತರ ಅಧಿಕಾರಿಗಳೊಂದಿಗೆ ಮಾತನಾಡಿ, ಜಿಲ್ಲೆಯ ಪ್ರತಿ ಮತಗಟ್ಟೆಗಳಲ್ಲಿಯೂ ಅಗತ್ಯ ಮೂಲ ಸೌಕರ್ಯಗಳನ್ನು ಕಲ್ಪಿಸಿ, ಮತದಾರ ಸ್ನೇಹಿಯಾಗಿರುವಂತೆ ನೋಡಿಕೊಳ್ಳಬೇಕು. ಕುಡಿಯುವ ನೀರು, ನೆರಳು ವ್ಯವಸ್ಥೆ, ಮಹಿಳೆ ಹಾಗೂ ಪುರುಷರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಮಾಡಬೇಕು. ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಮತಗಟ್ಟೆಗಳು ಆಕರ್ಷಕವಾಗಿಸಿ, ಮತದಾರರ ಸೆಳೆಯಬೇಕು ಎಂದು ತಿಳಿಸಿದರು.

ಜಿಲ್ಲಾ ಹಾಗೂ ತಾಲೂಕು ಗಡಿಗಳ ಚೆಕ್‌ಪೋಸ್ಟ್‌ಗಳಲ್ಲಿ ನಿರಂತರ ತಪಾಸಣೆ ನಡೆಸಬೇಕು. ಅಧಿಕಾರಿ, ಸಿಬ್ಬಂದಿಗಳ ಕಾರ್ಯವೈಖರಿ ಬಗ್ಗೆ ಎಲ್ಲರೂ ಗಮನಹರಿಸಿರುತ್ತಾರೆ. ತಪಾಸಣೆಯಲ್ಲಿ ಲೋಪವಾಗದಂತೆ ತುಂಬಾ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಬೇಕು. ಗರಿಷ್ಠ ಮತದಾನ ಪ್ರಮಾಣದ ಸಾಧಿಸುವ ನಿಟ್ಟಿನಲ್ಲಿ ಶ್ರಮಿಸಬೇಕು. 80ವರ್ಷ ಮೇಲ್ಪಟ್ಟವರು ಹಾಗೂ ವಿಶೇಷಚೇತನರು ಮತದಾನದಿಂದ ವಂಚಿತರಾಗದಂತೆ ಎಚ್ಚರವಹಿಸಬೇಕು ಎಂದರು. ಈ ವೇಳೆ ಅಪರ ಜಿಲ್ಲಾಧಿಕಾರಿ ಕವಿತಾ ರಾಜಾರಾಂ, ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಜಿಲ್ಲಾ ಪೊಲೀಸ್ ಅಧೀಕ್ಷಕಿ ಸೀಮಾ ಲಾಟ್ಕರ್, ತಾಲೂಕು ಚುನಾವಣಾಧಿಕಾರಿಗಳು ಹಾಜರಿದ್ದರು.

ಮತದಾನದ ಹಕ್ಕನ್ನು ತಪ್ಪದೇ ಚಲಾಯಿಸಿ

ಕೆ.ಆರ್.ನಗರ ತಹಸೀಲ್ದಾರ್ ತಿಮ್ಮಪ್ಪ ಕರೆ



ಮೈಸೂರು, ಏ.11– ಪ್ರತಿಯೊಬ್ಬರಿಗೂ ಮತದಾನದ ಹಕ್ಕು ಇದೆ. ಇದನ್ನು ತಪ್ಪದೇ ಚಲಾಯಿಸಿ ಎಂದು ತಹಸೀಲ್ದಾರ್ ತಿಮ್ಮಪ್ಪ ತಿಳಿಸಿದರು.

ಕೆ.ಆರ್ ನಗರದಲ್ಲಿ ಹಮ್ಮಿಕೊಂಡಿದ್ದ ಕಡ್ಡಾಯ ಮತದಾನದ ಅರಿವು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಎಲ್ಲರಿಗೂ ಕೂಡ ಮತದಾನದ ಮಹತ್ವವನ್ನು ತಿಳಿಸುವಂತಹ ಕೆಲಸವನ್ನು ಎಲ್ಲರೂ ಮಾಡಬೇಕು ಎಂದು ಕರೆ ನೀಡಿದರು.

ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ವಿವಿಧ ಇಲಾಖೆ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಪಿಡಿಓಗಳು ಹಾಗೂ ಸಿಬ್ಬಂದಿ ವರ್ಗದವರು, ಅಂಗನವಾಡಿ ಕಾರ್ಯಕರ್ತರು ಚುನಾವಣಾ ಸಂಬಂಧ ವಿವಿಧ ಘೋಷಣೆಗಳನ್ನು ಕೂಗುತ್ತ ಜಾಗೃತಿ ಜಾಥಾ ನಡೆಸಿದರು.


ಕಾರ್ಯಕ್ರಮದಲ್ಲಿ ತಾಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸತೀಶ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಮಹೇಶ್, ಪಿಡಿಓ ಮಂಜುನಾಥ್, ಉಪ ತಹಸೀಲ್ದಾರ್ ಶರತ್‌ಕುಮಾರ್, ರಾಜಸ್ವ ನಿರೀಕ್ಷಕ ಹೇಮಂತ್, ತಾಲೂಕು ಐಇಸಿ ಸಂಜಯ್ ಬಿ.ಸಿ. ಹಾಗೂ ಇನ್ನಿತರರು ಭಾಗವಹಿಸಿದ್ದರು.

ದೃಷ್ಟಿ ಮಂಜಾಗ್ತಿದೆ, ಕೈ–ಕಾಲು ಸ್ವಾಧೀನ ಕಳೆದುಕೊಳ್ತಿದೆ

ಮಾಸ್ಕೋ: ಕಳೆದ ವರ್ಷದಿಂದ ಉಕ್ರೇನ್ ವಿರುದ್ಧ ಯುದ್ಧ ಸಾರಿದಾಗಿನಿಂದಲೂ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಆರೋಗ್ಯ ವಿಚಾರ ನಿರಂತರ ಚರ್ಚೆಯಲ್ಲಿದೆ. ಇದಕ್ಕೆ ಸಂಬಂಧಿಸಿದಂತೆ ಮತ್ತೊಂದು ವರದಿ ಬಿಡುಗಡೆಯಾಗಿದ್ದು, ಪುಟಿನ್ ಆರೋಗ್ಯ ಮತ್ತಷ್ಟು ಕ್ಷೀಣಿಸಿದೆ ಎಂದು ಹೇಳಲಾಗಿದೆ.

ಪುಟಿನ್‌ಗೆ ಅತಿಯಾದ ತಲೆನೋವು, ದೃಷ್ಟಿ ಮಂಜಾಗುವುದು ಹಾಗೂ ನಾಲಿಗೆಯಲ್ಲಿ ಮರಗಟ್ಟುವಿಕೆ ಉಂಟಾಗುತ್ತಿದೆ ಎಂದು ವೈದ್ಯರು ಹೇಳಿರುವುದಾಗಿ ಮಾಧ್ಯಮಗಳು ವರದಿ ಮಾಡಿವೆ.

ಪುಟಿನ್ ಆರೋಗ್ಯದಲ್ಲಿ ಏರುಪೇರು




ಪುಟಿನ್ ಈಗಾಗಲೇ ಬಲಗೈ ಮತ್ತು ಬಲಗಾಲಿನ ಭಾಗಶಃ ಸ್ವಾಧೀನ ಕಳೆದುಕೊಳ್ಳುತ್ತಿದ್ದಾರೆ. ಅವರಿಗೆ ತುರ್ತು ವೈದ್ಯಕೀಯ ಆರೈಕೆ ಅಗತ್ಯವಿದೆ ಎಂದು ಹೇಳಿದ್ದಾರೆ. ಆದ್ರೆ ಕ್ರೆಮ್ಲಿನ್ ಮತ್ತು ರಷ್ಯಾದ ಆರೋಗ್ಯ ಸಚಿವರು ಪುಟಿನ್ ಆರೋಗ್ಯವಾಗಿದ್ದಾರೆ ಎಂದು ಸಮರ್ಥಿಸಿಕೊಂಡಿದ್ದಾರೆ.

ಈ ಹಿಂದೆಯೇ ವೈದ್ಯರು ಕೌನ್ಸಿಲಿಂಗ್ ಮಾಡಿ, ಔಷಧಿ ತೆಗೆದುಕೊಂಡು ವಿಶ್ರಾಂತಿ ಪಡೆಯುವಂತೆ ಸಲಹೆ ನೀಡಿದ್ದರು. ಆದರೆ ಪುಟಿನ್ ವಿಶ್ರಾಂತಿ ಪಡೆಯಲು ನಿರಾಕರಿಸಿ, ಉಕ್ರೇನ್ ವಿರುದ್ಧ ಯುದ್ಧದ ಬೆಳವಣಿಗೆಯಲ್ಲಿ ತೊಡಗಿಕೊಂಡರು. ಅವರು ಕೊಂಚ ಸುಧಾರಿಸಿ ಕೊಳ್ಳುತ್ತಿದ್ದಂತೆಯೇ ವೈದ್ಯರ ಆರೈಕೆ ಬಗ್ಗೆ ನಿರ್ಲಕ್ಷ್ಯ ತೋರಿದರು ಎಂದು ತಿಳಿಸಿದ್ದಾರೆ.

ಸುಮಲತಾ ಅಂಬರೀಶ್ ವಿರುದ್ಧ ಸ್ಪರ್ಧಿಸಿದ್ದ ಸುಮಲತಾರು ಅನರ್ಹರು!

ಮಂಡ್ಯ: ಚುನಾವಣಾ ವೆಚ್ಚದ ವಿವರ ಸಲ್ಲಿಸದ ಕಾರಣ ಕಳೆದ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ನಾಲ್ವರು, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಮೂವರನ್ನು ಅಭ್ಯರ್ಥಿಗಳನ್ನು ಚುನಾವಣಾ ಆಯೋಗ ಅನರ್ಹಗೊಳಿಸಿದೆ. 2019ರ ಲೋಕಸಭಾ ಚುನಾವಣೆಯಲ್ಲಿ ಆಯ್ಕೆಯಾದ ಸುಮಲತಾ ಅವರ ಜೊತೆಗೆ ಅವರದೇ ಹೆಸರಿನ ಮೂವರು ಸ್ಪರ್ಧಿಸಿ ಸೋತಿದ್ದರು. ಅವರಲ್ಲಿ ಶ್ರೀರಂಗಪಟ್ಟಣ ತಾಲ್ಲೂಕು, ಟಿ.ಎಂ.ಹೊಸೂರಿನ ಸುಮಲತಾ, ಕೆ.ಆರ್.ಪೇಟೆ ತಾಲೂಕು ಬಿಲ್ಲೇನಹಳ್ಳಿಯ ಎಂ.ಸುಮಲತಾ ಅವರನ್ನು ಅನರ್ಹಗೊಳಿಸಲಾಗಿದೆ. ಇವರ ಜೊತೆಗೆ ಪಕ್ಷೇತರ ಅಭ್ಯರ್ಥಿಗಳಾಗಿ ಸ್ಪರ್ಧಿಸಿದ್ದ ಎನ್.ಸಿ.ಪುಟ್ಟೇಗೌಡ, ಅರವಿಂದ್ ಪ್ರೇಮಾನಂದ್ ಅವರನ್ನೂ ಅನರ್ಹಗೊಳಿಸಲಾಗಿದೆ. ಜುಲೈ 7, 2022ರಿಂದ ಅನ್ವಯವಾಗುವಂತೆ ಅನರ್ಹಗೊಳಿಸಲಾಗಿದ್ದು ಜುಲೈ 7, 2025 ರವರೆಗೆ 3 ವರ್ಷ ಯಾವುದೇ ಚುನಾವಣೆಗೆ ಸ್ಪರ್ಧಿಸುವಂತಿಲ್ಲ ಎಂದು ಸೂಚಿಸಲಾಗಿದೆ.

ಇಂದು ಬ್ಯೂಟಿಷಿಯನ್ ಕುರಿತು ಕಾರ್ಯಾಗಾರ



ಮೈಸೂರು,ಏ.11(ಪಿಎಂ)– ಮೈಸೂರು ಬ್ಯೂಟಿಷಿಯನ್ಸ್ ವೆಲ್‌ಫೇರ್ ಅಸೋಸಿಯೇಷನ್, ಬೆಂಗಳೂರಿನ ಸೊಫಿಸ್ಟಿಕ್ ಅಕಾಡೆಮಿ ಮತ್ತು ಶ್ರೀನಿವಾಸ ಗ್ಲಾಮರ್ ಸ್ಟೋರ್ ಸಂಯುಕ್ತಾಶ್ರಯದಲ್ಲಿ ಏ.12ರಂದು ಸುಧಾರಿತ ಸೌಂದರ್ಯವರ್ಧಕ ಚಿಕಿತ್ಸೆಗಳ ಕುರಿತ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಅಸೋಸಿಯೇಷನ್ ಅಧ್ಯಕ್ಷೆ ಕೆ.ವೇದಾವತಿ ಎನ್.ರೈ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಕಿಂಗ್ಸ್ ಕೋರ್ಟ್ ಹೋಟೆಲ್‌ನಲ್ಲಿ ಅಂದು ಬೆಳಗ್ಗೆ 10.30 ರಿಂದ ಸಂಜೆ 5ರವರೆಗೆ ಕಾರ್ಯಾಗಾರ ನಡೆಯಲಿದೆ. ಅಸೋಸಿಯೇಷನ್ ಸದಸ್ಯರಿಗೆ ಉಚಿತವಾಗಿ ಈ ಕಾರ್ಯಾಗಾರ ಏರ್ಪಡಿಸಲಾಗಿದೆ. ಅಸೋಷಿಯೇಷನ್‌ನಲ್ಲಿ 117 ಸದಸ್ಯರು ಇದ್ದಾರೆ ಎಂದರು.

ಬೆಳಗ್ಗೆ 10.30ಕ್ಕೆ ಉದ್ಘಾಟನಾ ಕಾರ್ಯಕ್ರಮ ಏರ್ಪಡಿಸಿದ್ದು, ಅತಿಥಿಗಳಾಗಿ ಅನುತವ್ ಸಂಸ್ಥಾಪಕರಾದ ಡಾ.ನೀಲಿಮಾ ಶರ್ಮಾ, ಡಾ.ನಮ್ರತಾ ಪಾಲ್ಗೊಳ್ಳಲಿದ್ದಾರೆ. ಕಾರ್ಯಾಗಾರದಲ್ಲಿ ಬಿಬಿ ಗ್ಲೋ, ಹೇರ್ ಎಕ್ಸ್‌ಟೆನ್ಷನ್ಸ್, ಮೈಕ್ರೋಬ್ಲೇಡಿಂಗ್ ಮತ್ತು ಪರ್ಮನೆಂಟ್ ಮೇಕಪ್ ಕುರಿತಂತೆ ಸೊಫಿಸ್ಟಿಕ್ ಅಕಾಡೆಮಿ ಸಂಸ್ಥಾಪಕ ಸುಪ್ರೀತ್ ಬಿ.ಬೆಳಗಾಂ ಅವರ ನೇತೃತ್ವದಲ್ಲಿ ಕಾರ್ಯಾಗಾರ ನಡೆಯಲಿದೆ ಎಂದು ತಿಳಿಸಿದರು.

ಸೊಫಿಸ್ಟಿಕ್ ಅಕಾಡೆಮಿ ಸಂಸ್ಥಾಪಕ ಸುಪ್ರೀತ್ ಬಿ.ಬೆಳಗಾಂ, ಪ್ರತಿನಿಧಿ ಮಾಧವಿ, ಅಸೋಸಿಯೇಷನ್ ಕಾರ್ಯದರ್ಶಿ ಎಂ.ಎ.ಸಬೀನಾ, ಜಂಟಿ ಕಾರ್ಯದರ್ಶಿ ಸಪ್ನ, ಖಜಾಂಚಿ ಪ್ರತಿಭಾಶೆಟ್ಟಿ, ಸದಸ್ಯ ಆರ್.ಮಾಲಿನಿ, ತರಬೇತುದಾರರಾದ ಉಷಾ ಸುದ್ದಿಗೋಷ್ಠಿಯಲ್ಲಿದ್ದರು.

ಚುನಾವಣಾ ಕರ್ತವ್ಯ ನಿರ್ವಹಣೆಗೆ ತರಬೇತಿಗಳು ಸಹಕಾರಿ

ಜಿಪಂ ಸಿಇಓ, ಜಿಲ್ಲಾ ಮಾದರಿ ನೀತಿ ಸಂಹಿತೆ ನೋಡಲ್ ಅಧಿಕಾರಿ ಕೆ.ಎಂ. ಗಾಯಿತ್ರಿ ಸಮರ್ಥನೆ





ಮೈಸೂರು, ಏ.11– ಚುನಾವಣೆಗೆ ನಿಯೋಜಿತ ಅಧಿಕಾರಿಗಳಿಗೆ ಚುನಾವಣೆ ನಿಯಮಗಳನ್ನು ಸರಿಯಾಗಿ ಅರಿತುಕೊಂಡು ತಂಡದ ರೂಪದಲ್ಲಿ ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಿದಾಗ ಚುನಾವಣೆಯನ್ನು ಯಶಸ್ವಿಗೊಳಿಸಲು ಸಾಧ್ಯ. ಚುನಾವಣಾ ಕರ್ತವ್ಯ ನಿರ್ವಹಣೆಗೆ ತರಬೇತಿಗಳು ಸಹಕಾರಿ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೂ ಆದ ಜಿಲ್ಲಾ ಮಾದರಿ ನೀತಿ ಸಂಹಿತೆ ನೋಡಲ್ ಅಧಿಕಾರಿ ಕೆ.ಎಂ.ಗಾಯತ್ರಿ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕಿನ ಪಟ್ಟಣ ಪಂಚಾಯತ್ ಸಭಾಂಗಣದಲ್ಲಿ ಚುನಾವಣೆಗೆ ಸಂಬಂಧಿಸಿದಂತೆ ಸ್ಥಿರ ಕಣ್ಗಾವಲು ತಂಡ(ಎಸ್‌ಎಸ್‌ಟಿ), ಕ್ಷಿಪ್ರ ಕ್ರಿಯಾ ತಂಡ(ಎಫ್‌ಎಸ್‌ಟಿ) ಹಾಗೂ ಸೆಕ್ಟರ್ ಅಧಿಕಾರಿಗಳಿಗೆ ನಡೆದ ಚುನಾವಣೆ ತರಬೇತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಚುನಾವಣಾ ಸಮಯದಲ್ಲಿ ಒಬ್ಬ ವ್ಯಕ್ತಿ ರೂ. 50 ಸಾವಿರ ರೂಗಳನ್ನು ಮಾತ್ರ ಕೊಂಡೊಯ್ಯಲು ಅವಕಾಶವಿದೆ. ಅದರ ಹೊರತಾಗಿ, ದಾಖಲೆ ರಹಿತ ವಶಪಡಿಸಿಕೊಂಡ 50 ಸಾವಿರ ರೂ.ಗಳನ್ನು ಮೀರಿದ ಹಾಗೂ ರೂ. 10 ಲಕ್ಷಗಳಿಗಿಂತ ಕಡಿಮೆ ಮೊತ್ತವನ್ನು ಜಿಲ್ಲಾ ಮಟ್ಟದ ಕ್ಯಾಶ್ ರಿಲೀಜ್ ಸಮಿತಿಗೆ ಕಳುಹಿಸತಕ್ಕದ್ದು. ದಾಖಲೆ ರಹಿತ ರೂ. 10 ಲಕ್ಷ ಮೀರಿದ ಮೊತ್ತದ ಮಾಹಿತಿಯನ್ನು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳಿಗೆ ನೀಡಬೇಕು ಎಂದು ತಿಳಿಸಿದರು.

ಮತದಾನ ಕೇಂದ್ರದಲ್ಲಿ ಹಿರಿಯ ನಾಗರಿಕರಿಗೆ ತಂಗುದಾಣ, ಕಾಯ್ದಿರಿಸಿದ ಕೊಠಡಿ ವ್ಯವಸ್ಥೆ ಮಾಡುವುದು. ಪುರುಷ ಹಾಗೂ ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯದ ವ್ಯವಸ್ಥೆ ಕಲ್ಪಿಸಬೇಕು ಎಂದು ಹೇಳಿದರು.

ಮತದಾನ ಕೇಂದ್ರಕ್ಕೆ ಮತ ಚಲಾಯಿಸಲು ಬಂದವರಿಗೆ ಶುದ್ಧ ಕುಡಿಯುವ ನೀರಿನ ಜೊತೆಗೆ ಮತಗಟ್ಟೆಯಲ್ಲಿ ಮತ ಚಲಾಯಿಸಲು ಅನುಕೂಲಕರ ವಾತಾವರಣವನ್ನು ಸೃಷ್ಟಿಸುವಂತೆ ತಿಳಿಸಿದರು.

ಪ್ರಾಚ್ಯವಸ್ತು ಸಂಗ್ರಹಾಲಯದ ಆಯುಕ್ತರು ಹಾಗೂ ಮಾದರಿ ನೀತಿ ಸಂಹಿತೆ ಜಿಲ್ಲಾ ನೋಡಲ್ ಅಧಿಕಾರಿ ದೇವರಾಜ್ ಮಾತನಾಡಿ, ಮತಗಟ್ಟೆ ವ್ಯಾಪ್ತಿಯಲ್ಲಿ ಬೂತ್ ಲೆವೆಲ್ ಅಧಿಕಾರಿಗಳಾದ ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆಯರ ಮಾಹಿತಿಯನ್ನು ಸಂಗ್ರಹಿಸಿಕೊಂಡು ಮತದಾರರ ಜಾಗೃತಿ ತಂಡ ರಚಿಸಿಕೊಂಡರೆ ಕರ್ತವ್ಯ ನಿರ್ವಹಿಸಲು ಸಹಕಾರಿಯಾಗಲಿದೆ ಎಂದರು.

ಅಭ್ಯರ್ಥಿಗಳು ಚುನಾವಣೆಗೆ 40 ಲಕ್ಷದವರೆಗೂ ಖರ್ಚು ಮಾಡಬಹುದಾಗಿದ್ದು, ಸಂಬಂಧಿಸಿದ ಅಧಿಕಾರಿಗಳು ಅಭ್ಯರ್ಥಿಗಳ ವೆಚ್ಚದ ಬಗ್ಗೆ ನಿಗಾ ವಹಿಸಬೇಕು. ಅನುಮತಿ ಪಡೆದಿರುವ ವಾಹನಗಳ ಬಳಕೆಗೆ ಅವಕಾಶ ನೀಡಬೇಕು. ಅನುಮತಿಯಿಲ್ಲದೇ ವಾಹನಗಳನ್ನು ಬಳಸಿದರೆ ಕೇಸ್ ದಾಖಲಿಸಿ, ವಶಪಡಿಸಿಕೊಳ್ಳಬೇಕು ಎಂದು ಹೇಳಿದರು. ಪಿರಿಯಾಪಟ್ಟಣ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಶ್ರೀಧರ್ ಮಾತನಾಡಿ, ಚೆಕ್‌ಪೋಸ್ಟ್‌ಗಳಲ್ಲಿ ಹಣ ಅಥವಾ ವಸ್ತುಗಳನ್ನು ವಶಪಡಿಸಿಕೊಂಡ ಸಂದರ್ಭ ಪಂಚನಾಮೆ ಮಾಡುವ ಕ್ರಮ ಹಾಗೂ ಎಫ್‌ಐಆರ್ ದಾಖಲಿಸುವ ಕ್ರಮಗಳ ಕುರಿತು ಸಭೆಗೆ ಮಾಹಿತಿ ನೀಡಿದರು. ತರಬೇತಿಯಲ್ಲಿ ಪಿರಿಯಾಪಟ್ಟಣ ತಹಶೀಲ್ದಾರ್ ಅಹಮದ್, ಇಓ ಸಿ.ಆರ್. ಕೃಷ್ಣಕುಮಾರ್, ಜಿಪಂ ಸಹಾಯಕ ಯೋಜನಾಧಿಕಾರಿ ಎ.ಎನ್.ಸುಬ್ರಮಣ್ಯ ಶರ್ಮ ಸೇರಿದಂತೆ ಇತರೆ ಅಧಿಕಾರಿಗಳು ಇದ್ದರು.

ಕಟ್ಟುನಿಟ್ಟಾಗಿ ಚುನಾವಣಾ ಕರ್ತವ್ಯ ಪಾಲಿಸಿ

ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಸೂಚನೆ



ಮೈಸೂರು, ಏ.11– ತಮ್ಮ ತಮ್ಮ ವ್ಯಾಪ್ತಿಯಲ್ಲಿ ಚುನಾವಣಾ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು. ಸೆಕ್ಟರ್ ಆಫೀಸರ್‌ಗಳು ತಮ್ಮ ವ್ಯಾಪ್ತಿಯ ಮತಗಟ್ಟೆಗಳಲ್ಲಿ ಮತದಾರರ ಮಾಹಿತಿಯ ಬಗ್ಗೆ ಹೆಚ್ಚಿನ ಗಮನಹರಿಸಬೇಕೆಂದು ಜಿಲ್ಲಾಧಿಕಾರಿಗಳೂ ಆದ ಜಿಲ್ಲಾ ಚುನಾವಣಾಧಿಕಾರಿ ಡಾ. ಕೆ.ವಿ.ರಾಜೇಂದ್ರ ತಿಳಿಸಿದರು.

215–ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ FST, SST, VVT, FST, AT ಹಾಗೂ ಸೆಕ್ಟರ್ ಆಫೀಸರ್ ಅಧಿಕಾರಿಗಳಿಗೆ ತಾಲೂಕು ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮತಗಟ್ಟೆಗಳಲ್ಲಿ ಮೂಲಭೂತ ಸೌಕರ್ಯಗಳಿರುವ ಬಗ್ಗೆ ಖಚಿತಪಡಿಸಿಕೊಳ್ಳಿ. ಚೆಕ್‌ಪೋಸ್ಟ್‌ಗಳಲ್ಲಿ ಕೆಲಸ ನಿರ್ವಹಿಸುವವರಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವಂತೆ ತಿಳಿಸಿದರು.

FST, SST ಹಾಗೂ VVT ತಂಡದವರು ತಮಗೆ ನಿಯೋಜಿಸಿರುವ ಕೆಲಸವನ್ನು ಯಾವುದೇ ಲೋಪದೋಷಗಳಿಲ್ಲದೆ ನಿರ್ವಹಿಸಬೇಕು, ತಪ್ಪಿದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಸಭೆಯಲ್ಲಿ 215–ಚಾಮುಂಡೇಶ್ವರಿ ವಿಧಾನ ಕ್ಷೇತ್ರದ ಚುನಾವಣಾಧಿಕಾರಿ ಕಮಲಬಾಯಿ ಹಾಗೂ ಸಹಾಯಕ ಚುನಾವಣಾಧಿಕಾರಿ ಬಿ.ಎನ್.ಗಿರೀಶ್ ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ಈತ : ನಾನು ಬಸ್ ಕಂಪನಿಯವರ ಮೇಲೆ ನಿನ್ನೆ ಸೇಡು ತೀರಿಸಿಕೊಂಡೆ
ಗೆಳೆಯ : ಹೇಗೆ ಅಂತ ಹೇಳ್ತೀಯಾ?
ಆತ : ಟಿಕೆಟ್ ಖರೀದಿಸಿದೆ. ಆದರೆ ನಾನು ಪ್ರಯಾಣ ಮಾಡಲೇ ಇಲ್ಲ!

ಮೈಸೂರು ಮಿತ್ರ
ಬುಧವಾರ, 12 ಏಪ್ರಿಲ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಫಲಭರಿತವಾಗಿರುವ ಮರದ ಕೊಂಬೆಗಳು ಬಾಗುವುದು ಸಹಜ. ಅಂತೆಯೇ, ನೀನು ಮಹಾನ್ ವ್ಯಕ್ತಿಯಾಗಬೇಕಾದಲ್ಲಿ ತಗ್ಗಿ ಬಗ್ಗಿ ನಡೆಯುವುದನ್ನು ಕಲಿ.
–ರಾಮಕೃಷ್ಣ ಪರಮಹಂಸ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು
ಉಂಡ ಎಲೆ ಎತ್ತು ಅಂದ್ರೆ
ಉಂಡೋರು ಎಷ್ಟು ಜನ ಅಂದ್ನಂತೆ

ನಿಮ್ಮ ಪತ್ರಗಳು

ಗ್ಯಾಸ್ ಸಿಲಿಂಡರ್ ವಿತರಣಾ ಶುಲ್ಕಕ್ಕೆ ಕಡಿವಾಣ ಅಗತ್ಯ

ಮಾನ್ಯರೆ,



ಈಗಾಗಲೇ ಗ್ಯಾಸ್ ಬೆಲೆ ಏರಿಕೆಯಿಂದ ತತ್ತರಿಸಿರುವ ಸಾಮಾನ್ಯ ಜನತೆ ಗ್ಯಾಸ್ ಸಿಲಿಂಡರ್ ವಿತರಣಾ ಶುಲ್ಕವನ್ನು ಭರಿಸಿ ಹೈರಾಣಾಗುತ್ತಿದ್ದಾರೆ. ಏಜೆನ್ಸಿಗಳ ಕಡೆಯಿಂದ ಇದೊಂದು ಬಗೆಯ ಹಗಲು ದರೋಡೆ ಎನ್ನಬಹುದು. ಎಷ್ಟೋ ಜನ ಇದರ ಸಹವಾಸವೇ ಬೇಡವೆಂದು ಸೌದೆ ಒಲೆಯ ಕಡೆ ಮುಖ ಮಾಡುತ್ತಿರುವುದಂತೂ ಸುಳ್ಳಲ್ಲ.

ಪಿರಿಯಾಪಟ್ಟಣ ತಾಲೂಕಿನ ರಾವಂದೂರು ಹೋಬಳಿಯಲ್ಲಿ ಕೆಳಗನಹಳ್ಳಿಗೆ ಹೋಗುವ ರಸ್ತೆಯಲ್ಲಿ ಗ್ಯಾಸ್ ವಿತರಣೆ ಏಜೆನ್ಸಿಯೊಂದು ಇದೆ. ಇದು ರಾವಂದೂರು ಹೋಬಳಿಯ ಸುತ್ತಲಿನ ಇಂಡೇನ್ ಗ್ಯಾಸ್ ಸಿಲಿಂಡರ್ ಗ್ರಾಹಕರಿಗೆ ವಿತರಣೆ ಮಾಡುವ ಕೆಲಸ ಮಾಡುತ್ತಿದೆ. ಇತ್ತೀಚೆಗೆ ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿಯ ಆದೇಶದಂತೆ ಗ್ಯಾಸ್ ವಿತರಣೆಯ ಸಮಯದಲ್ಲಿ ವಿತರಕರಿಗೆ ಯಾವುದೇ ಕಾರಣಕ್ಕೂ ವಿತರಣೆಯ ಶುಲ್ಕವನ್ನು ಭರಿಸಕೂಡದು. ಈಗಾಗಲೇ ಇರುವ 14ಕೆಜಿಯ ಶುಲ್ಕ 1107.50 ರೂಪಾಯಿಗಳಲ್ಲೇ ಎಲ್ಲವೂ ಒಳಗೊಂಡಿರುತ್ತದೆ ಎಂದು ಹೇಳಿದೆ. ಆದರೆ ಈಗಲೂ ವಿತರಣೆ ಮಾಡುವವರು ಇಲ್ಲ ಸರ್ ಕೊಡಲೇಬೇಕು. ಬೇಕಿದ್ದರೆ ವಿತರಣೆಯ ಕಚೇರಿಗೆ ಕರೆ ಮಾಡಿ ವಿಚಾರಿಸಿ ಎಂದರು. ಕಚೇರಿಗೆ ಫೋನ್ ಮಾಡಿ ವಿಚಾರಿಸಿದರೆ ಹೌದು ಸರ್, ಕಿಲೋಮೀಟರ್ ಲೆಕ್ಕದಲ್ಲಿ ಕೊಡಬೇಕು. ನಿಮ್ಮದು ಅರೇನಹಳ್ಳಿ ಆದ್ದರಿಂದ ರೂ.20 ಕೊಡಿ ಎಂದು ರಾಜಾರೋಷವಾಗಿ ಹೇಳುತ್ತಾರೆ.

ಅಗತ್ಯ ನೋಡಿಕೊಂಡು ಬೇಕಿದ್ದರೆ ತಗೊಳ್ಳಿ ಇಲ್ಲಾಂದ್ರೆ ಬಿಡಿ ಅನ್ನೋ ಉಡಾಫೆಯ ಉತ್ತರವನ್ನು ವಿತರಣೆ ಮಾಡಬಂದವರು ಹಣ ಕೊಡದೇ ಚರ್ಚೆ ಮಾಡಿದರೆ ಹೇಳುವ ಉದಾಹರಣೆಗಳು ಅನೇಕ ನಮ್ಮಲ್ಲಿವೆ. ಒಟ್ಟಿನಲ್ಲಿ ಹೇಗಾದರೂ ಸರಿ ನಾವು ಬಂದು ನಿಮ್ಮ ಮನೆ ಬಾಗಿಲಿಗೆ ವಿತರಣೆ ಮಾಡಿಲ್ಲವೇ ಅಂತ ಹೇಳಿ ವಸೂಲಿ ಮಾಡುತ್ತಿದ್ದಾರೆ. ಇದೆಲ್ಲದರ ಪರಿಣಾಮಗಳ ನಡುವೆ ಮೈಸೂರು ಡಿಸಿಯವರ ಆದೇಶಕ್ಕೆ ಕಿಂಚಿತ್ತು ಬೆಲೆ ಇಲ್ಲವಾಗಿದೆ ಎನ್ನಬಹುದು. ದಯಮಾಡಿ ಇಂಡೇನ್ ಗ್ಯಾಸ್ ವಿತರಣೆಯ ವಿಭಾಗದ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳ ಕಚೇರಿಯ ಸಿಬ್ಬಂದಿ ಇಲ್ಲಿಗೆ ಭೇಟಿ ನೀಡಿ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲು ತುರ್ತಾಗಿ ಮುಂದಾಗಬೇಕು.

–ಎ.ಎಸ್.ಗೋವಿಂದೇಗೌಡ, ಅರೇನಹಳ್ಳಿ, ಪಿರಿಯಾಪಟ್ಟಣ ತಾ.

ನೆಲಕ್ಕೆ ಬಿದ್ದಿರುವ ವೈರ್‌ಗಳಿಂದ ಅನಾಹುತ ತಪ್ಪಿಸಿ!

ಮಾನ್ಯರೆ,



ಮೈಸೂರಿನ ನಜರಬಾದ್‌ನಲ್ಲಿರುವ ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದ ಗೇಟಿನ ಮುಂಭಾಗ ವೈರ್ ಬಿದ್ದಿದ್ದು ಅನಾಹುತಕ್ಕೆ ಆಹ್ವಾನ ನೀಡಿದಂತಿದೆ. ಈ ಮಹಾವಿದ್ಯಾಲಯದ ಗೇಟಿನ ಮುಂಭಾಗದ ಮುಖ್ಯ ದ್ವಾರದಲ್ಲಿ ಪ್ರತಿನಿತ್ಯ ಸಾವಿರಾರು ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ತಿರುಗಾಡುತ್ತಾರೆ. ಅಲ್ಲದೆ, ಕಾಲೇಜಿಗೆ ದ್ವಿಚಕ್ರ ಮತ್ತು ನಾಲ್ಕು ಚಕ್ರದ ವಾಹನಗಳಲ್ಲಿ ಓಡಾಡುವುದುಂಟು. ಆದರೆ ಕಾಲೇಜಿನ ಗೇಟಿನ ಮುಂಭಾಗದಲ್ಲಿ ವಿದ್ಯುತ್ ಕಂಬಗಳಿದ್ದು, ಆ ಕಂಬಗಳಲ್ಲಿ ಕೇಬಲ್ ವೈರ್‌ಗಳನ್ನು ಸುತ್ತಿದ್ದು ವೈರ್‌ಗಳು ಕಳಚಿ ನೆಲಕ್ಕೆ ಬಿದ್ದಿದೆ. ಅದರ ಮೇಲೆಯೇ ನಡೆದಾಡುವಾಗ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ತುಂಬಾ ತೊಂದರೆಯಾಗುತ್ತಿದೆ. ಇದರಿಂದ ಅನಾಹುತ ಸಂಭವಿಸುವ ಸಾಧ್ಯತೆಗಳು ಇದೆ. ಕೂಡಲೇ ಸಂಬಂಧಪಟ್ಟವರು ಇದನ್ನು ಸರಿಪಡಿಸಲು ಮುಂದಾಗಬೇಕು ಹಾಗೂ ವಿದ್ಯುಚ್ಛಕ್ತಿ ಮಂಡಳಿಯವರು ವಿದ್ಯುತ್ ಕಂಬಗಳಿಗೆ ಬೇರೆ ವೈರ್‌ಗಳನ್ನು ಅಳವಡಿಸುವುದಕ್ಕೆ ಅವಕಾಶ ನೀಡಬಾರದು.

–ನಾಗೇಶ್, ಮಾನಸಗಂಗೋತ್ರಿ

ಅಮುಲ್ ಬಗ್ಗೆ ರಾಜಕೀಯ ಸಲ್ಲದು!


ಮಾನ್ಯರೆ,

ರಾಜ್ಯ ವಿಧಾನಸಭೆ ಚುನಾವಣೆ ಸಂದರ್ಭದಲ್ಲೇ ಗುಜರಾತ್ ಮೂಲದ ಹೈನು ಉತ್ಪನ್ನ ಸಂಸ್ಥೆ 'ಅಮುಲ್' ಕರ್ನಾಟಕ ಪ್ರವೇಶ ಮಾಡುತ್ತಿರುವುದು ವಿವಾದಕ್ಕೆ ಕಾರಣವಾಗಿದೆ. ಆಡಳಿತ ಪಕ್ಷದವರು ಅಮುಲ್ ಆಗಮನವನ್ನು ಸ್ವಾಗತಿಸದಿದ್ದರೂ, ವಿರೋಧಿಸುವ ಕಾರ್ಯ ಮಾಡುತ್ತಿಲ್ಲ. ಆದರೆ ವಿರೋಧ ಪಕ್ಷಗಳು ಮಾತ್ರ ತೀವ್ರ ವಿರೋಧ ವ್ಯಕ್ತಪಡಿಸುತ್ತಿದ್ದು, ಅಮುಲ್ ಆಗಮನ ರಾಜ್ಯದ ಜನಪ್ರಿಯ ಉತ್ಪನ್ನವಾದ ನಂದಿನಿಗೆ ಅಡ್ಡಿ ಮಾಡಲು ಎಂದೇ ಬಣ್ಣಿಸುತ್ತಿರುವುದು ವಿಷಾದಕರವಾಗಿದೆ.

ನಂದಿನಿ ಬ್ರ್ಯಾಂಡ್ ಕರ್ನಾಟಕದ ಹೆಮ್ಮೆ. ಅದು ಅಕ್ಷರಶಃ ಸತ್ಯ. ಅದು ಮತ್ತಷ್ಟು ಬೆಳೆಯಬೇಕೆನ್ನುವುದು ರಾಜ್ಯ ಸರ್ಕಾರದ ಹಾಗೂ ನಮ್ಮ ಕನ್ನಡಿಗರ ಪ್ರಮುಖ ಆದ್ಯತೆ. ನಂದಿನಿ ಉತ್ಪನ್ನಗಳು ನಮ್ಮ ರಾಜ್ಯದ ಮೂಲೆ ಮೂಲೆಗಳಲ್ಲಿ ಮಾರಾಟ ಆಗುವುದರ ಜೊತೆಗೆ, ಹೊರ ರಾಜ್ಯದಲ್ಲೂ ಉತ್ತಮ ಮಾರುಕಟ್ಟೆಯನ್ನು ಹೊಂದಿದೆ. ಅದರಂತೆ ಅಮುಲ್ ಅಲ್ಲದೇ ಹೊರ ರಾಜ್ಯದ ಆರೋಕ್ಯ, ಹೆರಿಟೇಜ್, ದೊಡ್ಲಾ ಸೇರಿದಂತೆ ಹಲವು ಹಾಲು ಹಾಗೂ ಹಾಲಿನ ಉತ್ಪನ್ನಗಳು ನಮ್ಮ ರಾಜ್ಯದಲ್ಲೂ ಕೂಡ ಮಾರಾಟವಾಗುತ್ತಿವೆ. ಅವುಗಳಲ್ಲಿ ಅಮುಲ್ ಉತ್ಪನ್ನಗಳು ಕೂಡ ಒಂದು. ಇಷ್ಟಕ್ಕೂ ರಾಜ್ಯದಲ್ಲಿ ಅಮುಲ್ ಹಾಲು ಮತ್ತು ಮೊಸರು ಖರೀದಿ ಜನರ ಆಯ್ಕೆಗೆ ಬಿಟ್ಟ ವಿಚಾರವೇ ಹೊರತು, ಚುನಾವಣಾ ಸಂದರ್ಭದಲ್ಲಿ ಅಮುಲ್ ಅನ್ನು ರಾಜಕೀಯ ಅಸ್ತ್ರವಾಗಿ ಬಳಕೆ ಮಾಡುತ್ತಿರುವುದು ತರವಲ್ಲ.

ಪ್ರಸ್ತುತ ನಾವು ಅಮುಲ್ ಅನ್ನು ವಿರೋಧಿಸುತ್ತಿರುವಂತೆ, ನಮ್ಮ ರಾಜ್ಯದ ನಂದಿನಿ ಉತ್ಪನ್ನಗಳನ್ನು ಹೊರ ರಾಜ್ಯದವರು ವಿರೋಧಿಸುತ್ತಿದ್ದಾರೆಯೇ? ನಮ್ಮ ರಾಜ್ಯದ ಉತ್ಪನ್ನಗಳಿಗೆ ಹೊರ ರಾಜ್ಯದಲ್ಲಿ ಬೇಡಿಕೆಗಳು ಹೆಚ್ಚಾದಾಗ ಅದಕ್ಕೆ ತಕ್ಕಂತೆ ನಾವುಗಳು ಉತ್ಪಾದನೆಯನ್ನು ಹೆಚ್ಚು ಮಾಡುತ್ತಿಲ್ಲವೇ? ವ್ಯಾಪಾರ ಅಂದ ಮೇಲೆ ಪರಸ್ಪರ ಕೊಂಡು ಕೊಳ್ಳುವಿಕೆ ಇದ್ದೇ ಇರುತ್ತದೆ. ನಮ್ಮ ಸಂಕುಚಿತ ಬುದ್ಧಿಯಿಂದ ಒಕ್ಕೂಟ ವ್ಯವಸ್ಥೆಯಲ್ಲಿ ಧಕ್ಕೆ ತರುವ ರೀತಿಯಲ್ಲಿ ನಾವು ವರ್ತಿಸುತ್ತಿರುವುದು ಬೇಸರದ ಸಂಗತಿ. ಇಷ್ಟಕ್ಕೂ ಮಹಾತ್ಮಗಾಂಧಿ, ಅಂಬೇಡ್ಕರ್‌ರಂತಹ ಮಹಾನ್ ನಾಯಕರನ್ನು ಆಯಾಯ ರಾಜ್ಯಕ್ಕೆ ಸೀಮಿತಗೊಳಿಸಿದ್ದರೆ, ಅವರು ರಾಷ್ಟ್ರೀಯ ನಾಯಕರು ಆಗುತ್ತಿದ್ದರೆ? ವಿಶಾಲ ಮನೋಭಾವನೆ, ವಿಶಾಲ ದೃಷ್ಟಿಕೋನ ಇದ್ದಷ್ಟು ಒಳ್ಳೆಯದು. ಹೀಗಾಗಿ ನಿಜವಾದ ಅರ್ಥ ವ್ಯವಸ್ಥೆಯ ಬಗ್ಗೆ ಅರಿವಿಲ್ಲದೆ ಮಾತನಾಡುವವರ ಮಾತಿಗೆ ಅಂಕುಶ ಹಾಕುವುದೊಳಿತು.

– ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಆದಿತ್ಯ ಹೃದಯ

ಜಗತ್ತಿನಲ್ಲಿ ಅತ್ಯಂತ ಪೂಜ್ಯನಾಗಿರುವವನು ಸೂರ್ಯ. ನಾವು ಪೂಜಿಸುವ ಬ್ರಹ್ಮ, ವಿಷ್ಣು, ಮಹೇಶ್ವರ ಮುಂತಾದ ದೇವತೆಗಳನ್ನು ಪ್ರತ್ಯಕ್ಷವಾಗಿ ನಾವು ನೋಡಿಲ್ಲ. ಆದರೆ ಎಲ್ಲರೂ ನೋಡಿರುವ, ಎಲ್ಲರ ಬದುಕಿಗೆ ಆಧಾರವಾಗಿರುವ ಸೂರ್ಯನು ಪ್ರತ್ಯಕ್ಷ ದೇವರು. ಋಗ್ವೇದವು "ಸೂರ್ಯ ಆತ್ಮಾ ಜಗತಃ ತಸ್ಥುಷಶ್ಚ" ಎಂದು ಹೇಳಿದೆ. ಚಲಿಸುವ ಮತ್ತು ಚಲಿಸದಿರುವ ಎಲ್ಲಾ ಜೀವಗಳ ಪ್ರಾಣಶಕ್ತಿಯು ಸೂರ್ಯನೇ ಎಂಬುದು ಈ ಮಾತಿನ ಅರ್ಥ. ಚಲಿಸುವ ಯಾವ ಪ್ರಾಣಿಯೂ, ಅದು ಅತ್ಯಂತ ಚಿಕ್ಕದಾದ ಏಕಾಣುಜೀವಿ ಆಗಿರಲಿ ಅಥವಾ ಬೃಹತ್ತಾದ ನೀಲಿ ತಿಮಿಂಗಿಲವಾಗಿರಲಿ, ಸೂರ್ಯನಿಂದ ಶಾಖವನ್ನು ಪಡೆಯದಿದ್ದರೆ ಒಂದು ಕ್ಷಣವೂ ಬದುಕಿರಲಾರದು. ಚಲಿಸದೆ ಒಂದೇ ಸ್ಥಳದಲ್ಲಿರುವ ಗಿಡ, ಮರ, ಬಳ್ಳಿ ಮುಂತಾದ ಸಸ್ಯಗಳೂ ಸೂರ್ಯನ ಬೆಳಕಿನಿಂದ ಶಕ್ತಿಯನ್ನು ಪಡೆದು ಬದುಕುತ್ತವೆ ಎಂಬುದು ವೈಜ್ಞಾನಿಕ ಸತ್ಯ. ವಿಶ್ವಪ್ರಸಿದ್ಧವಾದ ಗಾಯತ್ರೀ ಮಂತ್ರವು 'ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ । ಧಿಯೋ ಯೋ ನಃ ಪ್ರಚೋದಯಾತ್' ಎಂದು ಸೂರ್ಯನ ಪ್ರಾರ್ಥನೆಯನ್ನೇ ಮಾಡುತ್ತದೆ. ಇದರಲ್ಲಿ ಬುದ್ಧಿಗೆ ಪ್ರಚೋದನೆಯನ್ನು ನೀಡುವ ಸೂರ್ಯನನ್ನು ಸವಿತೃ ಎಂದು ಕರೆಯಲಾಗಿದೆ. ಸೂರ್ಯನಿಲ್ಲದೆ ಮಳೆಯಿಲ್ಲ, ಮಳೆಯಿಲ್ಲದೆ ನೀರಿಲ್ಲ, ನೀರಿಲ್ಲದೆ ಬದುಕಿಲ್ಲ ಎಂಬುದು ವಾಸ್ತವ.

ವಾಲ್ಮೀಕಿ ರಾಮಾಯಣದ ಯುದ್ಧಕಾಂಡದಲ್ಲಿ ಕಪಿಸೈನ್ಯಕ್ಕೂ ರಾಕ್ಷಸರಿಗೂ ಘೋರ ಯುದ್ಧವು ನಡೆಯುತ್ತದೆ. ಉಭಯ ಪಕ್ಷಗಳ ಸಹಸ್ರಾರು ಯೋಧರು ಸಾವನ್ನಪ್ಪುತ್ತಾರೆ. ರಾಮ ಲಕ್ಷ್ಮಣರು ಮುಂಚೂಣಿಯಲ್ಲಿದ್ದು ಹೋರಾಡುತ್ತಾರೆ. ಸತತವಾಗಿ ಯುದ್ಧವನ್ನು ಮಾಡಿ ದೇವಾಂಶ ಸಂಭೂತನೂ ವಿಷ್ಣುವಿನ ಅವತಾರವೂ ಆಗಿದ್ದ ಶ್ರೀರಾಮನೂ ದಣಿದು ಬಳಲಿಕೆಯಿಂದ ಕುಳಿತು ಚಿಂತಾಕ್ರಾಂತನಾಗುತ್ತಾನೆ. ಆ ಸಂದರ್ಭದಲ್ಲಿ ಅವನ ದೇಹದಲ್ಲಿ ಶಕ್ತಿಯನ್ನೂ ಮನಸ್ಸಿನಲ್ಲಿ ಉತ್ಸಾಹವನ್ನು ತುಂಬಿಸುವುದಕ್ಕಾಗಿ ಮಹರ್ಷಿ ಭಗವಾನ್ ಅಗಸ್ತ್ಯರು ಅಲ್ಲಿ ಕಾಣಿಸಿಕೊಂಡು ಉಪದೇಶಿಸಿದ ಮಂತ್ರವೇ ಆದಿತ್ಯ ಹೃದಯ. ಇದು ವಾಲ್ಮೀಕಿ ರಾಮಾಯಣದ ಯುದ್ಧ ಕಾಂಡದ ನೂರೈದನೆಯ ಸರ್ಗದಲ್ಲಿದೆ. ಇದರಲ್ಲಿ ಮೂವತ್ತೊಂದು ಶ್ಲೋಕಗಳಿವೆ. ಅನೇಕ ಆಸ್ತಿಕರು ಇದರ ಪಾರಾಯಣವನ್ನು ಮಾಡುತ್ತಾರೆ.

ಜಗದೇಕವೀರನೂ ಧನುರ್ವೇದ ಪಾರಂಗತನೂ ಆಗಿದ್ದ ಶ್ರೀರಾಮನೂ 'ನಾನು ಆ ರಾವಣನನ್ನು ಸೋಲಿಸಬಲ್ಲೆನೇ' ಎಂದು ಸಂಶಯಕ್ಕೆ ಒಳಗಾಗಿದ್ದ ಸನ್ನಿವೇಶ–ಇದು ರಾಮನಿಗೆ ಮಾತ್ರವಲ್ಲ. ಸಮಸ್ತ ಮಾನವರಿಗೂ ಒದಗಬಹುದಾದ ಪರಿಸ್ಥಿತಿ. ಅಂತಹ ಸಂದರ್ಭದಲ್ಲಿ ಆದಿತ್ಯ ಹೃದಯದ ಪಠನ ಮತ್ತು ಅರ್ಥಾನುಸಂಧಾನ ಹೃದಯಕ್ಕೂ ಮನಸ್ಸಿಗೂ ಅಪಾರ ಶಕ್ತಿಯನ್ನು ನೀಡುತ್ತದೆ. ಆದಿತ್ಯ ಎಂದರೇನು? ಕೇವಲ ಪೌರಾಣಿಕ ಕಥೆಯನ್ನು ಅವಲಂಬಿಸಿ ಹೇಳುವುದಾದರೆ ಕಶ್ಯಪನಿಗೆ ಅದಿತಿ, ದಿತಿ ಎಂಬ ಇಬ್ಬರು ಪತ್ನಿಯರಿದ್ದರು. ಅದಿತಿಯ ಮಗ ಆದಿತ್ಯ, ದಿತಿಯ ಮಕ್ಕಳು ದೈತ್ಯರು. ಆದರೆ ವೈಜ್ಞಾನಿಕ ಚಿಂತನೆಯಲ್ಲಿ ಆದಿತ್ಯ ಎಂದರೇನು? ವಿಷ್ಣು ಸಹಸ್ರನಾಮ ಭಾಷ್ಯದಲ್ಲಿ **ಸ್ವಯಂಭೂಃ ಶಂಭುರಾದಿತ್ಯಃ** ಎಂಬ ಶ್ಲೋಕದಲ್ಲಿ ವಿಷ್ಣುವಿನ ಒಂದು ನಾಮವಾಗಿ ಆದಿತ್ಯ ಶಬ್ದವು ಬಂದಿದೆ. ಶ್ರೀ ಶಂಕರಾಚಾರ್ಯರು "ಆದಿತ್ಯ ಮಂಡಲ ಸ್ಥೋ ಹಿರಣ್ಮಯಃ ಪುರುಷಃ ಆದಿತ್ಯಃ । ದ್ವಾದಶಾದಿತ್ಯೇಷು ವಿಷ್ಣುರ್ವಾ। ಆದಿತ್ಯಾನಾಮಹಂ ವಿಷ್ಣುಃ ಇತ್ಯುಕ್ತಃ । ಅದಿತೇರಖಂಡಿತಾಯಾ ಮಹಾಽ ಅಯಂ ಪತಿರಿತಿ ವಾ। ಇಯಂ ವಾ ಅದಿತಿಃ, ಮಹೀಂ ದೇವೀಂ ವಿಷ್ಣು ಪತ್ನೀಮ್ ಇತಿ ಶ್ರುತೇಃ। ಎಂದು ವಿವರಣೆಯನ್ನು ಕೊಟ್ಟಿದ್ದಾರೆ.

ದಿತಿ ಎಂದರೆ ವಿಭಜನೆಗೆ ಒಳಪಡುವ ಶಕ್ತಿ. ಅದಿತಿ ಎಂದರೆ ವಿಭಜನೆಗೆ ಒಳಗಾಗದ ಆದಿಶಕ್ತಿ. ಸೃಷ್ಟಿಗೆ ಮೊದಲು ವಿಭಜನೆಗೆ ಅತೀತವಾದ ಆದಿಶಕ್ತಿಯಿಂದ ಉದ್ಭವಿಸಿದವನು ಆದಿತ್ಯ– ಎಂದು ಇರಿಂದ ವ್ಯಕ್ತವಾಗುತ್ತದೆ. ಆ ಆದಿತ್ಯನ ಹೃದಯರೂಪವಾಗಿರುವ ಅಂತಸತ್ತ್ವವನ್ನು ಅನುಸಂಧಾನ ಮಾಡಿಕೊಂಡು ಆದಿತ್ಯ ಹೃದಯವನ್ನು ಪಠಿಸಬೇಕು.

ಇನ್ನು ಇದನ್ನು ಉಪದೇಶ ಮಾಡಿದವನು ಅಗಸ್ತ್ಯ ಮಹರ್ಷಿ. ಅಗಸ್ತ್ಯ ಎಂಬ ಶಬ್ದದ ಅರ್ಥವೇನು? ಅಗ ಎಂದರೆ ಬೆಟ್ಟ, ವಿಂಧ್ಯ ಪರ್ವತ ಹದ್ದು ಮೀರಿ ಬೆಳೆಯುತ್ತಿದ್ದಾಗ ಅದರ ವೃದ್ಧಿ ಅಷ್ಟು ಸಾಕು ಎಂದು ನಿಲ್ಲಿಸಿದ ಮಹರ್ಷಿ. ಎಂದರೆ ಜಗತ್ತಿನ ಆಗುಹೋಗುಗಳನ್ನೆಲ್ಲಾ ಅರಿತಿದ್ದ ಜ್ಞಾನಿ. ಪ್ರಪಂಚಕ್ಕೆ ರಾವಣನಂತಹವರಿಂದ ಹಾನಿಯಾಗಬಾರದು. ರಾಮನ ಜಯ ಧರ್ಮವು ಉಳಿಯುವುದಕ್ಕೆ ಆವಶ್ಯಕ ಎಂದು ಅರಿತ ಅಗಸ್ತ್ಯ ತಾನೇ ಅಪ್ರಾರ್ಥಿತನಾಗಿ ಅಲ್ಲಿಗೆ ಬಂದು ಆದಿತ್ಯ ಹೃದಯವನ್ನು ಉಪದೇಶದ ಮಾಡಿದ್ದಾನೆಂದ ಮೇಲೆ ಅದರ ಮಹಿಮೆಯನ್ನು ಬೇರೆ ಹೇಳಬೇಕಾಗಿಲ್ಲ.

ಆದಿತ್ಯ ಹೃದಯಂ ಪುಣ್ಯಂ
ಸರ್ವ ಶತ್ರು ವಿನಾಶನಮ್ ।
ಜಯಾವಹಂ ಜಪೇನ್ನಿತ್ಯಂ
ಅಕ್ಷಯಂ ಪರಮಂ ಶಿವಮ್ ॥

ಈ ಆದಿತ್ಯ ಹೃದಯ ಪುಣ್ಯರೂಪವಾದದ್ದು. ಒಳಗಿನ ಮತ್ತು ಹೊರಗಿನ ಎಲ್ಲಾ ಶತ್ರುಗಳನ್ನು ನಾಶಪಡಿಸುತ್ತೇವೆ. ಜಯವನ್ನು ತರುವುದು. ಕ್ಷಯವಿಲ್ಲದ, ಪರಮಮಂಗಳವಾದ ಸ್ತೋತ್ರವನ್ನು ಸದಾ ಜಪಿಸಬೇಕು.

ಸೂರ್ಯನಿಂದಲೇ ಸಕಲ ಜಗತ್ತೂ ಜೀವವನ್ನು ಪಡೆದಿರುವುದು, ನಿಜವಾದ ದೇವ ಎಂದರೆ ಸೂರ್ಯನೇ ಎಂಬುದನ್ನೂ ಆದಿತ್ಯ ಹೃದಯ ಸ್ತೋತ್ರವು ತಿಳಿಸಿದೆ. ಮನುಷ್ಯರು ಮಾತ್ರವಲ್ಲ, ಸುರಾಸುರರೆಲ್ಲ ಸೂರ್ಯನನ್ನು ಅವಲಂಬಿಸಿದ್ದಾರೆ ಎಂದು ಹೇಳಿದೆ.

ಸರ್ವ ದೇವಾತ್ಮಕೋ ಹ್ಯೇಷ
ತೇಜಸ್ವೀ ರಶ್ಮಿಭಾವನಃ।
ಏಷ ದೇವಾಸುರಗಣಾನ್
ಲೋಕಾನ್ ಪಾತಿ ಗಭಸ್ತಿಭಿಃ॥

ಈ ಸೂರ್ಯನೇ ಎಲ್ಲಾ ದೇವತೆಗಳನ್ನು ತನ್ನಲ್ಲಿ ಒಳಗೊಂಡಿದ್ದಾನೆ. ಕಿರಣಗಳಿಂದ ಇವನೇ ಎಲ್ಲರನ್ನೂ ಕಾಪಾಡುತ್ತಿರುವುದು. ದೇವತೆಗಳ ಮತ್ತು ಅಸುರರ ಸಮೂಹಗಳನ್ನು ಲೋಕಗಳನ್ನೂ ಇವನೇ ರಕ್ಷಿಸುತ್ತಿದ್ದಾನೆ.

ಇಲ್ಲಿ ಸರ್ವ ದೇವಾತ್ಮಕ ಎಂಬ ಪದವನ್ನು ವಿಶೇಷ ಗಮನವಿಟ್ಟು ನೋಡಬೇಕು. ಎಲ್ಲಾ ದೇವತೆಗಳೂ ಒಬ್ಬ ದೇವನ ರೂಪ ವಿಶೇಷಗಳೇ. ಒಂದೇ ವಿದ್ಯುಚ್ಛಕ್ತಿ ನಾನಾ ದೀಪಗಳ ರೂಪಗಳಲ್ಲಿ ಕಂಡು ಬರುವುದಲ್ಲವೆ? ನಾವು ನಾನಾ ನಾಮಗಳಿಂದ, ಎಂದರೆ ಅನೇಕ ಹೆಸರುಗಳಿಂದ ಕರೆಯುವುದು ಸೂರ್ಯನನ್ನೇ ರಶ್ಮಿಭಾವನಃ ಎಂದರೆ ತನ್ನ ಕಿರಣಗಳಿಂದ ಪ್ರಾಣಗಳನ್ನು ಕೊಡುವವನೆಂದು ತಾತ್ಪರ್ಯ. ದೇವ, ಅಸುರ ಇವರೆಲ್ಲ ಭೂಮಿಯ ಬೇರೆ ಬೇರೆ ಭಾಗಗಳಲ್ಲಿರುವ ಜೀವರು. ಅಲ್ಲದೆ ಎಲ್ಲ ಲೋಕಗಳಿಗೆ ಬೆಳಕನ್ನು ಕೊಟ್ಟು ಕಾಪಾಡುತ್ತಿರುವವನೂ ಸೂರ್ಯನೇ. ಇಲ್ಲಿರುವ ಗಭಸ್ತಿ ಎಂಬ ಶಬ್ದಕ್ಕೂ ಕಿರಣ ಎಂಬ ಅರ್ಥವೇ ಇದೆ.

ಈ ಸ್ತೋತ್ರದಲ್ಲಿ ಹೇಳಿರುವ ಸೂರ್ಯನ ನಾನಾ ಹೆಸರುಗಳನ್ನು ಗಮನಿಸಬೇಕು. ಆದಿತ್ಯ, ಸವಿತಾ, ಸೂರ್ಯ, ಖಗಃ, ಪೂಷನ್, ಗಭಸ್ತಿಮಾನ್, ಭಾನು, ಹಿರಣ್ಯರೇತಸ್, ದಿವಾಕರಃ, ಹರಿದಶ್ವ, ಸಹಸ್ರಾರ್ಚಿ, ಸಪ್ತಸಪ್ತಿ, ಮರೀಚಿಮಾನ್, ತಿಮಿರೋನ್ಮಥನಃ, ಶಂಭು, ತ್ವಷ್ಟಾ, ಮಾರ್ತಂಡ, ಅಂಶುಮಾನ್, ಹಿರಣ್ಯಗರ್ಭ, ಶಿಶಿರ, ತಪನ, ಅಹಸ್ಕರ, ರವಿ, ಅಗ್ನಿಗರ್ಭ, ಅದಿತಿ ಪುತ್ರ, ಶಂಖ, ಶಿಶಿರನಾಶನ, ವ್ಯೋಮನಾಥ, ತಮೋಭೇದೀ, ಋಗ್ಯಜುಸ್ಸಾಮಪಾರಗಃ, ಘನವೃಷ್ಟಿ, ಅಪಾಂಮಿತ್ರ, ವಿಂಧ್ಯವೀಥಿಪ್ಲವಂಗಮ, ಆತಪೀ, ಮಂಡಲೀ, ಮೃತ್ಯು, ಪಿಂಗಳ, ಸರ್ವತಾಪನ, ಕವಿ, ವಿಶ್ವ, ಮಹಾತೇಜ, ರಕ್ತ ಸರ್ವಭೂವೋದ್ಭವ, ನಕ್ಷತ್ರ ಗ್ರಹತಾರಾಧಿಪ, ವಿಶ್ವಭಾವನ, ತೇಜಸಾಂ ತೇಜಸ್ವೀ, ದ್ವಾದಶಾತ್ಮನ್ ಎಂಬ ನಲವತ್ತೇಳು ಹೆಸರುಗಳು ಇಲ್ಲಿವೆ. ಒಂದೊಂದು ಹೆಸರಿನಲ್ಲೂ ಸೂರ್ಯನ ಬೇರೆ ಬೇರೆ ಗುಣಗಳ ಅಭಿಪ್ರಾಯವೂ ಸೇರಿದೆ. ಆದಿತ್ಯ ಎಂಬುದರ ಬಗೆಗೆ ಮೊದಲೇ ಹೇಳಿದ್ದೇವೆ. ಸವಿತಾ (ಸವಿತೃ) ಎಂಬುದರ ಅರ್ಥವೇನೆಂದರೆ ಲೋಕವನ್ನು ಕೆಲಸದಲ್ಲಿ ತೊಡಗಿಸಿ ಪ್ರೇರಣೆಯನ್ನು ಕೊಡುವವನು. ಖಗ ಎಂದರೆ ಆಕಾಶದಲ್ಲಿ ಸಂಚರಿಸುವವನು. ಪೂಷನ್ ಎಂದರೆ ಜಗತ್ತಿನ ಎಲ್ಲ ಚರಾಚರ ಜೀವಿಗಳಿಗೆ ಪೋಷಣೆಯನ್ನು ನೀಡುವವನು. ಗಭಸ್ತಿಮಾನ್ ಎಂದರೆ ಲೆಕ್ಕ ಮಾಡಲಾಗದಷ್ಟು ಕಿರಣಗಳನ್ನು ಹೊಂದಿದವನು, ಭಾನು ಎಂದರೆ ಸದಾ ಹೊಳೆಯುತ್ತಿರುವವನು, ಹಿರಣ್ಯರೇತಸ್ ಎಂದರೆ ಚಿನ್ನವನ್ನು ತನ್ನ ಶಕ್ತಿಯಿಂದ ಉತ್ಪಾದಿಸುವವನು, ದಿವಾಕರ ಎಂದರೆ ಹಗಲನ್ನು ಲೋಕದಲ್ಲಿ ಉಂಟು ಮಾಡುವವನು, ಹರಿದಶ್ವ ಎಂದರೆ ಎಲ್ಲ ದಿಕ್ಕುಗಳಲ್ಲಿ ತನ್ನ ಕಿರಣಗಳನ್ನು ಕುದುರೆಗಳಂತೆ ಕಳುಹಿಸುವವನು, ಸಹಸ್ರಾರ್ಚಿ ಎಂದರೆ ಸಾವಿರ ಜ್ವಾಲೆಗಳಿಂದ ಶೋಭಿಸುವವನು. ಸಪ್ತಸಪ್ತಿ ಎಂದರೆ ಏಳು ಕುದುರೆಗಳ ರಥದಲ್ಲಿ ಪಯಣಿಸುವವನು. ಅವನ ಕಿರಣ ಒಂದೇ ಬಣ್ಣವಾಗಿ, ಬಿಳಿಯದಾಗಿ ಕಾಣಿಸಿದರೂ ಅದರಲ್ಲಿ ಏಳು ಬಣ್ಣಗಳೂ ಸೇರಿವೆ ಎಂಬುದು ಸಪ್ತಸಪ್ತಿ ಎಂಬ ಹೆಸರಿನ ಗೂಢಾರ್ಥ. ಹೀಗೆ ಮೇಲೆ ಹೇಳಿರುವ ಎಲ್ಲಾ ಹೆಸರುಗಳ ವಿಶೇಷಾರ್ಥಗಳನ್ನು ತಿಳಿದುಕೊಳ್ಳಬೇಕು.

ನಾಶಯತ್ಯೇಷ ವೈ ಭೂತಂ
ತಮೇವ ಸೃಜತಿ ಪ್ರಭುಃ।
ಪಾಯತ್ಯೇಷ ತಪತ್ಯೇಷ
ವರ್ಷತ್ಯೇಷ ಗಭಸ್ತಿಭಿ॥

ಪ್ರಪಂಚದಲ್ಲಿರುವ ಎಲ್ಲಾ ವಸ್ತುಗಳನ್ನು ನಾಶಪಡಿಸುವವನೂ ಮತ್ತೆ ಅದನ್ನು ಸೃಜಿಸುವವನೂ ಅವನೇ. ಅವನೇ ಒಣಗಿಸುತ್ತಾನೆ. ಅವನೇ ತನ್ನ ಕಿರಣಗಳಿಂದ ಮಳೆಯನ್ನು ತರಿಸುತ್ತಾನೆ. ಎಲ್ಲ ಸಸ್ಯಗಳು ಒಣಗುವುದಕ್ಕೂ ಮತ್ತೆ ಹಸಿರಾಗಿ ಚಿಗುರುವುದಕ್ಕೂ ಸೂರ್ಯನೇ ಕಾರಣ.

ಪೂಜಯಸ್ವೈನಮೇಕಾಗ್ರೋ
ದೇವದೇವಂ ಜಗತ್ಪತಿಮ್ ।
ಏತತ್ ತ್ರಿಗುಣಿತಂ ಜಪ್ತಾ
ಯುದ್ಧೇಷು ವಿಜಯಷ್ಯಸಿ॥

ದೇವತೆಗಳಿಗೂ ದೇವತೆಯಾದ, ಜಗತ್ತುಗಳಿಗೆಲ್ಲ ಒಡೆಯನಾದ ಈ ಸೂರ್ಯನನ್ನು ಏಕಾಗ್ರತೆಯಿಂದ ಪೂಜಿಸು. ಈ ಸ್ತೋತ್ರವನ್ನು ಮೂರು ಸಲ ಜಪಿಸಿದರೆ ನೀನು ಯುದ್ಧದಲ್ಲಿ ವಿಜಯವನ್ನು ಪಡೆಯುವೆ – ಎಂಬುದು ಅಗಸ್ತ್ಯರು ರಾಮನಿಗೆ ಮಾಡಿದ ಉಪದೇಶ.

ಶ್ರೀ ರಾಮನಿಗೆ ಯುದ್ಧಕಾಲದಲ್ಲಿ ಚಿಂತೆ ಉಂಟಾಗಿದ್ದಂತೆ ಪ್ರತಿಯೊಬ್ಬ ಮಾನವನಿಗೂ ಜೀವನದ ಸಂಕಟಮಯ ಕ್ಷಣಗಳಲ್ಲಿ ಚಿಂತೆ ಉಂಟಾಗುತ್ತದೆ. ಅಂತಹ ಸಂದರ್ಭದಲ್ಲಿ ಆದಿತ್ಯ ಹೃದಯದ ಜಪವನ್ನು ಮಾಡಿದರೆ ಮನಸ್ಸಿನಲ್ಲಿ ಆತ್ಮವಿಶ್ವಾಸ ಉದಯಿಸಿ ಧೈರ್ಯ ಹುಟ್ಟುತ್ತದೆ. ಅಸ್ತಮಿಸಿದ ಸೂರ್ಯನು ಮತ್ತೆ ಹುಟ್ಟಿ ಅಂಧಕಾರವನ್ನು ತೊಲಗಿಸುವುದನ್ನು ನೋಡಿದಾಗ ಯಾರಿಗೆ ತಾನೆ ತಮ್ಮ ಕಷ್ಟವೂ ತೊಲಗಿ ಮತ್ತೆ ಶುಭವು ಬರುವುದೆಂಬ ಭಾವನೆ ಉಂಟಾಗದು? ಪ್ರತ್ಯಕ್ಷ ದೇವರಾದ ಸೂರ್ಯನು ಬೇರೆ ಯಾವ ಪೂಜೆಯನ್ನೂ ಅಪೇಕ್ಷಿಸುವುದಿಲ್ಲ. ನಮಸ್ಕಾರ ಒಂದೇ ಸಾಕು. ನಮಸ್ಕಾರ ಪ್ರಿಯೋ ಭಾನುಃ ಎಂಬ ಉಕ್ತಿಯೇ ಇದೆ. ಎಲ್ಲರೂ ಸೂರ್ಯ ನಮಸ್ಕಾರವನ್ನು ಮಾಡಿ ಆರೋಗ್ಯವಂತರಾಗಿ ನಿಶ್ಚಿಂತರಾಗಿ ಬದುಕಿ ಬಾಳಬಹುದು. ಆರೋಗ್ಯಭಾಗ್ಯದ ದಾತಾರನೆಂದರೆ ಸೂರ್ಯ.

ಆರೋಗ್ಯಂ ಭಾಸ್ಕರಾದಿಚ್ಛೇತ್
ಶ್ರಿಯಮಿಚ್ಛೇದ್ ಹುತಾಶನಾತ್ ।
ಜ್ಞಾನಂ ಮಹೇಶ್ವರಾದಿಚ್ಛೇದ್
ಮೋಕ್ಷಮಿಚ್ಛೇತ್ ಜನಾರ್ದನಾತ್ ॥

ಸೂರ್ಯನಿಂದ ಆರೋಗ್ಯವನ್ನು ಪಡೆದುಕೊಳ್ಳಬೇಕು. ಸಂಪತ್ತನ್ನು ಅಗ್ನಿ ದೇವನಿಂದಲೂ, ಜ್ಞಾನವನ್ನು ಮಹೇಶ್ವರನಿಂದಲೂ, ಮುಕ್ತಿಯನ್ನು ವಿಷ್ಣುವಿನಿಂದಲೂ ಪಡೆದುಕೊಳ್ಳಬೇಕು. ಸೂರ್ಯ ನಮಸ್ಕಾರದಿಂದ ಆರೋಗ್ಯವನ್ನು ಪಡೆದರೆ ಆಮೇಲೆ ಹಣಕಾಸು, ಅನಂತರ ಜ್ಞಾನ, ಕೊನೆಗೆ ಮುಕ್ತಿ. ಹೀಗೆ ಸೂರ್ಯನ ಪ್ರಸನ್ನತೆಯನ್ನು ಸಾಧಿಸಿಕೊಳ್ಳಲು ಆದಿತ್ಯ ಹೃದಯದ ಜಪ ಅತ್ಯಂತ ಅನುಕೂಲವಾದ ಮಾರ್ಗ. ಯಾರು ಬೇಕಾದರೂ ಇದನ್ನು ಪಠಿಸಬಹುದು, ಜಪಿಸಬಹುದು. ಸೂರ್ಯಬಿಂಬದ ಮಧ್ಯದಲ್ಲಿ ಶ್ರೀಮನ್ ನಾರಾಯಣನನ್ನು ಮನಸಾ ಆಹ್ವಾನಿಸಿ ಆವಾಹನೆ ಮಾಡಿಕೊಂಡು ಧ್ಯಾನ ಮಾಡಬೇಕು.

ಧ್ಯೇಯಃ ಸದಾ ಸವಿತೃ ಮಂಡಲ ಮಧ್ಯವರ್ತೀ
ನಾರಾಯಣಃ ಸರಸಿಜಾಸನಸಂನಿವಿಷ್ಟಃ।
ಕೇಯೂರವಾನ್ ಮಕರ
ಕುಂಡಲವಾನ್ ಕಿರೀಟೀ
ಹಾರೀ ಹಿರಣ್ಮಯವಪುರ್ಧೃತಶಂಖಚಕ್ರಃ॥

ಎಂಬುದು ಇಲ್ಲಿ ಧ್ಯಾನ ಶ್ಲೋಕ. ಆದಿತ್ಯ ಹೃದಯದ ಜಪವನ್ನು ಮಾಡಿದ ಶ್ರೀರಾಮಚಂದ್ರನಿಗೆ ರಾವಣನ ಮೇಲೆ ವಿಜಯವು ದೊರಕಿದಂತೆ ರಾಮಭಕ್ತರಿಗೂ ವಿಜಯವು ದೊರೆತು ಶುಭವಾಗಲಿ.

ಆನ್‌ಲೈನ್ ತಾಂತ್ರಿಕ ಸಮಸ್ಯೆ ನಿವಾರಣೆ: ಪಾಲಿಕೆ ವಲಯ ಕಚೇರಿಗಳಲ್ಲಿ

ನೀರಿನ ಬಿಲ್, ಆಸ್ತಿ ತೆರಿಗೆ ಪಾವತಿಸಲು ಉತ್ಸಾಹ





ಮೈಸೂರು, ಏ.11(ಆರ್‌ಕೆ)–ಶೇ.5ರಷ್ಟು ರಿಯಾಯಿತಿ ಇರುವುದರಿಂದ ಕುಡಿಯುವ



ನೀರಿನ ಬಿಲ್, ಆಸ್ತಿ ತೆರಿಗೆ ಪಾವತಿಸಲು ಸಾರ್ವಜನಿಕರು ಮೈಸೂರು ಮಹಾನಗರ ಪಾಲಿಕೆಯ ಎಲ್ಲಾ 9 ವಲಯ ಕಚೇರಿಗಳಲ್ಲಿ ಅತೀವ ಉತ್ಸುಕತೆ ತೋರುತ್ತಿದ್ದಾರೆ.

ಏಪ್ರಿಲ್ ತಿಂಗಳಲ್ಲಿ ಬಾಕಿ ತೆರಿಗೆ ವಸೂಲಾತಿಗೆ ಪ್ರತೀ ವರ್ಷ ಪಾಲಿಕೆಯು ಶೇ.5ರ ರಿಯಾಯಿತಿ ನೀಡುತ್ತಿದ್ದು, ಈ ಅವಕಾಶ ಬಳಸಿಕೊಂಡು ಜನರು ವಲಯ ಕಚೇರಿಗೆ ತೆರಳಿ ನೀರಿನ ಬಿಲ್ ಮತ್ತು ಆಸ್ತಿ ತೆರಿಗೆ ಪಾವತಿಸುತ್ತಿದ್ದಾರೆ. ರಜಾ ದಿನಗಳಲ್ಲೂ ಕ್ಯಾಷ್ ಕೌಂಟರ್‌ಗಳನ್ನು ತೆರೆದಿದ್ದರಿಂದ ಕಳೆದ ಶುಕ್ರವಾರ ಮತ್ತು ಶನಿವಾರ ಎರಡೇ ದಿನಗಳಲ್ಲಿ 3.8 ಕೋಟಿ ರೂ. ತೆರಿಗೆ ಸಂಗ್ರಹವಾಗಿತ್ತು. ಸೋಮವಾರ ಮತ್ತು ಮಂಗಳವಾರ ಸೇರಿದಂತೆ 4 ದಿನಗಳಲ್ಲಿ ಒಟ್ಟು 11,611 ಮಂದಿಯಿಂದ 10.37 ಕೋಟಿ ರೂ. ತೆರಿಗೆ ಪಾವತಿಯಾದಂತಾಗಿದೆ ಎಂದು ನಗರಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಅಲ್ಲದೆ ಆನ್‌ಲೈನ್‌ನಲ್ಲೂ ತೆರಿಗೆ ಪಾವತಿಸಲು ಅವಕಾಶವಿದೆಯಾದರೂ, ಸೋಮವಾರ ಸರ್ವರ್ ಡೌನ್ ಆಗುತ್ತಿತ್ತಲ್ಲದೆ, ಕೆಲ ತಾಂತ್ರಿಕ ದೋಷಗಳಿಂದಾಗಿ ಮಾಹಿತಿಗಳು ಅಪ್‌ಲೋಡ್ ಆಗಿರಲಿಲ್ಲ. ಇಂದು ಸಮಸ್ಯೆ ನಿವಾರಣೆ ಮಾಡಲಾಗಿದ್ದು, ಮಧ್ಯಾಹ್ನದ ನಂತರ ಆನ್‌ಲೈನ್ ಮೂಲಕವೂ ಹಲವರು ತೆರಿಗೆ ಪಾವತಿಸಿದ್ದಾರೆ ಎಂದು ಅವರು ತಿಳಿಸಿದರು.

ಸಾರ್ವಜನಿಕರಿಗೆ ಪಾಲಿಕೆಯ ಎಲ್ಲಾ 9 ವಲಯ ಕಚೇರಿಗಳಲ್ಲಿ ತೆರಿಗೆ ಲೆಕ್ಕ ಹಾಕಿ ಪಾವತಿಸಲು ಅಗತ್ಯ ಸೌಲಭ್ಯ ಮಾಡಲಾಗಿದ್ದು, ಒಂದೇ ನಿಮಿಷದಲ್ಲಿ ಪ್ರಕ್ರಿಯೆ ಪೂರ್ಣಗೊಳಿಸಿ ರಶೀದಿ ನೀಡುತ್ತಿರುವುದರಿಂದ ಅಡಚಣೆ ಬಗ್ಗೆ ಒಂದೇ ಒಂದು ದೂರು ಬಂದಿಲ್ಲ ಎಂದು ಆಯುಕ್ತರು ತಿಳಿಸಿದರು. ಬಾಕಿ ಉಳಿಸಿಕೊಂಡಿರುವ ತೆರಿಗೆ ಪಾವತಿಸಲು ಜನರೇ ಉತ್ಸಾಹ ತೋರುತ್ತಿದ್ದು, ಏಪ್ರಿಲ್ ಮಾಹೆಯಲ್ಲಿ ಅತೀ ಹೆಚ್ಚು ಮಂದಿ ಹಣ ಪಾವತಿಸುವ ನಿರೀಕ್ಷೆ ಇದೆ. ಈ ವರ್ಷದ ಗುರಿ ಮುಟ್ಟಬಹುದೆಂಬ ವಿಶ್ವಾಸವೂ ಇದೆ. ಅದರಿಂದಾಗಿ ನಗರ ನಿರ್ವಹಣೆಗೆ ಆರ್ಥಿಕ ಸಂಪನ್ಮೂಲ ಕ್ರೋಢೀಕರಣವಾಗುತ್ತಿರುವುದು ಉತ್ತಮ ಬೆಳವಣಿಗೆ ಎಂದು ಲಕ್ಷ್ಮೀಕಾಂತ ರೆಡ್ಡಿ ಸಂತಸ ವ್ಯಕ್ತಪಡಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಏ.14, 15ರಂದು 'ಟೈಕಾನ್ ಮೈಸೂರು–2023' ಅತಿದೊಡ್ಡ ಉದ್ಯಮಶೀಲತಾ ಸಮಾವೇಶ

ಟೈ ಮೈಸೂರು ಘಟಕದ ನಾಲ್ಕನೇ ಮೈಸೂರು ಪ್ರಾಂತ್ಯದ ಉದ್ಯಮಶೀಲತಾ ಸಮ್ಮೇಳನ; ಘಟಕದ ಅಧ್ಯಕ್ಷ ಸುಧನ್ವ ಧನಂಜಯ ಮಾಹಿತಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ 'ಟೈಕಾನ್ ಮೈಸೂರು–2023' ಉದ್ಯಮಶೀಲತಾ ಸಮಾವೇಶದ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಎಡದಿಂದ, ಟೈಕಾನ್ ಮೈಸೂರು 2023ರ ಮಾಧ್ಯಮ ಮತ್ತು ಪ್ರಚಾರ ಸಮಿತಿ ಅಧ್ಯಕ್ಷ ಪ್ರಮೋದ್, ಟೈಕಾನ್ ಮೈಸೂರು–2023ರ ಸಹ ಅಧ್ಯಕ್ಷ ಡಾ.ಮಹೇಶ್ ರಾವ್, ಟೈ ಮೈಸೂರು ಘಟಕದ ಅಧ್ಯಕ್ಷ ಸುಧನ್ವ ಧನಂಜಯ, ಟೈಕಾನ್ ಮೈಸೂರು–2023ರ ಅಧ್ಯಕ್ಷ ನಾಗರಾಜನ್ ಶ್ರೀನಿವಾಸನ್, ಟೈಕಾನ್ ಮೈಸೂರು 2023ರ ಜೀವಮಾನ ಸಾಧನೆ ಪ್ರಶಸ್ತಿ ಸಮಿತಿ ಅಧ್ಯಕ್ಷ ಶಬರೀಸನ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಏ.11 (ಪಿಎಂ)–ಟೈ ಮೈಸೂರು ಘಟಕದ ವತಿಯಿಂದ ಏ.14 ಮತ್ತು 15 ರಂದು ಟೈಕಾನ್ ಮೈಸೂರು 2023 (TiECON Mysuru 2023) ಸಮ್ಮೇಳನ (ಅತಿದೊಡ್ಡ ಉದ್ಯಮಶೀಲತಾ ಸಮಾವೇಶ) ಆಯೋಜಿಸಲಾಗಿದೆ ಎಂದು ಟೈ ಮೈಸೂರು ಘಟಕದ ಅಧ್ಯಕ್ಷ ಸುಧನ್ವ ಧನಂಜಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇದು ನಾಲ್ಕನೇ ಮೈಸೂರು ಪ್ರಾಂತ್ಯದ ಉದ್ಯಮಶೀಲತಾ ಸಮ್ಮೇಳನವಾಗಿದ್ದು, ಅಂತಾರಾಷ್ಟ್ರೀಯ ಮಟ್ಟದ ಯಶಸ್ವಿ ಉದ್ಯಮಿಗಳು, ನವೋದ್ಯಮಿಗಳು, ಹೂಡಿಕೆದಾರರಲ್ಲಿರುವ ಹೆಸರಾಂತ ಭಾಷಣಕಾರರ ವಿಚಾರಗಳನ್ನು ಆಲಿಸಲು ಸಂಘಟನೆಯ ಉದ್ಯಮ ಪ್ರತಿನಿಧಿಗಳಿಗೆ ಸಮ್ಮೇಳನ ಉತ್ತಮ ವೇದಿಕೆಯಾಗಿದೆ ಎಂದರು. ಎರಡು ದಿನಗಳ ಈ ಸಮ್ಮೇಳನವು ಮೈಸೂರಿನ ರಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ 'ಉದ್ಯಮ ಬೆಳವಣಿಗೆ (Scalability) ಮತ್ತು ಸುಸ್ಥಿರತೆ (Sustain ability) ವಿಷಯಾಧಾರಿತವಾಗಿ ನಡೆಯಲಿದೆ. ಉದ್ಯಮಿಗಳು, ಹೂಡಿಕೆದಾರರು ಮತ್ತು ನೀತಿ ನಿರೂಪಕರನ್ನು ಒಟ್ಟುಗೂಡಿಸುವ ಈ ಸಮ್ಮೇಳನವು ಯುವ ಮತ್ತು ಅನುಭವಿ ಉದ್ಯಮಿಗಳಿಗೆ ತಮ್ಮ ಉದ್ಯಮ ಬೆಳೆಸುವ ನಿಟ್ಟಿನಲ್ಲಿ ಹೊಸ ವಿಧಾನ, ನವೀನ ತಂತ್ರಜ್ಞಾನ, ಮಾರುಕಟ್ಟೆ ಮತ್ತು ಪೂರಕ ವ್ಯವಸ್ಥೆಗಳ ಅಳವಡಿಕೆ ಬಗ್ಗೆ ಚರ್ಚಿಸಲು ವೇದಿಕೆ ಕಲ್ಪಿಸಲಿದೆ ಎಂದು ತಿಳಿಸಿದರು. ಏ.14ರಂದು ಸಂಜೆ 5.30ಕ್ಕೆ ಸಮ್ಮೇಳನದ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಟೈಕಾನ್ ಮೈಸೂರು–2023ರ ಅಧ್ಯಕ್ಷ ನಾಗರಾಜನ್ ಶ್ರೀನಿವಾಸನ್ ಪ್ರಾಸ್ತಾವಿಕ ಭಾಷಣ ಮಾಡಲಿದ್ದಾರೆ. ಹೆಲ್ತ್ ಕೇರ್ ಗ್ಲೋಬಲ್ (ಹೆಚ್‌ಸಿಜಿ) ಎಂಟರ್ ಪ್ರೈಸಸ್ ಲಿಮಿಟೆಡ್‌ನ ಕಾರ್ಯನಿರ್ವಾಹಕ ಅಧ್ಯಕ್ಷ ಡಾ.ಅಜಯ್‌ಕುಮಾರ್ ಸಮ್ಮೇಳನ ಉದ್ಘಾಟಿಸಿ, 'ಶ್ರೇಷ್ಠತೆಗೆ ಯಾವುದೇ ಗಡಿಗಳಿಲ್ಲ' ವಿಷಯ ಕುರಿತು ಮುಖ್ಯ ಭಾಷಣ ಮಾಡಲಿದ್ದಾರೆ.

> 1992ರಲ್ಲಿ ಸಿಲಿಕಾನ್ ವ್ಯಾಲಿಯಲ್ಲಿ ಯಶಸ್ವಿ ಉದ್ಯಮಿಗಳಿಂದ ಟೈ (The Indus Entrepreneur) ಸ್ಥಾಪನೆಗೊಂಡಿತು. ಪ್ರಸ್ತುತ 14 ದೇಶಗಳಲ್ಲಿ 61 ಘಟಕಗಳನ್ನು ಟೈ ಹೊಂದಿದೆ. ಅಂತೆಯೇ ಮೈಸೂರಿನಲ್ಲಿ ನಾಲ್ಕು ವರ್ಷಗಳ ಹಿಂದೆ ಮೈಸೂರು ಘಟಕ ಅಸ್ತಿತ್ವಕ್ಕೆ ತರಲಾಯಿತು. ಟೈ ಮೈಸೂರು ಘಟಕದಲ್ಲಿ 160ಕ್ಕೂ ಅಧಿಕ ಉದ್ಯಮಿಗಳು ಸದಸ್ಯತ್ವ ಹೊಂದಿದ್ದಾರೆ.
> –ಸುಧನ್ವ ಧನಂಜಯ, ಅಧ್ಯಕ್ಷರು, ಟೈ ಮೈಸೂರು ಘಟಕ.

ಇದೇ ಸಂದರ್ಭದಲ್ಲಿ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ (ಕೆಬಿಜಿ), ದಿ ಡೆಕೋರೇಟಿವ್ ಲ್ಯಾಮಿನೇಟ್ಸ್ ಇಂಡಿಯಾ ಪ್ರೈ. ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಅಬ್ಬಾಸ್ ಎಸ್.ವಾಫ್, ವಿಡಬ್ಲ್ಯೂಎಫ್ ಇಂಡಸ್ಟ್ರೀಸ್‌ನ ಸಿಎಂಡಿ ಡಾ.ಬಿ.ಆರ್.ಪೈ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ವಿವರಿಸಿದರು.

ಬಳಿಕ ರಾತ್ರಿ 7.20ಕ್ಕೆ ಟೈ ಇಂಡಿಯಾ ಏಂಜಲ್ಸ್ ಮತ್ತು ರಾಜಸ್ತಾನ ಏಂಜಲ್ಸ್‌ನ ಅಧ್ಯಕ್ಷ ಮಹಾವೀರ್ ಪ್ರತಾಪ್ ಶರ್ಮಾ, ಆಕ್ಸೆಲ್ ಪಾರ್ಟ್ನರ್ಸ್ ಸ್ಥಾಪಕ ಪ್ರಶಾಂತ್ ಪ್ರಕಾಶ್ ಮತ್ತು ರಂಗಸನ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಪವನ್ ರಂಗ ಅವರು ಉದ್ಯಮಶೀಲತೆ ಕುರಿತ ಹಲವು ಮಜಲುಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ. ಬಳಿಕ ಮಶಾಲ್ ಸ್ಪೋರ್ಟ್ಸ್ ಪ್ರೈವೆಟ್ ಲಿಮಿಟೆಡ್‌ನ ನಿರ್ದೇಶಕರೂ ಆದ ಖ್ಯಾತ ಕ್ರೀಡಾ ಉದ್ಯಮ ತಜ್ಞ ಚಾರುಶರ್ಮಾ ದಿಕ್ಸೂಚಿ ಭಾಷಣ ಮಾಡಲಿದ್ದಾರೆ ಎಂದು ತಿಳಿಸಿದರು.

ಏ.15ರಂದು ಬೆಳಗ್ಗೆ 9.30ಕ್ಕೆ ಎರಡನೇ ದಿನದ ವಿಚಾರಗೋಷ್ಠಿಗಳು ಆರಂಭಗೊಳ್ಳಲಿದ್ದು, ಟೈಕಾನ್ ಮೈಸೂರು–2023ರ ಸಹ ಅಧ್ಯಕ್ಷ ಡಾ.ಮಹೇಶ್ ರಾವ್ ಪ್ರಾಸ್ತಾವಿಕ ಭಾಷಣ ಮಾಡಲಿದ್ದಾರೆ. ಮಣಿಪಾಲ್ ಗ್ಲೋಬಲ್ ಎಜುಕೇಷನ್ ಅಧ್ಯಕ್ಷ ಟಿ.ವಿ.ಮೋಹನ್ ದಾಸ್‌ಪೈ 'ಭಾರತ ; ಸ್ಟಾರ್ಟ್ ಅಪ್ ರಾಷ್ಟ್ರ' ವಿಷಯ ಕುರಿತು ಉದ್ಘಾಟನಾ ಭಾಷಣ ಮಾಡಲಿದ್ದಾರೆ. ಖ್ಯಾತ ಬ್ರ್ಯಾಂಡ್ ಸಲಹೆಗಾರ ಹರೀಶ್ ಬಿಜೂರ್ ಮುಖ್ಯ ಭಾಷಣ ಮಾಡಲಿದ್ದು, ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಅಧ್ಯಕ್ಷ ಬಿ.ವಿ.ನಾಯ್ಡು ಅವರು 'ಬೆಂಗಳೂರಿನ ಆಚೆ' ಪರಿಕಲ್ಪನೆ ಬಗ್ಗೆ ವಿಚಾರ ಮಂಡಿಸಲಿದ್ದಾರೆ ಎಂದರು.


ಬಳಿಕ 11.50ಕ್ಕೆ ಸೇಫ್ ಹ್ಯಾಂಡ್ಸ್ 24/7 ಸರ್ವೀಸಸ್‌ನ ಸಂಸ್ಥಾಪಕ ನಿರ್ದೇಶಕಿ ಶ್ರಾವಣಿ ಪವಾರ್ ಮತ್ತು ಆರ್–ಪ್ರೋಸೆಸ್ ಔಟ್ಸೋರ್ಸಿಂಗ್ ಸರ್ವೀಸಸ್‌ನ ಸಂಸ್ಥಾಪಕಿ ಮತ್ತು ಸಿಇಓ ಸವಿತಾ ಮಲ್ಲಪ್ಪ ಅವರೊಂದಿಗೆ 'ಎರಡನೇ ಶ್ರೇಣಿ ನಗರಗಳಲ್ಲಿ ಉದ್ಯಮದ ಬೆಳವಣಿಗೆಯ ಸವಾಲುಗಳು' ಕುರಿತು ಪ್ಯಾನೆಲ್ ಚರ್ಚೆ ನಡೆಯಲಿದೆ. 12.30ಕ್ಕೆ ಹೊಸ ತಂತ್ರಜ್ಞಾನಗಳು, ಹೊಸ ಮಾರುಕಟ್ಟೆಗಳು ಮತ್ತು ಹೊಸ ವ್ಯವಸ್ಥೆಗಳು' ಕುರಿತು ಮುಕುಂದ ಫುಡ್ಸ್‌ನ ಸಿಇಓ ಈಶ್ವರ್ ಕೆ.ವಿಕಾಸ್, ಆರ್ಟ್ ಪಾರ್ಕ್‌ನ ಸಿಇಓ ಉಮಾಕಾಂತ್ ಸೋನಿ ಹಾಗೂ ಸಿಪ್ಲೈನ ಸಿಇಓ ಸೌಸ್ತವ್ ಚಕ್ರವರ್ತಿ ಅವರೊಂದಿಗೆ ಪ್ಯಾನೆಲ್ ಚರ್ಚೆ ನಡೆಯಲಿದೆ ಎಂದು ಹೇಳಿದರು.

ನಂತರ ಮಧ್ಯಾಹ್ನ 2ಕ್ಕೆ 'ಸ್ಟೋರಿ ಆಫ್ ರೆಸಿಲಿಯೆನ್ಸ್ ಅಂಡ್ ಟಾಲೆರೆನ್ಸ್' ಕುರಿತು ಭಾರತದ ಅಂಧರ ಕ್ರಿಕೆಟ್ ತಂಡದ ಕ್ಯಾಪ್ಟನ್ ಶೇಖರ್ ನಾಯ್ಕ್ ಮಾತನಾಡಲಿದ್ದಾರೆ. ಭಾರತೀಯ ರಿಸರ್ವ್ ಬ್ಯಾಂಕ್ ಆಡಳಿತ ಮಂಡಳಿಯ ಸದಸ್ಯ ಸ್ವಾಮಿನಾಥನ್ ಗುರುಮೂರ್ತಿ ಮುಖ್ಯ ಭಾಷಣ ಮಾಡಲಿದ್ದಾರೆ. ಬಳಿಕ ಮಧ್ಯಾಹ್ನ 3.10ಕ್ಕೆ ಕೇನ್ಸ್ ಟೆಕ್ನಾಲಜೀಸ್‌ನ ವ್ಯವಸ್ಥಾಪಕ ನಿರ್ದೇಶಕ ರಮೇಶ್ ಕಣ್ಣನ್ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಅಲ್ಲದೆ, ಅವರೊಂದಿಗೆ 'ಐಪಿಓಗೆ ಹಾದಿ' ಕರಿತು ಚರ್ಚೆ ನಡೆಯಲಾಗುವುದು. ಬಳಿಕ ಟೈ ಬೆಂಗಳೂರು ಅಧ್ಯಕ್ಷ ಮದನ್ ಪದಕಿ 'ಭಾರತಕ್ಕಾಗಿ ನಿರ್ಮಾಣ' ಕುರಿತು ವಿಚಾರ ಮಂಡಿಸಲಿದ್ದಾರೆ. ನಂತರ ಸಂಜೆ 4ಕ್ಕೆ ಟೈ ಯೂನಿವರ್ಸಿಟಿ ಫಿಚ್‌ಫೆಸ್ಟ್ ವಿಜೇತರಿಗೆ ಬಹುಮಾನ ವಿತರಣೆ ಮಾಡುವುದರೊಂದಿಗೆ ಸಮ್ಮೇಳನ ಸಮಾರೋಪಗೊಳ್ಳಲಿದೆ ಎಂದರು.

ನೋಂದಣಿ: ಟೈಕಾನ್ ಮೈಸೂರು 2023ರ ಅಧ್ಯಕ್ಷ ನಾಗರಾಜನ್ ಶ್ರೀನಿವಾಸನ್ ಮಾತನಾಡಿ, ಉದ್ಯಮಿಗಳಿಗೆ ಅಗತ್ಯ ಮಾರ್ಗದರ್ಶನ ದೊರೆಯುವ ಈ ಸಮ್ಮೇಳನದಲ್ಲಿ 15ಕ್ಕೂ ಹೆಚ್ಚು ಭಾಷಣಕಾರರು ಭಾಗವಹಿಸುತ್ತಿದ್ದಾರೆ. 300ಕ್ಕೂ ಹೆಚ್ಚು ಪ್ರತಿನಿಧಿಗಳು ಪಾಲ್ಗೊಂಡು ಪ್ರಯೋಜನ ಪಡೆಯಲಿದ್ದಾರೆ. ಮುಖ್ಯವಾಗಿ ನಮ್ಮ ಸಂಘಟನೆಯ ವಿದ್ಯಾರ್ಥಿ ಸದಸ್ಯರು ಇದರಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಸಂಘಟನೆಯ ಸದಸ್ಯರಿಗೆ ನೋಂದಣಿ ಶುಲ್ಕವಿಲ್ಲ. ಆದರೆ ಸದಸ್ಯರಲ್ಲದವರಿಗೆ ತಲಾ 2 ಸಾವಿರ ರೂ. ನೋಂದಣಿ ಶುಲ್ಕ ನಿಗದಿ ಮಾಡಲಾಗಿದೆ. ಹೆಚ್ಚಿನ ಮಾಹಿತಿ ಹಾಗೂ ನೋಂದಣಿಗೆ ವಿ.ಕೆ.ಮಹೇಶ್ (94481 54063) ಅವರನ್ನು ಸಂಪರ್ಕಿಸಬಹುದು. ಅಥವಾ https://bit.ly/tiecon2023 ಲಿಂಕ್ ಮೂಲಕ ನೋಂದಣಿ ಮಾಡಿಕೊಳ್ಳಬಹುದು ಎಂದು ತಿಳಿಸಿದರು. ಟೈಕಾನ್ ಮೈಸೂರು 2023ರ ಸಹ ಅಧ್ಯಕ್ಷ ಡಾ.ಮಹೇಶ್ ರಾವ್, ಟೈಕಾನ್ ಮೈಸೂರು 2023ರ ಜೀವಮಾನ ಸಾಧನೆ ಪ್ರಶಸ್ತಿ ಸಮಿತಿ ಅಧ್ಯಕ್ಷ ಶಬರೀಸನ್, ಟೈಕಾನ್ ಮೈಸೂರು 2023ರ ಮಾಧ್ಯಮ ಮತ್ತು ಪ್ರಚಾರ ಸಮಿತಿ ಅಧ್ಯಕ್ಷ ಪ್ರಮೋದ್ ಸುದ್ದಿಗೋಷ್ಠಿಯಲ್ಲಿದ್ದರು.

ಉದ್ಯಮದ ಮೂಲಕ ಮೈಸೂರಿನ ಪ್ರಗತಿಗೆ ಕೊಡುಗೆ ನೀಡಿದ ಸಾಧಕರಿಗೆ ಜೀವಮಾನ ಸಾಧನೆ ಪ್ರಶಸ್ತಿ

ಮೈಸೂರಿನಲ್ಲಿ ತಮ್ಮ ಉದ್ಯಮ ಸ್ಥಾಪಿಸುವ ಮೂಲಕ ಮೈಸೂರಿನ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿ ಟೈಕಾನ್ ಸಮ್ಮೇಳನದ ಜೀವಮಾನ ಸಾಧನೆ ಪ್ರಶಸ್ತಿಗೆ ಭಾಜನರಾದವರ ಸಂಕ್ಷಿಪ್ತ ಪರಿಚಯ




ಅಬ್ಬಾಸ್ ಎಸ್.ವಾಫ್



ರಮೇಶ್ ಕಣ್ಣನ್



ಡಾ.ಬಿ.ಆರ್.ಪೈ



ಕೆ.ಬಿ.ಗಣಪತಿ


ದಿ ಡೆಕೋರೇಟಿವ್ ಲ್ಯಾಮಿನೇಟ್ಸ್ ಇಂಡಿಯಾ ಪ್ರೈ. ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಅಬ್ಬಾಸ್ ಎಸ್. ವಾಫ್ ಅವರು 1957ರಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವಿಗಾಗಿ ಮೈಸೂರಿಗೆ ಆಗಮಿಸಿದರು. ಪ್ರಸ್ತುತ ಯಶಸ್ವಿ ಉದ್ಯಮಿಯಾಗಿ ಪೀಠೋಪಕರಣ ಉದ್ಯಮ ನಡೆಸುತ್ತಿದ್ದಾರೆ.

ಕೇನ್ಸ್ ಟೆಕ್ನಾಲಜೀಸ್‌ನ ವ್ಯವಸ್ಥಾಪಕ ನಿರ್ದೇಶಕ ರಮೇಶ್ ಕಣ್ಣನ್ ಅವರು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜಿನ (ಎನ್‌ಐಇ) ಪದವೀಧರರು. 1988ರಲ್ಲಿ ಕೇನ್ಸ್ ಟೆಕ್ನಾಲಜೀಸ್' ಬ್ಯಾನರ್‌ನಡಿಯಲ್ಲಿ ತಮ್ಮ ಉದ್ಯಮಶೀಲ ಪ್ರಯಾಣ ಆರಂಭಿಸಿದರು.

ವಿಡಬ್ಲ್ಯೂಎಫ್ ಇಂಡಸ್ಟ್ರೀಸ್‌ನ ಸಿಎಂಡಿ ಡಾ.ಬಿ.ಆರ್.ಪೈ ಅವರು 1978ರಲ್ಲಿ ವಿಜಯ್ ವೈರ್ಸ್ ಅಂಡ್ ಫಿಲಮೆಂಟ್ಸ್ ಲಿಮಿಟೆಡ್ ಅನ್ನು ಸ್ಥಾಪಿಸಿದರು. ಎಲೆಕ್ಟ್ರಾನಿಕ್ ಉದ್ಯಮಗಳಲ್ಲಿ ಬಳಸಲಾಗುವ ಉತ್ಪನ್ನಗಳ ತಯಾರಕರಾದ ಇವರು, ಪ್ರಸ್ತುತ 20 ದೇಶಗಳಿಗೆ ತಮ್ಮ ಕಂಪನಿ ಉತ್ಪನ್ನಗಳನು ರಫ್ತು ಮಾಡುತ್ತಿದ್ದಾರೆ.

'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ (ಕೆಬಿಜಿ) ಅವರು ಕರ್ನಾಟಕ ಹೈಕೋರ್ಟ್‌ನಲ್ಲಿ ನ್ಯಾಯವಾದಿಯಾಗಿ ವೃತ್ತಿಜೀವನ ಆರಂಭಿಸಿ, ಬಳಿಕ ಪತ್ರಿಕೋದ್ಯಮದಲ್ಲಿ ಯಶಸ್ವಿ ಉದ್ಯಮಿಯಾಗಿದ್ದಾರೆ. 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳು ಮೈಸೂರು ಹಾಗೂ ನೆರೆ ಜಿಲ್ಲೆಗಳ ಜನತೆಯ ದೈನಂದಿನ ಅವಿಭಾಜ್ಯ ಅಂಗಗಳಾಗಿವೆ.

300ಕ್ಕೂ ಹೆಚ್ಚು ಸೀಟುಗಳನ್ನು ಗೆದ್ದು 3ನೇ ಬಾರಿಗೆ ಬಿಜೆಪಿ ಅಧಿಕಾರಕ್ಕೆ ಬರಲಿದೆ



ದಿಸ್ಪುರ್: ಮುಂದಿನ ವರ್ಷ ನಡೆಯಲಿರುವ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ ದೇಶಾದ್ಯಂತ 300ಕ್ಕೂ ಹೆಚ್ಚು ಲೋಕಸಭಾ ಸ್ಥಾನಗಳನ್ನು ಗೆದ್ದು ಸತತ ಮೂರನೇ ಬಾರಿಗೆ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಅಧಿಕಾರಕ್ಕೆ ಬರಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಅಸ್ಸಾಂನ ದಿಬ್ರುಗಢದಲ್ಲಿ ಬಿಜೆಪಿ ಕಚೇರಿಗೆ ಶಂಕುಸ್ಥಾಪನೆ ನೆರವೇರಿಸಿದ ಬಳಿಕ ಮಾತನಾಡಿದ ಅವರು, ಈಶಾನ್ಯ ರಾಜ್ಯದ 14 ಲೋಕಸಭಾ ಕ್ಷೇತ್ರಗಳ ಪೈಕಿ 12ರಲ್ಲಿ ಬಿಜೆಪಿ ಪಕ್ಷ ಗೆಲ್ಲಲಿದೆ. ಅಲ್ಲದೇ 2024ರ ಲೋಕಸಭೆ ಚುನಾವಣೆಯಲ್ಲಿ ಪಕ್ಷ 300ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುವ ಮೂಲಕ ಮೋದಿ ಅವರು ಸತತ 3ನೇ ಬಾರಿಗೆ ಪ್ರಧಾನಿಯಾಗಲಿದ್ದಾರೆ ಎಂದು ಹೇಳಿದರು.


ಈಶಾನ್ಯವನ್ನು ಒಂದು ಕಾಲದಲ್ಲಿ ಕಾಂಗ್ರೆಸ್‌ನ ಕೋಟೆ ಎಂದು ಪರಿಗಣಿಸಲಾಗಿತ್ತು. ಆದರೆ ರಾಹುಲ್ ಗಾಂಧಿಯವರ ಭಾರತ್ ಜೋಡೋ ಯಾತ್ರೆಯ ಹೊರತಾಗಿಯೂ ಪಕ್ಷವು ಮೂರು ರಾಜ್ಯಗಳಲ್ಲಿ ಇತ್ತೀಚಿನ ವಿಧಾನಸಭಾ ಚುನಾವಣೆಯಲ್ಲಿ ಉತ್ತಮ ಪ್ರದರ್ಶನ ನೀಡಲು ವಿಫಲವಾಗಿದೆ. ಇತ್ತೀಚೆಗಷ್ಟೇ ಮೇಘಾಲಯ, ತ್ರಿಪುರ ಮತ್ತು ನಾಗಾಲ್ಯಾಂಡ್‌ನಲ್ಲಿ ವಿಧಾನಸಭೆ ಚುನಾವಣೆ ನಡೆದಿತ್ತು. ತ್ರಿಪುರಾದಲ್ಲಿ ಬಿಜೆಪಿ ಸರ್ಕಾರ ಗೆದ್ದು ಇತರ ಎರಡು ರಾಜ್ಯಗಳಲ್ಲಿ ಮೈತ್ರಿ ಪಾಲುದಾರರಾಗಿ ಅಧಿಕಾರಕ್ಕೆ ಬಂದಿದೆ ಎಂದು ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ರಾಹುಲ್ ಗಾಂಧಿ ಯುಕೆ ಭೇಟಿಯ ವೇಳೆ ನೀಡಿದ ವಿವಾದಾತ್ಮಕ ಹೇಳಿಕೆಗಳ ಕುರಿತು ಪ್ರಸ್ತಾಪಿಸಿದ ಅವರು, ರಾಹುಲ್ ಗಾಂಧಿ ವಿದೇಶಿ ನೆಲದಲ್ಲಿ ಭಾರತವನ್ನು ಅವಮಾನಿಸಿದ್ದಾರೆ. ಅವರು ಸುಳ್ಳು ಹೇಳುತ್ತಾ ದೇಶ ಮತ್ತು ಸರ್ಕಾರದ ಮಾನಹಾನಿ ಮಾಡುವುದನ್ನು ಮುಂದುವರೆಸಿದರೆ ಇಡೀ ದೇಶದಿಂದ ಕಾಂಗ್ರೆಸ್ ಪಕ್ಷವನ್ನು ವೈಟ್‌ವಾಶ್ ಮಾಡಲಾಗುತ್ತದೆ ಎಂದರು.

ಪ್ರಧಾನಿ ನರೇಂದ್ರ ಮೋದಿಯವರನ್ನು ಎಷ್ಟು ಕೆಟ್ಟದಾಗಿ ಟೀಕಿಸುತ್ತಾರೋ ಅಷ್ಟು ಬಿಜೆಪಿ ಬೆಳೆಯುತ್ತದೆ. ವಿವಾದಾತ್ಮಕ ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆ (AFSPA) ಅಸ್ಸಾಂನ ಶೇ.70ರಷ್ಟು ಪ್ರದೇಶದಿಂದ ತೆಗೆದುಹಾಕಲಾಗಿದೆ. ಇದರಿಂದಾಗಿ ಬೋಡೋಲ್ಯಾಂಡ್ ಮತ್ತು ಕರ್ಬಿ ಆಂಗ್ಲಾಂಗ್ ಪ್ರದೇಶಗಳು ಶಾಂತಿಯುತ ವಾಗಿವೆ ಮತ್ತು ಅದರ ನೆರೆಯ ಪ್ರಾಂತ್ಯಗಳೊಂದಿಗೆ ರಾಜ್ಯದ ಗಡಿ ವಿವಾದಗಳನ್ನು ಪರಿಹರಿಸಲಾಗುತ್ತಿದೆ ಎಂದು ಹೇಳಿದರು.

ಮೊದಲು ಅಸ್ಸಾಂ ರಾಜ್ಯವು ಆಂದೋಲನ ಮತ್ತು ಭಯೋತ್ಪಾದನೆಗೆ ಹೆಸರುವಾಸಿಯಾಗಿತ್ತು. ಆದರೆ ಈಗ ಅಲ್ಲಿ ಶಾಂತಿ ನೆಲೆಸಿದೆ ಮತ್ತು ಜನರು ಬಿಹು ಸಂಗೀತದ ಬಡಿತಗಳಿಗೆ ನೃತ್ಯ ಮಾಡುತ್ತಿದ್ದಾರೆ. ಏಪ್ರಿಲ್ 14ರಂದು ಗುವಾಹಟಿಯಲ್ಲಿ ನಡೆಯಲಿರುವ ಮೆಗಾ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಸಮ್ಮುಖದಲ್ಲಿ 11,000ಕ್ಕೂ ಹೆಚ್ಚು ನೃತ್ಯಗಾರರು ಪ್ರದರ್ಶನ ನೀಡಲಿದ್ದಾರೆ ಎಂದರು.

ಬಿಜೆಪಿ ಮೊದಲ ಪಟ್ಟಿಯಲ್ಲಿ ಟಿಕೆಟ್ ಘೋಷಣೆಯಾದ ಅಭ್ಯರ್ಥಿಗಳ ಹರ್ಷೋಲ್ಲಾಸ



ಚಾಮರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ 2ನೇ ಬಾರಿಗೆ ಆಯ್ಕೆ ಮಾಡಲು ಸಹಕರಿಸಿದ ಹಾಗೂ ಆಶೀರ್ವದಿಸಿದ ಪಕ್ಷದ ವರಿಷ್ಠರು ಹಾಗೂ ಸಂಘ ಪ್ರಮುಖರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು. ಈ ಬಾರಿಯೂ ಚಾಮರಾಜ ಕ್ಷೇತ್ರದಲ್ಲಿ ಕಮಲ ಅರಳಲಿದೆ. ಚಾಮರಾಜ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿಸಲು ಶ್ರಮಿಸುತ್ತೇನೆ. –ಎಲ್.ನಾಗೇಂದ್ರ, ಚಾಮರಾಜ ಕ್ಷೇತ್ರದ ಅಭ್ಯರ್ಥಿ



ನನ್ನ ಮೇಲೆ ನಂಬಿಕೆಯಿಟ್ಟು ಟಿಕೆಟ್ ನೀಡಿರುವ ಬಿಜೆಪಿಯ ಎಲ್ಲಾ ನಾಯಕರಿಗೂ ಧನ್ಯವಾದ ತಿಳಿಸುವ ಜೊತೆಗೆ ಅವರ ನಂಬಿಕೆಗೆ ಬದ್ಧನಾಗಿ, ಅವರ ವಿಶ್ವಾಸ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ. ಈ ಮೂಲಕ ಬಿಜೆಪಿಯಲ್ಲಿ ಮಾತ್ರ ಯುವಕರಿಗೆ ಅವಕಾಶ ನೀಡುವುದು ಎಂಬುದು ಸಾಬೀತಾಗಿದೆ. ಪಕ್ಷ ಸೇರ್ಪಡೆ ಸಂದರ್ಭದಲ್ಲಿ ಟಿಕೆಟ್ ಬಗ್ಗೆ ಚರ್ಚೆಯಾಗಿರಲಿಲ್ಲ. ಕ್ಷೇತ್ರದಲ್ಲಿ ಪಕ್ಷ ಸಂಘಟನೆ ಮಾಡುವ ಜವಾಬ್ದಾರಿ ನೀಡಲಾಗಿತ್ತು. ಅದರಂತೆ ಸಂಘಟನೆ ಕಾರ್ಯಕ್ರಮಗಳನ್ನು ನಡೆಸಿದ್ದೇನೆ. ಕಳೆದ ಒಂದು ವಾರದಿಂದ ಟಿಕೆಟ್ ಬಗ್ಗೆ ಚರ್ಚೆಗಳು ಬಂದವು. ಚಾಮುಂಡೇಶ್ವರಿ ಕ್ಷೇತ್ರದ ಮತದಾರರು ಬಿಜೆಪಿ ಹಾಗೂ ಪ್ರಧಾನಿ ಮೋದಿಯವರ ಮೇಲೆ ವಿಶ್ವಾಸ ಹಾಗೂ ನಂಬಿಕೆ ಇಟ್ಟಿದ್ದಾರೆ. ಕ್ಷೇತ್ರದಲ್ಲಿ ಎಲ್ಲಾ ಬಿಜೆಪಿ ಮುಖಂಡರು, ನಾಯಕರೊಂದಿಗೆ ಕೆಲಸ ಮಾಡುತ್ತೇನೆ. – ಕವೀಶ್‌ಗೌಡ, ಚಾಮುಂಡೇಶ್ವರಿ ಕ್ಷೇತ್ರದ ಅಭ್ಯರ್ಥಿ



ನರಸಿಂಹರಾಜ ಕ್ಷೇತ್ರದಿಂದ 2ನೇ ಬಾರಿಗೆ ಟಿಕೆಟ್ ನೀಡಿರುವ ಬಿಜೆಪಿ ರಾಜ್ಯ, ರಾಷ್ಟ್ರ ನಾಯಕರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. 2018ರ ಚುನಾವಣೆಯಲ್ಲಿ 44,141 ಮತ ಪಡೆಯುವ ಮೂಲಕ 2ನೇ ಸ್ಥಾನ ಪಡೆದಿದ್ದೆ. ಈ ಬಾರಿ ಕ್ಷೇತ್ರದ ಮತದಾರರು ಆಶೀರ್ವಾದ ಮಾಡುತ್ತಾರೆ ಎಂಬ ಸಂಪೂರ್ಣ ವಿಶ್ವಾಸವಿದೆ. ಎನ್.ಆರ್ ಕ್ಷೇತ್ರದ ಬಿಜೆಪಿ ಕಾರ್ಯಕರ್ತರು, ಮುಖಂಡರು ಸೇರಿದಂತೆ ಎಲ್ಲರ ಸಂಪೂರ್ಣ ಬೆಂಬಲವಿದೆ. ನರಸಿಂಹರಾಜ ಕ್ಷೇತ್ರ ಬದಲಾವಣೆಗೆ ಪೂರಕವಾಗಿ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟ ಬಿಜೆಪಿಯ ಎಲ್ಲರಿಗೂ ಹೃದಯ ತುಂಬಿದ ಧನ್ಯವಾದಗಳು.
– ಎಸ್.ಸತೀಶ್(ಸಂದೇಶ್‌ಸ್ವಾಮಿ) ಎನ್.ಆರ್.ಕ್ಷೇತ್ರದ ಬಿಜೆಪಿ ಅಭ್ಯರ್ಥಿ



ಪಕ್ಷದ ರಾಜ್ಯಾಧ್ಯಕ್ಷರಾದ ನಳಿನ್ ಕುಮಾರ್ ಕಟೀಲ್, ನೆಚ್ಚಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಹಿರಿಯ ನಾಯಕರಾದ ಯಡಿಯೂರಪ್ಪ ಸೇರಿದಂತೆ ಎಲ್ಲಾ ರಾಜ್ಯ, ರಾಷ್ಟ್ರ ನಾಯಕರಿಗೂ ಧನ್ಯವಾದ. ಕಳೆದ 5 ವರ್ಷಗಳಲ್ಲಿ ನಂಜನಗೂಡು ವಿಧಾನ ಸಭಾ ಕ್ಷೇತ್ರಕ್ಕೆ ಸುಮಾರು 823 ಕೋಟಿ ರೂ. ಅನುದಾನ ತಂದಿದ್ದೇನೆ. ಅಭಿವೃದ್ಧಿ ಕಾರ್ಯಗಳನ್ನು ಗುರ್ತಿಸಿ ಮತ್ತೆ ಟಿಕೆಟ್ ನೀಡಿದ್ದಾರೆ. ಈ ಬಾರಿಯೂ ಕ್ಷೇತ್ರದ ಮತದಾರರು ಗೆಲ್ಲಿಸುವ ವಿಶ್ವಾಸವಿದ್ದು, ಕ್ಷೇತ್ರದ ಅಭಿವೃದ್ಧಿಗಾಗಿ ಸಾವಿರ ಕೋಟಿ ರೂ. ಅನುದಾನ ತರುತ್ತೇನೆ.
– ಬಿ.ಹರ್ಷವರ್ಧನ್, ನಂಜನಗೂಡು ಕ್ಷೇತ್ರದ ಅಭ್ಯರ್ಥಿ



ತಮ್ಮ ನಿರೀಕ್ಷೆಯಂತೆ ಟಿಕೆಟ್ ಸಿಕ್ಕಿದ್ದು, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ, ಸಂಸದರಾದ ವಿ.ಶ್ರೀನಿವಾಸ್‌ಪ್ರಸಾದ್, ವಿ.ಸೋಮಣ್ಣ, ಬಿಜೆಪಿ ವರಿಷ್ಠರು ಹಾಗೂ ಬಿಜೆಪಿಯ ಎಲ್ಲಾ ನಾಯಕರಿಗೂ ಧನ್ಯವಾದ ತಿಳಿಸುತ್ತೇನೆ. ಚುನಾವಣೆ ಸಂಬಂಧ ಒಂದು ಹಂತದ ಕೆಲಸಗಳನ್ನು ಈಗಾಗಲೇ ಮುಗಿಸಿದ್ದು, ಎರಡನೇ ಹಂತವಾಗಿ ಕ್ಷೇತ್ರದ ಮತದಾರರ ಮನೆ ಮನೆಗೆ ತೆರಳುತ್ತೇನೆ. ಮೊದಲ ಬಾರಿ ಶಾಸಕನಾದಾಗ ಅನುಕಂಪದ ಆಧಾರದ ಮೇಲೆ ಕ್ಷೇತ್ರದ ಮತದಾರರು ನನ್ನನ್ನು ಶಾಸಕನನ್ನಾಗಿ ಆಯ್ಕೆ ಮಾಡಿದ್ದರು. ಅವರ ನಿರೀಕ್ಷೆಗೆ ತಕ್ಕಂತೆ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಿದ್ದು, ಅದರ ವರದಿ ಆಧಾರದ ಮೇಲೆ ಈ ಬಾರಿ ನನ್ನ ಗೆಲ್ಲಿಸುತ್ತಾರೆ ಎಂಬ ಆತ್ಮವಿಶ್ವಾಸವಿದೆ.
– ಎನ್.ಮಹೇಶ್, ಕೊಳ್ಳೇಗಾಲ ಕ್ಷೇತ್ರದ ಅಭ್ಯರ್ಥಿ

ಮನೆ ಮನೆಗೆ ಮತದಾನ ಜಾಗೃತಿ ಅಭಿಯಾನ



ಮೈಸೂರು, ಏ.11(ಎಂಕೆ)– ಕಡಿಮೆ ಮತದಾನವಾಗಿರುವ ಮತಗಟ್ಟೆಗಳ ವ್ಯಾಪ್ತಿಯ ಮನೆ ಮನೆಗೆ ತೆರಳಿ 'ನೈತಿಕವಾಗಿ ಮತ ಚಲಾಯಿಸಿ' ಜಾಗೃತಿ ಅಭಿಯಾನ ಆರಂಭಿಸಲಾಗಿದೆ.

ಜಿಲ್ಲಾಡಳಿತ, ನಗರಪಾಲಿಕೆ, ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಮೈಸೂರು ನಗರ ವ್ಯಾಪ್ತಿಯ ಮೂರು ವಿಧಾನ ಸಭಾ (ಕೆ.ಆರ್, ಎನ್.ಆರ್ ಮತ್ತು ಚಾಮರಾಜ) ಕ್ಷೇತ್ರಗಳಲ್ಲಿ ಕಡಿಮೆ ಮತದಾನವಾಗಿರುವ ಮತಗಟ್ಟೆ ವ್ಯಾಪ್ತಿಯ ಮನೆ ಮನೆಗೆ ತೆರಳಿ ಕಡ್ಡಾಯ ಮತದಾನ ಮಾಡುವಂತೆ ಜಾಗೃತಿ ಮೂಡಿಸಲಾಗುತ್ತಿದೆ.

ಮೈಸೂರಿನಲ್ಲಿ ಕಡಿಮೆ ಮತದಾನವಾಗಿರುವ ಅಶೋಕಪುರಂ, ಎನ್.ಆರ್. ಮೊಹಲ್ಲಾದ ಹುಡ್ಕೋ ಬಡಾವಣೆ, ಜ್ಯೋತಿನಗರ ಪೊಲೀಸ್ ಕ್ವಾಟ್ರಸ್, ಅರಣ್ಯ ಇಲಾಖೆ ಅಧಿಕಾರಿ, ಸಿಬ್ಬಂದಿಗಳ ಕ್ವಾಟ್ರಸ್‌ಗಳಿಗೆ ತೆರಳಿ ಕಡ್ಡಾಯವಾಗಿ ಪ್ರತಿಯೊಬ್ಬರು ಮತದಾನ ಮಾಡಬೇಕು. ಮತ ಚಲಾಯಿಸುವುದು ಮೂಲಭೂತ ಹಕ್ಕಾಗಿದೆ ಎಂದು ಅರಿವು ಮೂಡಿಸಲಾಗುತ್ತಿದೆ.

ಶೇ.100ರಷ್ಟು ಗುರಿ: 2018ರ ಚುನಾವಣೆಯಲ್ಲಿ ಕಡಿಮೆ ಮತದಾನವಾಗಿರುವ ಮತಗಟ್ಟೆಗಳಲ್ಲಿ ಈ ಬಾರಿ ಶೇ.100ರಷ್ಟು ಮತದಾನವಾಗಬೇಕು ಎಂಬ ಗುರಿಯೊಂದಿಗೆ ಜಾಗೃತಿ ಅಭಿಯಾನ ಆರಂಭಿಸಲಾಗಿದೆ. ಆಯಾ ಮತಗಟ್ಟೆ ವ್ಯಾಪ್ತಿಯಲ್ಲಿರುವ ಪ್ರತಿಯೊಂದು ಮನೆಗಳಿಗೆ ತೆರಳಿ ಯಾವುದೇ ಹಣ, ಆಮಿಷಕ್ಕೆ ಒಳಗಾಗದೆ ಮತದಾನ ಮಾಡಿ ಎಂದು ತಿಳಿಹೇಳಲಾಗುತ್ತಿದೆ ಎಂದು ಜಿಲ್ಲಾ ಸ್ವೀಪ್ ಸಮಿತಿ ನೋಡಲ್ ಅಧಿಕಾರಿ ರಂಜಿತ್ ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಪಾಲಿಕೆಯ ಸ್ವೀಪ್ ಸಮಿತಿ ತಂಡ ಮನೆ ಮನೆಗೆ ಭೇಟಿ ನೀಡುತ್ತಿದ್ದು, ಮತದಾನ ಮಾಡಲು ಸಮಸ್ಯೆಗಳಿದ್ದರೆ ಸ್ಥಳದಲ್ಲೇ ಪರಿಹಾರ ತಿಳಿಸುವುದರ ಜೊತೆಗೆ ತಪ್ಪದೆ ಮತದಾನ ಮಾಡುವಂತೆ ಮನವಿ ಮಾಡಲಾಗುತ್ತಿದೆ. ಜೊತೆಗೆ ಮನೆಯಲ್ಲಿ 80 ವರ್ಷ ಮೇಲ್ಪಟ್ಟ ಮತದಾರರಿದ್ದರೆ, ಅಂಚೆ ಮತ ಪತ್ರ ಮೂಲಕ ಹೇಗೆ ಮತದಾನ ಮಾಡಬೇಕು ಎಂಬುದನ್ನು ತಿಳಿಸಿಕೊಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಬೈಕ್ ರ‍್ಯಾಲಿ ಮೂಲಕ ಮತದಾನದ ಅರಿವು



ಮೈಸೂರು, ಏ.11(ಎಂಕೆ)– ಮೈಸೂರಿನ ಇಲವಾಲ ಹೋಬಳಿ ವ್ಯಾಪ್ತಿಯ ಗ್ರಾಮಗಳಲ್ಲಿ ಜಿಲ್ಲಾ ಹಾಗೂ ತಾಲೂಕು ಸ್ವೀಪ್ ಸಮಿತಿ ವತಿಯಿಂದ ಬೈಕ್ ರ‍್ಯಾಲಿ ಹಾಗೂ ಬೀದಿ ನಾಟಕದ ಮೂಲಕ ಮತದಾನದ ಅರಿವು ಮೂಡಿಸಲಾಯಿತು.

ಸದೃಢ ಪ್ರಜಾಪ್ರಭುತ್ವ ನಿರ್ಮಾಣಕ್ಕೆ ಕಡ್ಡಾಯವಾಗಿ ಮತದಾನ ಮಾಡುವಂತೆ ನಾಮಫಲಕಗಳನ್ನು ಹಿಡಿದು ಸಾಗಿದ ಅಧಿಕಾರಿ, ಸಿಬ್ಬಂದಿಗಳು ಗ್ರಾಮಗಳ ಪ್ರಮುಖ ಬೀದಿಗಳಲ್ಲಿ ಬೈಕ್ ರ‍್ಯಾಲಿ ನಡೆಸಿದರು. ಡಿ.ಎಂ.ಜಿ.ಹಳ್ಳಿಯಿಂದ ಆರಂಭವಾದ ಬೈಕ್ ರ‍್ಯಾಲಿ ಕಮರವಳ್ಳಿ, ಸೀಗಳ್ಳಿ, ನಾಗವಾಲ, ಇಲವಾಲ, ಗುಂಗ್ರಾಲ್ ಛತ್ರ, ಯಲಚಳ್ಳಿ, ದೊಡ್ಡಗೌಡನಕೊಪ್ಪಲು, ಕಲ್ಲೂರು, ಕೆ.ನಾಗನಹಳ್ಳಿ, ಆನಂದೂರು, ಚಿಕ್ಕನಹಳ್ಳಿ, ಹಳೇ ಉಂಡವಾಡಿ, ಮೇಗಳಾಪುರ ಮೂಲಕ ಸಾಗಿ ಮೈದನಹಳ್ಳಿ ಗ್ರಾಮದಲ್ಲಿ ಮುಕ್ತಾಯಗೊಂಡಿತು. ಬಳಿಕ ಮೈದನಹಳ್ಳಿಯಲ್ಲಿ ಮತದಾನ ಜಾಗೃತಿ ಕುರಿತು ಬೀದಿನಾಟಕ ಪ್ರದರ್ಶನ ನೀಡಲಾಯಿತು.

ಇದಕ್ಕೂ ಮುನ್ನ ಬೈಕ್ ರ‍್ಯಾಲಿಗೆ ಚಾಲನೆ ನೀಡಿದ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಹೆಚ್.ಡಿ.ಗಿರೀಶ್ ಮಾತನಾಡಿ, ಚುನಾವಣೆ ಪ್ರಕ್ರಿಯೆಯು ಸದೃಢ ಪ್ರಜಾಪ್ರಭುತ್ವ ನಿರ್ಮಾಣಕ್ಕೆ ಭದ್ರ ಬುನಾದಿಯಾಗಿದ್ದು, ಮೇ 10 ರಂದು ನಡೆಯುವ ಚುನಾವಣೆಯಲ್ಲಿ ಪ್ರತಿಯೊಬ್ಬರೂ ಮತದಾನ ಮಾಡುವಂತೆ ಮನವಿ ಮಾಡಿದರು.

ಯಾವುದೇ ಆಮಿಷಕ್ಕೆ ಒಳಗಾಗದೆ ಎಲ್ಲರೂ ಮುಕ್ತ, ನ್ಯಾಯಸಮ್ಮತವಾಗಿ ಮತ ಚಲಾಯಿಸಬೇಕು. ಪ್ರಜಾಪ್ರಭುತ್ವದ ಆಶಯ ಸಾಕಾರಗೊಳಿಸಲು ಚುನಾವಣೆ ಅತ್ಯಂತ ಪ್ರಮುಖವಾಗಿದ್ದು, ಸಂವಿಧಾನ ನೀಡಿರುವ ಪರಮೋಚ್ಛ ಅಧಿಕಾರವನ್ನು ಬಳಸಿ ಪ್ರಜಾಪ್ರಭುತ್ವ ಬಲಗೊಳಿಸಬೇಕು. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಮತ ಹಾಕಬೇಕೆಂಬ ಉದ್ದೇಶದಿಂದ ಮತಗಟ್ಟೆಯಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ಅಗತ್ಯ ಮೂಲಭೂತ ಸೌಲಭ್ಯ ಕಲ್ಪಿಸಲಾಗಿದೆ ಎಂದು ಮಾಹಿತಿ ನೀಡಿದರು.

ತಾಪಂ ಸಹಾಯಕ ನಿರ್ದೇಶಕ ಕೆ.ಎಂ.ರಘುನಾಥ್, ಗಿರೀಶ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾದ ರುಕ್ಮಾಂಗದ, ಹೇಮಂತ್, ಪ್ರದೀಪ್‌ಕುಮಾರ್, ಕೆ.ವಿ.ಗಿರೀಶ್ ಸೇರಿದಂತೆ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು, ಬಿಲ್ ಕಲೆಕ್ಟರ್‌ಗಳು ಮತ್ತಿತರರು ಉಪಸ್ಥಿತರಿದ್ದರು.

ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಘಟಕದ ಅಧ್ಯಕ್ಷ ನಾಗರಾಜ್ ವಿ.ಭೈರಿ

ವಿ.ಶ್ರೀನಾಥ್ ಉಪಾಧ್ಯಕ್ಷ, ಕೆ.ಎಸ್. ಬಾಲಾಜಿ ಕಾರ್ಯದರ್ಶಿ



ಮೈಸೂರು,ಏ.11(ಎಸ್‌ಪಿಎನ್)– ಬಿಲ್ಡರ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಘಟಕದ 2023–24ನೇ ಸಾಲಿಗೆ ನಾಗರಾಜ್ ವಿ.ಬೈರಿ ಅಧ್ಯಕ್ಷರಾಗಿ, ವಿ.ಶ್ರೀನಾಥ್ ಉಪಾಧ್ಯಕ್ಷರಾಗಿ, ಕೆ.ಎಸ್. ಬಾಲಾಜಿ ಕಾರ್ಯದರ್ಶಿಯಾಗಿ ಪದಗ್ರಹಣ ಮಾಡಿದರು.

ಮೈಸೂರು ಖಾಸಗಿ ಹೋಟೆಲ್‌ನಲ್ಲಿ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಘಟಕದ ವತಿಯಿಂದ ಆಯೋಜಿಸಿದ್ದ 2023–24ನೇ ಸಾಲಿನ ಅಧ್ಯಕ್ಷ, ಉಪಾಧ್ಯಕ್ಷರ ಪದಗ್ರಹಣ ಸಮಾರಂಭದಲ್ಲಿ ರಾಷ್ಟ್ರೀಯ ಅಧ್ಯಕ್ಷ ಆರ್.ರಾಧಾಕೃಷ್ಣ ಅವರ ನೇತೃತ್ವದಲ್ಲಿ ಪದಗ್ರಹಣ ಮಾಡಿದರು.

ಜಂಟಿ ಕಾರ್ಯದರ್ಶಿಯಾಗಿ ಎಸ್.ವಾಸುದೇವನ್, ಖಜಾಂಚಿಯಾಗಿ ಸಿ.ಎಸ್. ಶ್ರೀಕಾಂತ್, ಸಲಹೆಗಾರರಾಗಿ ಎಂ.ಎಸ್. ರಾಮಪ್ರಸಾದ್, ಬಿ.ಎಸ್.ದಿನೇಶ್, ಕಾರ್ಯಕಾರಣಿ ಸದಸ್ಯರಾಗಿ ಎನ್.ಎಸ್.ಮುರಳಿಧರ್, ಕೆ.ಶ್ರೀರಾಮ್, ಎಂ.ಸಿ.ಮಲ್ಲಿಕಾರ್ಜುನ್, ಯು.ಎಂ.ಗುರು ಶಾಂತಪ್ಪ, ಜಿ.ಅಶೋಕ್, ಅಶ್ವಿನ್ ಆರ್.ಪಾಳೇಗಾರ್, ಬಿ.ಎಸ್.ಚಂದ್ರಶೇಖರ್ ಭಾರದ್ವಾಜ್, ಕೆ.ಯು.ಗಣಪತಿ, ಸಿ.ಡಿ.ಕೃಷ್ಣ, ಮಹಾಬಲೇಶ್ವರ ಬೈರಿ, ಕೆ.ಆರ್. ಪ್ರಭಾಕರರಾವ್, ಎಂ.ಡಿ.ಪ್ರವೀಣ್ ಪಾಲ್, ಪಿ.ಪುಟ್ಟಸ್ವಾಮಿ, ಕೆ.ಎಂ.ರಘುನಾಥ್, ಕೆ.ಎನ್.ರವಿಶಂಕರ್, ಕೆ.ಸತೀಶ್ ಮೋಹನ್, ಎಸ್.ಶಶಿರಾಜ್, ಎಸ್.ಎಚ್.ಶ್ರೀನಿವಾಸ್, ಸಹಕಾರಿ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಕೆ.ಟಿ.ಗೋವಿಂದರಾಜು, ಡಿ.ಶ್ರೀಹರಿ (ಜಿಎಸ್‌ಎಸ್), ವಿ.ಮೋಹನ್ ಎನ್. ಕುಂಟೆ, ಎನ್.ಲೋಕೇಶ್, ಎಚ್,ಬಿ.ರವಿ ರತ್ನಾಕರ್, ಆರ್.ರವಿ ಆಯ್ಕೆಯಾಗಿದ್ದಾರೆ. ವಿಶ್ವ ಪರಿಸರ ತಿಂಗಳ ಆಚರಣೆ ಸಮಿತಿ ಅಧ್ಯಕ್ಷರಾಗಿ ಎ.ಎಸ್.ಯೋಗನರಸಿಂಹ, ಕಾರ್ಯದರ್ಶಿ ವಿ.ಗುರುದತ್, ಸಲಹೆಗಾರರಾಗಿ ಆರ್.ರಘುನಾಥ್,

ಮೈ –ರಿಯಾಲ್ಟಿ(2023) ಅಧ್ಯಕ್ಷರಾಗಿ ಉದಯ ಎಸ್.ಕುಮಾರ್, ಕಾರ್ಯದರ್ಶಿ ಕೆ.ಸಿ.ನಂದಕುಮಾರ್, ಸಲಹೆ ಗಾರರಾಗಿ ಯು.ಎಂ.ಗುರುಶಾಂತಪ್ಪ ಆಯ್ಕೆಯಾಗಿದ್ದಾರೆ. ಬಿಲ್ಡ್‌ಟೆಕ್(2023) ಅಧ್ಯಕ್ಷರಾಗಿ ವೆಂಕಟೇಶ್ ಪ್ರಸಾದ್, ಕಾರ್ಯದರ್ಶಿಯಾಗಿ ಎಚ್.ಎಸ್.ದೀಪಕ್, ಸಲಹೆಗಾರರಾಗಿ ಎ.ವಿ.ಶ್ರೀಧರ್ ಆಯ್ಕೆಯಾಗಿದ್ದಾರೆ.

ಮೈ–ಬಿಲ್ಡ್(2023) ಅಧ್ಯಕ್ಷರಾಗಿ ಎಂ.ಡಿ.ಚಂದ್ರಶೇಖರ್, ಕಾರ್ಯದರ್ಶಿ ಆರ್.ರಮೇಶ್‌ರಾವ್, ಸಲಹೆಗಾರರಾಗಿ ಎ.ವಿ.ಶ್ರೀಧರ್, ಮೈಸೂರು ಶಿಲ್ಪಿ ಸಂಪಾದಕೀಯ ತಂಡದ ಸದಸ್ಯರಾಗಿ ಬಿ.ರಾಜೇಶ್ ದರಿರಾ, ಮಹಾಬಲೇಶ್ವರ ಬೈರಿ, ವಿಜಯ ಅಶ್ವಿನ್ ಆರ್.ಪಾಳೇಗಾರ್, ಕೆ.ಸುಬ್ರಹ್ಮಣ್ಯ ರಾವ್, ನವೀನ ನಿರ್ಮಾಣ ತಂತ್ರಜ್ಞಾನ ಎಚ್ಚರಿಕೆ ತಂಡ ಸದಸ್ಯರಾಗಿ ಕೆ.ಎಲ್.ಗುರುರಾಜ್, ಎಸ್.ಕೆ.ಶ್ರೇಯಮ್ಸ್ ಕುಮಾರ್, ಕೆ.ಎಸ್.ಪ್ರಕಾಶ್ ಆಯ್ಕೆಯಾಗಿದ್ದಾರೆ. ಪ್ಯಾನಲಿಸ್ಟ್‌ಗಳಾಗಿ ಎಸ್.ಪ್ರಕಾಶ್, ಬಿ.ಆರ್. ಬದರಿನಾಥ್, ಎನ್.ಪಿ.ವಿಶ್ವನಾಥ್, ಟಿ.ಎನ್. ಹೇಮಂತ್ ಆಯ್ಕೆಯಾಗಿದ್ದಾರೆ. ಶಿಲ್ಪಿ ಸಂಯೋಜಕರಾಗಿ ಎ.ದಿನೇಶ್, ಟಿ.ಎಸ್. ಗುರುದತ್ತ, ಭಾರ್ಗವ್ ವಿ.ಶಿಂಧೆ, ಸಿ.ವಿಶ್ವನಾಥ್, ಎ.ಆರ್.ರವೀಂದ್ರ ಭಟ್, ಕಟ್ಟಡ ಕಾರ್ಮಿಕರ ಕಲ್ಯಾಣ ಸಮಿತಿ ಸದಸ್ಯರಾಗಿ ಎಂ.ರತ್ನರಾಜ್, ಹೆಚ್.ಅಶ್ವತ್ ನಾರಾಯಣ, ಸಂತೋಷ್ ಮಿರ್ಲೆ, ಎಂ.ಎಸ್. ರೇವಣ್ಣ, ಜೆ.ಬಾಪೂಜಿ, ಜಿ.ವಿ.ಬಾಲು, ಎನ್.ಎಂ.ಮಂಜುನಾಥ್, ಎಸ್.ಮಹದೇವಸ್ವಾಮಿ ಸೇರಿದಂತೆ ಇತರೆ ಸದಸ್ಯರು ಆಯ್ಕೆಯಾಗಿದ್ದಾರೆ. ಈ ವೇಳೆ ಬಿಎಐ ರಾಷ್ಟ್ರೀಯ ಉಪಾಧ್ಯಕ್ಷ ಎನ್.ಎಸ್.ಮುರಳೀಧರ್, ರಾಜ್ಯಾಧ್ಯಕ್ಷ ಶ್ರೀನಿವಾಸ್ ರೆಡ್ಡಿ ಹಾಗೂ ಇತರೆ ಸದಸ್ಯರು ಹಾಜರಿದ್ದರು.

ಬಿಜೆಪಿ ಟಿಕೆಟ್ ಘೋಷಣೆ: ಕೆ.ಆರ್.ಪೇಟೆ, ಮಳವಳ್ಳಿ ಹೊರತುಪಡಿಸಿ

5 ಕ್ಷೇತ್ರಗಳಲ್ಲಿ ಹೊಸ ಮುಖಗಳಿಗೆ ಬಿಜೆಪಿ ಮಣೆ




ಕೆ.ಸಿ. ನಾರಾಯಣಗೌಡ


ಸಚ್ಚಿದಾನಂದ


ಅಶೋಕ್ ಜಯರಾಂ

● ಎಂ.ಕೆ.ಮೋಹನ್‌ರಾಜ್

ಮಂಡ್ಯ, ಏ.11– ಭಾರೀ ಕುತೂಹಲ ಕೆರಳಿಸಿದ್ದ ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಘೋಷಣೆಯಾಗಿದ್ದು, ಪ್ರಕಟವಾಗಿರುವ ರಾಜ್ಯದ 189 ಕ್ಷೇತ್ರಗಳ ಪೈಕಿ ಮಂಡ್ಯ ಜಿಲ್ಲೆಯ 7 ಕ್ಷೇತ್ರಗಳಿಗೂ ಅಭ್ಯರ್ಥಿಗಳನ್ನು ಘೋಷಿಸಲಾಗಿದೆ. ಆದರೆ ಕೆ.ಆರ್.ಪೇಟೆ ಹಾಗೂ ಮಳವಳ್ಳಿ ಕ್ಷೇತ್ರಗಳಿಗೆ ಹಳೇ ಮುಖಗಳಿಗೆ ಮಣೆ ಹಾಕಿದರೆ, ಉಳಿದ 5 ಕ್ಷೇತ್ರಗಳಲ್ಲಿ ಹೊಸ ಮುಖಗಳಿಗೆ ಆದ್ಯತೆ ನೀಡಲಾಗಿದೆ.

ಜಿಲ್ಲೆಯ ಕೆ.ಆರ್.ಪೇಟೆ ಕ್ಷೇತ್ರಕ್ಕೆ ಹಾಲಿ ಕ್ರೀಡೆ ಹಾಗೂ ರೇಷ್ಮೆ ಸಚಿವ ಕೆ.ಸಿ.ನಾರಾಯಣಗೌಡ, ಮಳವಳ್ಳಿ ಮೀಸಲು ಕ್ಷೇತ್ರಕ್ಕೆ ಮುನಿರಾಜು, ಮಂಡ್ಯ ಕ್ಷೇತ್ರಕ್ಕೆ ಅಶೋಕ್ ಜಯರಾಂ, ಶ್ರೀರಂಗಪಟ್ಟಣ ಸಚ್ಚಿದಾನಂದ, ಮೇಲುಕೋಟೆಗೆ ಡಾ.ಇಂದ್ರೇಶ್, ನಾಗಮಂಗಲ ಸುಧಾ ಶಿವರಾಮೇಗೌಡ, ಮದ್ದೂರಿಗೆ ಎಸ್.ಪಿ.ಸ್ವಾಮಿ ಅವರನ್ನು ಉರಿ ಯಾಳುಗಳಾಗಿ ಬಿಜೆಪಿ ಘೋಷಿಸಿದೆ.

ಸಚಿವ ನಾರಾಯಣಗೌಡರಿಗೆ ಟಿಕೆಟ್: ಮಂಡ್ಯ ಜಿಲ್ಲೆಯಲ್ಲಿ ಪ್ರಪ್ರಥಮ ಬಾರಿಗೆ ಕಮಲ ಅರಳಿಸುವ ಮೂಲಕ ಇತಿಹಾಸ ಸೃಷ್ಟಿಸಿದ್ದ ಸಚಿವ ಕೆ.ಸಿ.ನಾರಾಯಣ ಗೌಡರಿಗೆ ಕೆ.ಆರ್.ಪೇಟೆ ಕ್ಷೇತ್ರದಲ್ಲಿ ಸ್ಪರ್ಧಿಸಲು ಮತ್ತೆ ಬಿಜೆಪಿ ಟಿಕೆಟ್ ಘೋಷಿಸಲಾಗಿದೆ.

ನಾರಾಯಣಗೌಡ ಕಾಂಗ್ರೆಸ್‌ಗೆ ಹೋಗೆ ಬಿಟ್ಟರು ಎಂಬ ವದಂತಿಗಳ ನಡುವೆ ಹೈಕಮಾಂಡ್ ಅವರನ್ನು ಪಕ್ಷದಲ್ಲಿಯೇ ಉಳಿಸಿಕೊಳ್ಳುವಲ್ಲಿ ಯಶಸ್ವಿ ಯಾಗಿತ್ತು. ಮೂಲತಃ ಉದ್ಯಮಿಯಾಗಿದ್ದ ಕೆ.ಸಿ. ನಾರಾಯಣಗೌಡ, 2008ರಲ್ಲಿ ಬಿಎಸ್ಪಿಯಿಂದ ಸ್ಪರ್ಧಿಸಿ ಹತ್ತು ಸಾವಿರ ಮತ ಪಡೆದಿದ್ದರು. ಬಳಿಕ ಜೆಡಿಎಸ್‌ಗೆ ಬಂದಿದ್ದ ಅವರು, ಜೆಡಿಎಸ್ ನಿಂದ 2013 ಹಾಗೂ 2018ರಲ್ಲಿ ಸತತ ಎರಡು ಬಾರಿ ಗೆದ್ದು ಶಾಸಕರಾಗಿದ್ದರು.

2019ರಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಜೆಡಿಎಸ್ ಸ್ಪಂದಿಸುತ್ತಿಲ್ಲ ಎಂದು ಬಿಜೆಪಿ ಸೇರಿದ್ದ ಅವರು ಮೊಟ್ಟ ಮೊದಲ ಬಾರಿಗೆ ಮಂಡ್ಯ ಜಿಲ್ಲೆಯಲ್ಲಿ ಕಮಲ ಅರಳಿಸುವ ಮೂಲಕ 10 ಸಾವಿರ ಮತಗಳ ಅಂತರದಿಂದ ಜೆಡಿಎಸ್ ವಿರುದ್ಧ ಗೆಲುವು ಸಾಧಿಸಿ, ಯಡಿಯೂರಪ್ಪ ಹಾಗೂ ಪ್ರಸ್ತುತ ಬೊಮ್ಮಾಯಿ ಸಂಪುಟದಲ್ಲಿ ಸಚಿವರಾಗಿ ಕಾರ್ಯ ನಿರ್ವಹಿಸು ತ್ತಿದ್ದು, ಕೆಸಿಎನ್‌ಗೆ ಮತ್ತೆ ಬಿಜೆಪಿ ಮಣೆ ಹಾಕಿದೆ.

ಮಳವಳ್ಳಿಗೆ ಮುನಿರಾಜು ಅಭ್ಯರ್ಥಿ: ಮಳವಳ್ಳಿ ಮೀಸಲು ವಿಧಾನಸಭಾ ಕ್ಷೇತ್ರದಲ್ಲಿ ಟಿಕೆಟ್‌ಗಾಗಿ ಭಾರೀ ಪೈಪೋಟಿ ನಡೆದಿತ್ತು. ಬೆಂಗಳೂರಿನ ಮಾಜಿ ಕಾರ್ಪೋರೇಟರ್ ಮುನಿರಾಜು, ಮಾಜಿ ಸಚಿವ ಬಿ.ಸೋಮಶೇಖರ್, ಹಿರಿಯ ಮುಖಂಡ ಯಮದೂರು ಸಿದ್ದರಾಜು ಹಾಗೂ ಹಿರಿಯ ನಾಯಕರಾಗಿದ್ದ ಕಲ್ಕುಣಿ ಮಹದೇವಯ್ಯ ಪುತ್ರ ಸುಹಾಸ್ ಕಲ್ಕುಣಿ ನಡುವೆ ಟಿಕೆಟ್‌ಗಾಗಿ ಭಾರೀ ಪೈಪೋಟಿ ನಡೆದಿತ್ತು.

ಅಂತಿಮವಾಗಿ ಪಕ್ಷ ಮುನಿರಾಜುಗೆ ಮಣೆ ಹಾಕಿದೆ. ಮುನಿರಾಜು 2013ರ ಚುನಾವಣೆಯಲ್ಲಿ ಕೆಜೆಪಿಯಿಂದ ಸ್ಪರ್ಧಿಸಿ 26 ಸಾವಿರಕ್ಕೂ ಅಧಿಕ ಮತ ಪಡೆದಿದ್ದರು. ಈ ಮೂಲಕ ಮಳವಳ್ಳಿಯಲ್ಲಿ ಅಚ್ಚರಿ ಮತ ಪಡೆದಿದ್ದ ಇವರಿಗೆ 2018ರಲ್ಲಿ ಬಿಜೆಪಿ ಟಿಕೆಟ್ ಮಿಸ್ ಮಾಡಿ, ಮಾಜಿ ಸಚಿವ ಬಿ. ಸೋಮಶೇಖರ್‌ಗೆ ಮಣೆ ಹಾಕಿತ್ತು. ಆದರೆ ಸೋಮಶೇಖರ್ ಕೇವಲ 10 ಸಾವಿರ ಮತ ಪಡೆಯುವಲ್ಲಿ ಯಶಸ್ವಿಯಾಗಿದ್ದರು. ಈ ನಿಟ್ಟಿನಲ್ಲಿ ಕ್ಷೇತ್ರದಲ್ಲಿ ಸಂಘಟನೆಯಲ್ಲಿ ತೊಡಗಿದ್ದ ಮುನಿರಾಜುಗೆ ಬಿಜೆಪಿ ಟಿಕೆಟ್ ನೀಡಿದೆ.

ಎಸ್.ಡಿ.ಜಯರಾಂ ಪುತ್ರನಿಗೆ ಒಲಿದ ಮಂಡ್ಯ: ಮಂಡ್ಯ ಜಿಲ್ಲೆಯ ಧುರೀಣ ರಾಜಕಾರಣಿ, ಮಾಜಿ ಸಚಿವ ದಿ.ಎಸ್.ಡಿ.ಜಯರಾಂ ಪುತ್ರ, ಹಾಲಿ

ಮಂಡ್ಯ ಜಿಜೆಪಿ ಅಭ್ಯರ್ಥಿಗಳು...

ಮಂಡ್ಯ	:	ಅಶೋಕ್ ಜಯರಾಂ
ಕೆ.ಆರ್.ಪೇಟೆ	:	ಕೆ.ಸಿ.ನಾರಾಯಣಗೌಡ
ಮಳವಳ್ಳಿ	:	ಮುನಿರಾಜು
ಶ್ರೀರಂಗಪಟ್ಟಣ	:	ಸಚ್ಚಿದಾನಂದ
ಮೇಲುಕೋಟೆ	:	ಡಾ.ಇಂದ್ರೇಶ್
ನಾಗಮಂಗಲ	:	ಸುಧಾ ಶಿವರಾಮೇಗೌಡ
ಮದ್ದೂರು	:	ಎಸ್.ಪಿ.ಸ್ವಾಮಿ


ಮುನಿರಾಜು


ಡಾ. ಇಂದ್ರೇಶ್


ಎಸ್.ಪಿ.ಸ್ವಾಮಿ


ಸುಧಾ ಶಿವರಾಮೇಗೌಡ

ಒಕ್ಕಲಿಗರ ಸಂಘದ ನಿರ್ದೇಶಕ ಅಶೋಕ್ ಜಯರಾಂಗೆ ಮಂಡ್ಯ ಕ್ಷೇತ್ರದ ಟಿಕೆಟ್ ದೊರೆತಿದೆ. ಅಶೋಕ್ ಕಳೆದ ಒಂದು ವರ್ಷದ ಹಿಂದೆ ಬಿಜೆಪಿ ಸೇರಿ ಪಕ್ಷ ಸಂಘಟನೆಯಲ್ಲಿ ತೊಡಗಿದ್ದರು. ಅನೇಕ ಕಾರ್ಯ ಕ್ರಮಗಳ ಮೂಲಕ ಕ್ಷೇತ್ರದಲ್ಲಿ ತನ್ನದೇ ಆದ ಪಡೆ ಕಟ್ಟಿಕೊಂಡು ಪ್ರಚಾರ ನಡೆಸುತ್ತಿದ್ದ ಅಶೋಕ್‌ಗೆ ಹೈಕಮಾಂಡ್ ಮಣೆ ಹಾಕಿದೆ.

ಮಂಡ್ಯ ಕ್ಷೇತ್ರದ ಮೇಲೆ ಹಾಲಿ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ಕಳೆದ ಚುನಾವಣೆ ಪರಾಜಿತ ಅಭ್ಯರ್ಥಿ ಚಂದಗಾಲು ಶಿವಣ್ಣ, 2019ರ ಲೋಕಸಭಾ ಉಪ ಚುನಾವಣೆ ಪರಾಜಿತ ಅಭ್ಯರ್ಥಿ ಡಾ.ಸಿದ್ದರಾಮಯ್ಯ, ನಿವೃತ್ತ ಐಆರ್‌ಎಸ್ ಅಧಿಕಾರಿ ಲಕ್ಷ್ಮಿ ಅಶ್ವಿನ್‌ಗೌಡ ಟಿಕೆಟ್ ಮೇಲೆ ಕಣ್ಣಿಟ್ಟಿದ್ದರು. ಅಂತಿಮವಾಗಿ ಅಶೋಕ್‌ಗೆ ಟಿಕೆಟ್ ಒಲಿದಿದ್ದು, ಟಿಕೆಟ್ ವಂಚಿತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅಶೋಕ್ ಚುನಾವಣೆ ಎದುರಿಸಬೇಕಿದೆ.

ನಾಗಮಂಗಲದಲ್ಲಿ ಎಲ್‌ಆರ್‌ಎಸ್ ಪತ್ನಿಗೆ ಟಿಕೆಟ್: ಅಚ್ಚರಿಯ ಬೆಳವಣಿಗೆಯೊಂದರಲ್ಲಿ ನಾಗ ಮಂಗಲ ವಿಧಾನಸಭಾ ಕ್ಷೇತ್ರಕ್ಕೆ ಮಾಜಿ ಸಂಸದ ಎಲ್.ಆರ್.ಶಿವರಾಮೇಗೌಡ ಪತ್ನಿ ಸುಧಾ ಶಿವ ರಾಮೇಗೌಡಗೆ ಟಿಕೆಟ್ ಒಲಿದಿದೆ.

ಆರಂಭದಲ್ಲಿ ಕ್ಷೇತ್ರದಲ್ಲಿ ಬಿರುಸಿನಿಂದ ಓಡಾಡು ತ್ತಿದ್ದ ಉದ್ಯಮಿ ಫೈಟರ್ ರವಿ (ಮಲ್ಲಿಕಾರ್ಜುನ್) ಅವರಿಗೆ ಟಿಕೆಟ್ ಎಂದು ಹೇಳಲಾಗಿತ್ತು. ಅವರ ಮೇಲಿರುವ ಕೆಲವು ಆರೋಪಗಳು ಕಾಂಗ್ರೆಸ್ ಪಕ್ಷಕ್ಕೆ ದೊಡ್ಡ ಅಸ್ತ್ರವಾಗಿದ್ದರಿಂದ ಬಿಜೆಪಿ ಟಿಕೆಟ್ ನೀಡಲು ಹಿಂದೆ–ಮುಂದು ನೋಡಿತ್ತು. ಕಡೆಗೆ ಮಾಜಿ ಸಂಸದ ಎಲ್.ಆರ್.ಶಿವರಾಮೇಗೌಡರನ್ನು ಪಕ್ಷಕ್ಕೆ ಸೇರಿಸಿಕೊಂಡು ಗೌಡರಿಗೆ ಅಥವಾ ಅವರ ಪುತ್ರ ಚೇತನ್‌ಗೆ ಟಿಕೆಟ್ ಎಂದೇ ಹೇಳಲಾಗಿತ್ತು. ಇದೀಗ ಅಚ್ಚರಿ ಬೆಳವಣಿಗೆಯಲ್ಲಿ ಗೌಡರ ಪತ್ನಿ ಸುಧಾಗೆ ಟಿಕೆಟ್ ಘೋಷಿಸಲಾಗಿದೆ.

ಸುಧಾ ಮೂಲತಃ ಪಕ್ಕದ ತುಮಕೂರು ಜಿಲ್ಲೆಯ ತುರುವೇಕೆರೆ ಮಾಜಿ ಶಾಸಕರೊಬ್ಬರ ಪುತ್ರಿ ಯಾಗಿದ್ದು, ನಾಗಮಂಗಲ ಕ್ಷೇತ್ರದಲ್ಲಿ ಅವರಿಗೆ ಒಳ್ಳೆಯ ಹೆಸರಿದೆ. ಅದರ ಜೊತೆಗೆ ಶಿವರಾಮೇ ಗೌಡಗಿಂತ ಉತ್ತಮ ಅಭ್ಯರ್ಥಿ ಎಂದು ನಿರ್ಧರಿಸಿ, ಜೆಡಿಎಸ್ ಹಾಗೂ ಕಾಂಗ್ರೆಸ್‌ಗೆ ವಿರುದ್ಧ ಸೂಕ್ತ ಅಭ್ಯರ್ಥಿ ಎನ್ನುವ ಕಾರಣಕ್ಕೆ ಸುಧಾಗೆ ಟಿಕೆಟ್ ನೀಡಲಾಗಿದೆ ಎಂದು ಹೇಳಲಾಗಿದೆ.

ಶ್ರೀರಂಗಪಟ್ಟಣಕ್ಕೆ ಸಚ್ಚಿ ಹೆಸರು ಘೋಷಣೆ: ಶ್ರೀರಂಗಪಟ್ಟಣ ಕ್ಷೇತ್ರಕ್ಕೆ ಯುವ ಮುಖಂಡ ಇಂಡುವಾಳು ಸಚ್ಚಿದಾನಂದಗೆ ಬಿಜೆಪಿ ಟಿಕೆಟ್ ಫೈನಲ್ ಮಾಡಿದ್ದು, ಈ ಮೂಲಕ ತಮ್ಮ ಆಪ್ತ ಸಚ್ಚಿಗೆ ಟಿಕೆಟ್ ಕೊಡಿಸುವಲ್ಲಿ ಸಂಸದೆ ಸುಮಲತಾ ಅಂಬರೀಷ್ ಯಶಸ್ವಿಯಾಗಿದ್ದಾರೆ. ಕಳೆದ ಒಂದು ವರ್ಷಗಳ ಹಿಂದೆ ಬಿಜೆಪಿ ಸೇರ್ಪಡೆಯಾಗಿದ್ದ ಸಚ್ಚಿ ಅದಕ್ಕೂ ಮುನ್ನ ಸುಮಲತಾ ಪರ ಚುನಾವಣೆ ಪ್ರಚಾರ ನಡೆಸಿ ಕಾಂಗ್ರೆಸ್‌ನಿಂದ ಉಚ್ಚಾಟನೆಗೊಂಡಿ ದ್ದರು. ಆ ಬಳಿಕ ಶಂಕರೇಗೌಡ ಚಾರಿಟಬಲ್ ಟ್ರಸ್ಟ್ ಮೂಲಕ ಸಮಾಜ ಸೇವೆಯಲ್ಲಿ ತೊಡಗಿದ್ದ ಅವರನ್ನು ಬಿಜೆಪಿ ಪಕ್ಷ ಸೇರ್ಪಡೆ ಮಾಡಿಕೊಂಡಿತ್ತು. ಶ್ರೀರಂಗಪಟ್ಟಣದಲ್ಲಿ ಬಿಜೆಪಿ ಮುಖಂಡರಾದ ಕೆ.ಎಸ್.ನಂಜುಂಡೇಗೌಡ, ಶ್ರೀಧರ್ ಸೇರಿದಂತೆ ಹಲವರು ಟಿಕೆಟ್ ಆಕಾಂಕ್ಷಿತರಿದ್ದರು. ಅಂತಿಮ ವಾಗಿ ಸಚ್ಚಿದಾನಂದಗೆ ಪಕ್ಷ ಮಣೆ ಹಾಕಿದೆ.

ಮದ್ದೂರಿಗೆ ಸ್ವಾಮಿ ಅಭ್ಯರ್ಥಿ: ಮದ್ದೂರು ವಿಧಾನ ಸಭಾ ಕ್ಷೇತ್ರಕ್ಕೆ ಮನ್‌ಮುಲ್ ನಿರ್ದೇಶಕ ಎಸ್.ಪಿ.ಸ್ವಾಮಿಗೆ ಬಿಜೆಪಿ ಟಿಕೆಟ್ ಘೋಷಿಸಿದ್ದು, ಹಾಲಿ ಶಾಸಕ ಡಿ.ಸಿ.ತಮ್ಮಣ್ಣ ಅವರ ಬಹುಕಾಲದ ಶಿಷ್ಯನಿಗೆ ಬಿಜೆಪಿ ಮಣೆ ಹಾಕಿದೆ.

ಕಳೆದ ಎರಡು ದಶಕಗಳಿಂದ ಜೆಡಿಎಸ್‌ನಲ್ಲಿದ್ದ ಎಸ್.ಪಿ.ಸ್ವಾಮಿ, ಹಾಲಿ ಜೆಡಿಎಸ್ ಶಾಸಕ ಡಿ.ಸಿ. ತಮ್ಮಣ್ಣ ಅವರ ಪರಮಾಪ್ತರಾಗಿದ್ದರು. ಜೊತೆಗೆ ತಮ್ಮ ಪತ್ನಿ ನಾಗರತ್ನ ಸ್ವಾಮಿಗೆ ಜಿಪಂ ಅಧ್ಯಕ್ಷ ಗಾದಿ ಕೊಡಿಸುವಲ್ಲಿಯೂ ಯಶಸ್ವಿಯಾಗಿದ್ದರು. ಆದರೆ ಹಾಲಿ ಶಾಸಕರ ವಿರುದ್ಧ ಬಂಡೆದ್ದು ಪಕ್ಷ ಬಿಟ್ಟಿದ್ದ ಅವರು ಬಿಜೆಪಿಯಲ್ಲಿ ಸಕ್ರಿಯವಾಗಿದ್ದರು. ಹಲವು ವರ್ಷಗಳಿಂದ ಸಮಾಜ ಸೇವೆಯಲ್ಲಿ ತೊಡಗಿದ್ದ ಅವರಿಗೆ ಬಿಜೆಪಿ ಟಿಕೆಟ್ ನೀಡಿದೆ.

ಮೇಲುಕೋಟೆಯಿಂದ ಇಂದ್ರೇಶ್‌ಗೆ ಟಿಕೆಟ್: ಮೇಲುಕೋಟೆ ಕ್ಷೇತ್ರದಲ್ಲಿ ಡಾ.ಇಂದ್ರೇಶ್‌ಗೆ ಬಿಜೆಪಿ ಟಿಕೆಟ್ ನೀಡಿದ್ದು, ಇಂದ್ರೇಶ್ ಕಳೆದೊಂದು ವರ್ಷಗಳಿಂದ ಕ್ಷೇತ್ರದಲ್ಲಿ ಸಕ್ರೀಯವಾಗಿದ್ದರು. ಮೇಲುಕೋಟೆ ಯಲ್ಲಿ ಬಿಜೆಪಿ ಟಿಕೆಟ್‌ಗೆ ಪೈಪೋಟಿ ಇಲ್ಲದ ಕಾರಣ ಸಕ್ರಿಯರಾಗಿದ್ದ ಇಂದ್ರೇಶ್‌ಗೆ ಟಿಕೆಟ್ ಒಲಿದು ಬಂದಿದೆ.

ಮೇಲುಕೋಟೆ ಕ್ಷೇತ್ರದ ಮತ್ತಷ್ಟು ಅಭಿವೃದ್ಧಿಗಾಗಿ ಮತ್ತೊಮ್ಮೆ ಸ್ಪರ್ಧೆ: ಸಿಎಸ್‌ಪಿ



ಚಿನಕುರಳಿ, ಏ.11– ಮೇಲುಕೋಟೆ ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿಪಡಿಸಲು ಹೊಸ ಆಲೋಚನೆ ಗಳೊಂದಿಗೆ ಮತ್ತೊಮ್ಮೆ ಚುನಾವಣೆಗೆ ಸ್ಪರ್ಧಿಸಿದ್ದೇನೆ ಎಂದು ಶಾಸಕ ಸಿ.ಎಸ್.ಪುಟ್ಟರಾಜು ತಿಳಿಸಿದರು.

ಇಲ್ಲಿಗೆ ಸಮೀಪದ ನಾರಾಯಣಪುರ ಗ್ರಾಮ ದಲ್ಲಿ ಆಯೋಜಿಸಿದ್ದ ಅಭಿನಂದನಾ ಸಮಾರಂಭ ದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ನಾರಾಯಣಪುರ ಗ್ರಾಪಂ ವ್ಯಾಪ್ತಿಯ ಜನತೆ ನನ್ನನ್ನು ತಮ್ಮ ಮನೆ ಮಗನಂತೆ ಕಂಡಿದ್ದಾರೆ. ನಾನು ಚಿಕ್ಕ ವಯಸ್ಸಿನಿಂದಲೂ ಈ ಭಾಗದ ಜನರೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿದ್ದೇನೆ. ಹೀಗಾಗಿ ಪ್ರತಿ ಚುನಾವಣೆಯಲ್ಲಿ ಈ ಭಾಗದ ಜನರು ಅಧಿಕ ಬಹುಮತ ನೀಡಿ ನನ್ನನ್ನು ಬೆಂಬಲಿಸಿದ್ದಾರೆ. ಅದರಂತೆ ನಾನು ಈ ಭಾಗದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಅಲ್ಲದೇ ಕಳೆದ 5 ವರ್ಷಗಳಲ್ಲಿ 70 ಕೋಟಿ ರೂ. ಅನುದಾನ ನೀಡಿ ನಾರಾಯಣಪುರ ಗ್ರಾಪಂ ವ್ಯಾಪ್ತಿಯ ಹಳ್ಳಿಗಳ ಅಭಿವೃದ್ಧಿ ಪಡಿಸಿದ್ದೇನೆ. ಹೀಗಾಗಿ ಈ ಬಾರಿಯ ಚುನಾವಣೆಯಲ್ಲಿ ಅಧಿಕ ಬಹುಮತ ನೀಡಿ ಗೆಲ್ಲಿಸುವ ವಿಶ್ವಾಸವಿದೆ ಎಂದರು.

ನೀವು ಕೊಟ್ಟ ಅಧಿಕಾರವನ್ನು ಸದ್ಬಳಕೆ ಮಾಡಿ ಕೊಂಡು ಕ್ಷೇತ್ರವನ್ನು ಮಾದರಿಯಾಗಿ ಅಭಿವೃದ್ಧಿ ಪಡಿಸಿದ್ದೇನೆ. ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿ ಪಡಿಸ ಬೇಕೆಂಬ ಆಲೋಚನೆಯೊಂದಿಗೆ ಸ್ಪರ್ಧಿಸುತ್ತಿದ್ದೇನೆ. ಕ್ಷೇತ್ರದಲ್ಲಿ ಬಾಕಿ ಉಳಿದಿರುವ ನೂರಾರು ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತ ಗೊಳಿಸಲು ನನಗೆ ಮತ್ತೊಂದು ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿದರು. ನಾನು ಯಾವುದಾದರೊಂದು ಅಭಿವೃದ್ಧಿ ಕಾರ್ಯಕ್ಕೆ ಮುಂದಾದರೆ ಪುಟ್ಟರಾಜುಗೆ ಒಳ್ಳೆಯ ಹೆಸರು ಬರುತ್ತದೆ ಎಂದು ವಿರೋಧಿಗಳು ಸಾಕಷ್ಟು ಅಡ್ಡಿಪಡಿಸಿದರು. ಆದರೆ ಅವುಗಳ ಬಗ್ಗೆ ಗಮನ ನೀಡದೇ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ್ದೇನೆ ಎಂದ ಅವರು, ಕೆಲವರು ತಾಲೂಕಿನ ಕುಲಗೆರೆ ಕೆರೆ ಅಭಿವೃದ್ಧಿಗೆ ಅಡ್ಡಿಪಡಿಸಿದರು. ಇಲ್ಲದಿದ್ದರೇ ಈ ವೇಳೆಗಾಗಲೇ ಕದಲಗೆರೆ ಕೆರೆ ಸಂಪೂರ್ಣ ವಾಗಿ ಅಭಿವೃದ್ಧಿ ಹೊಂದುತ್ತಿತ್ತು ಎಂದು ಕಿಡಿಕಾರಿದರು.

ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಯಶವಂತ್ ಕುಮಾರ್ ಮಾತನಾಡಿದರು. ಇದಕ್ಕೂ ಮುನ್ನಾ ಗ್ರಾಮದ ನೂರಾರು ಮಹಿಳೆಯರು ಪೂರ್ಣ ಕುಂಭ, ವಿವಿಧ ಕಲಾತಂಡಗಳ ಮೂಲಕ ಅದ್ದೂರಿ ಮೆರವಣಿಗೆ ಮೂಲಕ ಶಾಸಕ ಸಿ.ಎಸ್.ಪುಟ್ಟರಾಜು ಅವರಿಗೆ ಪುಷ್ಪಾರ್ಚನೆ ಮಾಡಿ, ಗಾತ್ರದ ಹಣ್ಣಿನ ಹಾರ ಹಾಕಿ ವೇದಿಕೆಗೆ ಕರೆತಂದರು. ಇದೇ ವೇಳೆ ರೈತ ಸಂಘ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಜೆಡಿಎಸ್ ಸೇರ್ಪಡೆಗೊಂಡರು.

ಸಮಾರಂಭದಲ್ಲಿ ತಾಲೂಕು ಜೆಡಿಎಸ್ ಅಧ್ಯಕ್ಷ ಎಸ್.ಎ.ಮಲ್ಲೇಶ್, ಸಿ.ಎಸ್.ಗೋಪಾಲಗೌಡ, ನವೀನ ವೆಂಕಟೇಶ್, ರಾಧಾಕೃಷ್ಣ, ಕೆಂಪರಾಜು, ಸುಂದ್ರಣ್ಣ, ಗ್ರಾಪಂ ಅಧ್ಯಕ್ಷೆ ಪವಿತ್ರ ಸ್ವಾಮೀಗೌಡ, ರಾಮಚಂದ್ರು, ಕುಮಾರ್, ಯೋಗನರಸಿಂಹೇಗೌಡ, ವೆಂಕಟೇಶ್, ಆನಂದ್ ಮಾಸ್ಟರ್, ಪ್ರಕಾಶ್, ನಟರಾಜು, ಎನ್.ಕೆ. ಜಯರಾಮು, ಕರಿಯಯ್ಯ ಸೇರಿದಂತೆ ಗ್ರಾಪಂ ವ್ಯಾಪ್ತಿಯ ಜೆಡಿಎಸ್ ಪಕ್ಷದ ಮುಖಂಡರು ಇದ್ದರು.

ಗೆಲುವಿನ ಹಳಿಗೆ ಮರಳಿದ ರೋಹಿತ್ ಪಡೆ



ದೆಹಲಿ, ಏ.11– ಪ್ರಸಕ್ತ ಸಾಲಿನ ಆರಂಭಿಕ 2 ಪಂದ್ಯಗಳಲ್ಲಿ ಸೋಲು ಅನುಭವಿಸಿದ್ದ ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್, ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 6 ವಿಕೆಟ್‌ಗಳ ಗೆಲುವು ಸಾಧಿಸಿದೆ.

ಈ ಮೂಲಕ ಮುಂಬೈ ಇಂಡಿಯನ್ಸ್ ಗೆಲುವಿನ ಹಳಿಗೆ ಮರಳಿದರೇ, ಪ್ರಸಕ್ತ ಟೂರ್ನಿಯಲ್ಲಿ ಆಡಿರುವ 4 ಪಂದ್ಯಗಳಲ್ಲೂ ಸೋಲು ಅನುಭವಿಸಿರುವ ಡೆಲ್ಲಿ ಕ್ಯಾಪಿಟಲ್ಸ್ ಸೋಲಿನ ಸುಳಿಗೆ ಸಿಲುಕಿದೆ.

ಇಲ್ಲಿನ ಅರುಣ್ ಜೇಟ್ಲಿ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ 19.4 ಓವರ್‌ಗಳಲ್ಲಿ 172ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಪೃಥ್ವಿ ಶಾ 15 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಮನೀಶ್ ಪಾಂಡೆ 5 ಬೌಂಡರಿ ಒಳಗೊಂಡ 26 ರನ್ ಗಳಿಸಿ ನಿರ್ಗಮಿ ಸಿದರು. ಈ ಹಂತದಲ್ಲಿ ಡೆಲ್ಲಿ ಕೇವಲ 17 ರನ್ ಅಂತರದಲ್ಲಿ 3 ಪ್ರಮುಖ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ನಂತರ ಬಂದ ಅಕ್ಷರ್ ಪಟೇಲ್ ಮುಂಬೈ ಬೌಲರ್‌ಗಳನ್ನು ಚಂಡಾಡಿದರು. ಪಂದ್ಯದಲ್ಲಿ ಬಿರುಸಿನ ಬ್ಯಾಟಿಂಗ್ ನಡೆಸಿದ ಅಕ್ಷರ್ 25 ಎಸೆತಗಳಲ್ಲಿ 5 ಸಿಕ್ಸರ್, 4 ಬೌಂಡರಿ ಒಳಗೊಂಡ 54ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ಮತ್ತೊಂದೆಡೆ ತಾಳ್ಮೆಯ ಆಟವಾಡಿದ ನಾಯಕ ಡೇವಿಡ್ ವಾರ್ನರ್ 51ರನ್ ಗಳಿಸಿ ತಂಡದ ಮೊತ್ತ ಹೆಚ್ಚಿಸಿದರು. ಉಳಿದವರು ನಿರೀಕ್ಷೆಗೆ ತಕ್ಕಂತೆ ಬ್ಯಾಟ್ ಬೀಸಲಿಲ್ಲ. ಮುಂಬೈ ಪರ ಬೆಹ್ರೆನ್ಡಾರ್ಫ್, ಪಿಯೂಷ್ ಚಾವ್ಲಾ ತಲಾ 3, ರಿಲೆ ಮೆರೆಡಿತ್ 2, ಹೃತಿಕ್ ಶೋಕೀನ್ 1 ವಿಕೆಟ್ ಉರುಳಿಸಿದರು.

173 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಮುಂಬೈಗೆ ಇಶಾನ್ ಕಿಶನ್ ಹಾಗೂ ನಾಯಕ ರೋಹಿತ್ ಶರ್ಮಾ ಮೊದಲ ವಿಕೆಟ್‌ಗೆ 71 ರನ್‌ಗಳ ಜೊತೆಯಾಟವಾಡಿ ಉತ್ತಮ ಆರಂಭ ಒದಗಿಸಿದರು. ಆದರೆ ಇಶಾನ್ ಕಿಶನ್ 26 ಎಸೆತದಲ್ಲಿ 31 ರನ್ ಸಿಡಿಸಿ ಔಟಾದರು. ನಂತರ ಬಂದ ತಿಲಕ್ ವರ್ಮಾ 4 ಸಿಕ್ಸರ್, 1 ಬೌಂಡರಿ ಒಳಗೊಂಡ 41 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಈ ವೇಳೆ ಕ್ರೀಸ್‌ಗೆ ಆಗಮಿಸಿದ ಸೂರ್ಯಕುಮಾರ್ ಯಾದವ್ ಶೂನ್ಯಕ್ಕೆ ಔಟಾದರು. ಪಂದ್ಯದಲ್ಲಿ ಅಬ್ಬರಿಸಿದ ರೋಹಿತ್ ಶರ್ಮಾ 45ಎಸೆತಗಳಲ್ಲಿ 4 ಸಿಕ್ಸರ್, 6 ಬೌಂಡರಿ ಒಳಗೊಂಡ 65ರನ್ ಗಳಿಸಿದರು. ಅಂತಿಮವಾಗಿ ಟೀಮ್ ಡೇವಿಡ್ 13, ಕ್ಯಾಮರೂನ್ ಗ್ರೀನ್ 17ರನ್ ಗಳಿಸಿ ತಂಡಕ್ಕೆ ಜಯ ತಂದುಕೊಟ್ಟರು. ಅಂತಿಮವಾಗಿ ಮುಂಬೈ 4 ವಿಕೆಟ್‌ಗೆ 173 ರನ್‌ಗಳಿಸಿ ಗೆಲುವಿನ ದಡ ಸೇರಿತು. ಡೆಲ್ಲಿ ಪರ ಮುಖೇಶ್ ಕುಮಾರ್ 2, ಮುಸ್ತಫಿಜುರ್ ರೆಹಮಾನ್ 1 ವಿಕೆಟ್ ಪಡೆದರು. ರೋಹಿತ್ ಶರ್ಮಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಲಕ್ನೋ	4	3	1	0	6
ರಾಜಸ್ಥಾನ್	3	2	1	0	4
ಕೋಲ್ಕತ್ತಾ	3	2	1	0	4
ಗುಜರಾತ್	3	2	1	0	4
ಸಿಎಸ್‌ಕೆ	3	2	1	0	4
ಪಂಜಾಬ್	3	2	1	0	4
ಆರ್‌ಸಿಬಿ	3	1	2	0	2
ಮುಂಬೈ	3	1	2	0	2
ಎಸ್‌ಆರ್‌ಹೆಚ್	3	1	2	0	2
ಡೆಲ್ಲಿ	4	0	3	0	0



[ಏಪ್ರಿಲ್ 12]

ಚೆನ್ನೈ V/S ರಾಜಸ್ಥಾನ್

ಸ್ಥಳ: ಎಂ.ಎ. ಚಿದಂಬರಂ ಮೈದಾನ, ಚೆನ್ನೈ

ಸಮಯ: ಸಂಜೆ 7.30

ಕರ್ನಾಟಕ ವಿಧಾನಸಭಾ ಚುನಾವಣೆಗೆ ಬಿಜೆಪಿಯ ಪ್ರಕಟಿತ 189 ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿ

ಚಾಮುಂಡೇಶ್ವರಿ	ಕವೀಶ್ ಗೌಡ
ಚಾಮರಾಜ	ಎಲ್. ನಾಗೇಂದ್ರ
ನರಸಿಂಹರಾಜ	ಸಂದೇಶ ಸ್ವಾಮಿ
ವರುಣ	ವಿ. ಸೋಮಣ್ಣ
ಟಿ. ನರಸೀಪುರ	ರೇವಣ್ಣ
ಪಿರಿಯಾಪಟ್ಟಣ	ಸಿ.ಎಚ್. ವಿಜಯಶಂಕರ್
ಕೆ.ಆರ್. ನಗರ	ವೆಂಕಟೇಶ್ ಹೊಸಳ್ಳಿ
ಹುಣಸೂರು	ದೇವರಹಳ್ಳಿ ಸೋಮಶೇಖರ್
ನಂಜನಗೂಡು	ಬಿ. ಹರ್ಷವರ್ಧನ
ಮಡಿಕೇರಿ	ಅಪ್ಪಚ್ಚು ರಂಜನ್
ವಿರಾಜಪೇಟೆ	ಕೆ.ಜಿ. ಬೋಪಯ್ಯ
ಚಾಮರಾಜನಗರ	ವಿ.ಸೋಮಣ್ಣ
ಗುಂಡ್ಲುಪೇಟೆ	ಸಿ.ಎಸ್. ನಿರಂಜನಕುಮಾರ್
ಹನೂರು	ಡಾ. ಪ್ರೀತಂ ನಾಗಪ್ಪ
ಕೊಳ್ಳೇಗಾಲ	ಎನ್. ಮಹೇಶ್
ಮಳವಳ್ಳಿ	ಮುನಿರಾಜು
ಮದ್ದೂರು	ಎಸ್.ಪಿ. ಸ್ವಾಮಿ
ಮೇಲುಕೋಟೆ	ಇಂದ್ರೇಶ್ ಕುಮಾರ್
ಮಂಡ್ಯ	ಅಶೋಕ ಜಯರಾಂ
ಶ್ರೀರಂಗಪಟ್ಟಣ	ಇಂಡವಾಳು ಸಚ್ಚಿದಾನಂದ
ನಾಗಮಂಗಲ	ಸುಧಾ ಶಿವರಾಂ
ಕೆ.ಆರ್. ಪೇಟೆ	ಕೆ.ಸಿ. ನಾರಾಯಣಗೌಡ
ಬೇಲೂರು	ಉಳ್ಳಳ್ಳಿ ಸುರೇಶ್
ಹಾಸನ	ಜೆ. ಪ್ರೀತಂಗೌಡ
ಹೊಳೆನರಸೀಪುರ	ದೇವರಾಜೇಗೌಡ
ಅರಕಲಗೂಡು	ಯೋಗಾ ರಮೇಶ್
ಸಕಲೇಶ ಪುರ	ಸಿಮೆಂಟ್ ಮಂಜು
ತರೀಕೆರೆ	ಡಿ.ಎಸ್. ಸುರೇಶ್
ಕಡೂರು	ಬೆಳ್ಳಿ ಪ್ರಕಾಶ್
ಚಿಕ್ಕನಾಯಕನಹಳ್ಳಿ	ಜೆ.ಸಿ. ಮಾಧುಸ್ವಾಮಿ
ತಿಪಟೂರು	ಬಿ.ಸಿ. ನಾಗೇಶ್
ತುರುವೇಕೆರೆ	ಮಸಾಲಾ ಜಯರಾಂ
ಕುಣಿಗಲ್	ಡಿ.ಕೃಷ್ಣಕುಮಾರ್
ತುಮಕೂರು ನಗರ	ಜಿ.ಬಿ. ಜ್ಯೋತಿಗಣೇಶ್
ತುಮಕೂರು ಗ್ರಾ.	ಬಿ. ಸುರೇಶ್ ಗೌಡ
ಕೊರಟಗೆರೆ	ಬಿ.ಎಚ್. ಅನಿಲ್ ಕುಮಾರ್
ಶಿರಾ	ರಾಜೇಶಗೌಡ
ಪಾವಗಡ	ಕೃಷ್ಣ ನಾಯಕ್
ಮಧುಗಿರಿ	ಎಲ್.ಸಿ. ನಾಗರಾಜ್
ಗೌರಿಬಿದನೂರು	ಶಶಿಧರ್
ಬಾಗೇಪಲ್ಲಿ	ಸಿ. ಮುನಿರಾಜು
ಚಿಕ್ಕಬಳ್ಳಾಪುರ	ಕೆ. ಸುಧಾಕರ್
ಚಿಂತಾಮಣಿ	ವೇಣುಗೋಪಾಲ್
ಶ್ರೀನಿವಾಸಪುರ	ಗುಂಜೂರು ಶ್ರೀನಿವಾಸರೆಡ್ಡಿ
ಮುಳಬಾಗಿಲು	ಶೀಗೇಹಳ್ಳಿ ಸುಂದರ್
ಬಂಗಾರಪೇಟೆ	ಎಂ. ನಾರಾಯಣಸ್ವಾಮಿ
ಕೋಲಾರ	ವರ್ತೂರು ಪ್ರಕಾಶ್
ಮಾಲೂರು	ಕೆ.ಎಸ್. ಮಂಜುನಾಥ ಗೌಡ
ಯಲಹಂಕ	ಎಸ್.ಆರ್. ವಿಶ್ವನಾಥ್
ಕೆ.ಆರ್.ಪುರ	ಬೈರತಿ ಬಸವರಾಜ್
ಬ್ಯಾಟರಾಯನಪುರ	ತಮ್ಮೇಶ್ ಗೌಡ
ಯಶವಂತಪುರ	ಎಸ್.ಟಿ. ಸೋಮಶೇಖರ್
ಆರ್.ಆರ್. ನಗರ	ಮುನಿರತ್ನ ನಾಯ್ಡು
ದಾಸರಹಳ್ಳಿ	ಎಸ್. ಮುನಿರಾಜು
ಮಹಾಲಕ್ಷ್ಮೀ ಲೇಔಟ್	ಕೆ.ಗೋಪಾಲಯ್ಯ
ಮಲ್ಲೇಶ್ವರ	ಸಿ.ಎನ್. ಅಶ್ವತ್ಥನಾರಾಯಣ
ಪುಲಕೇಶಿ ನಗರ	ಮುರಳಿ
ಸರ್ವಜ್ಞನಗರ	ಪದ್ಮನಾಭ ರೆಡ್ಡಿ
ಸಿ.ವಿ.ರಾಮನ್ ನಗರ	ಎಸ್.ರಘು
ಶಿವಾಜಿನಗರ	ಎನ್. ಚಂದ್ರ
ಶಾಂತಿನಗರ	ಶಿವಕುಮಾರ್
ಗಾಂಧಿನಗರ	ಎ.ಆರ್. ಸಪ್ತಗಿರಿಗೌಡ
ರಾಜಾಜಿನಗರ	ಎಸ್.ಸುರೇಶ್‌ಕುಮಾರ್
ವಿಜಯನಗರ	ಎಚ್.ರವೀಂದ್ರ
ಚಾಮರಾಜಪೇಟೆ	ಭಾಸ್ಕರರಾವ್
ಚಿಕ್ಕಪೇಟೆ	ಉದಯ ಗರುಡಾಚಾರ್
ಬಸವನಗುಡಿ	ಎಲ್.ಎ. ರವಿಸುಬ್ರಹ್ಮಣ್ಯ
ಪದ್ಮನಾಭಗರ	ಆರ್.ಅಶೋಕ
ಬಿ.ಟಿ.ಎಂ. ಲೇಔಟ್	ಶ್ರೀಧರ ರೆಡ್ಡಿ
ಜಯನಗರ	ಸಿ.ಕೆ. ರಾಮಮೂರ್ತಿ
ಬೊಮ್ಮನಹಳ್ಳಿ	ಸತೀಶ ರೆಡ್ಡಿ
ಬೆಂಗಳೂರು ದಕ್ಷಿಣ	ಎಂ.ಕೃಷ್ಣಪ್ಪ
ಆನೇಕಲ್	ಹುಲ್ಲಳ್ಳಿ ಶ್ರೀನಿವಾಸ್
ಹೊಸಕೋಟೆ	ಎಂ.ಟಿ.ಬಿ. ನಾಗರಾಜ್
ದೇವನಹಳ್ಳಿ	ಪಿಳ್ಳ ಮುನಿಶ್ಯಾಮಪ್ಪ
ದೊಡ್ಡಬಳ್ಳಾಪುರ	ಧೀರಜ್ ಮುನಿರಾಜು
ನೆಲಮಂಗಲ	ಸಪ್ತಗಿರಿ ನಾಯ್ಕ್
ಮಾಗಡಿ	ಪ್ರಸಾದ್ ಗೌಡ
ರಾಮನಗರ	ಗೌತಮಗೌಡ
ಕನಕಪುರ	ಆರ್. ಅಶೋಕ
ಚನ್ನಪಟ್ಟಣ	ಸಿ.ಪಿ. ಯೋಗೇಶ್ವರ್
ಬೆಳ್ತಂಗಡಿ	ಹರೀಶ್ ಪೂಂಜ
ಮೂಡಬಿದರೆ	ಉಮಾನಾಥ ಕೋಟ್ಯಾನ್
ಮಂಗಳೂರು ಉ.	ಭರತ್ ಶೆಟ್ಟಿ
ಮಂಗಳೂರು ದ.	ವೇದವ್ಯಾಸ ಕಾಮತ್
ಮಂಗಳೂರು	ಸತೀಶ್ ಕುಂಪಲ
ಬಂಟ್ವಾಳ	ರಾಜೇಶ ನಾಯಕ
ಪುತ್ತೂರು	ಆಶಾ ತಿಮ್ಮಪ್ಪ
ಸುಳ್ಯ	ಭಾಗೀರಥಿ ಮುರುಲ್ಯ
ಶಿಗ್ಗಾವಿ	ಬಸವರಾಜ ಬೊಮ್ಮಾಯಿ
ನಿಪ್ಪಾಣಿ	ಶಶಿಕಲಾ ಜೊಲ್ಲೆ
ಚಿಕ್ಕೋಡಿ	ಸದಲಗ ರಮೇಶ್ ಕತ್ತಿ
ಅಥಣಿ	ಮಹೇಶ ಕುಮಠಳ್ಳಿ
ಕಾಗವಾಡ	ಶ್ರೀಮಂತ ಪಾಟೀಲ
ಕುಡಚಿ(ಎಸ್‌ಸಿ)	ಪಿ. ರಾಜೀವ್
ರಾಯಭಾಗ (ಎಸ್‌ಸಿ)	ದುರ್ಯೋಧನ ಐಹೊಳೆ
ಹುಕ್ಕೇರಿ	ನಿಖಿಲ್ ಕತ್ತಿ
ಅರಭಾವ	ಬಾಲಚಂದ್ರ ಜಾರಕಿಹೊಳಿ
ಗೋಕಾಕ	ರಮೇಶ ಜಾರಕಿಹೊಳಿ
ಯಮಕನಮರಡಿ(ಎಸ್‌ಟಿ)	ಬಸವರಾಜ ಹುಂದ್ರಿ
ಬೆಳಗಾವಿ ಉತ್ತರ	ಡಾ. ರವಿ ಪಾಟೀಲ
ಬೆಳಗಾವಿ ದಕ್ಷಿಣ	ಅಭಯ ಪಾಟೀಲ
ಬೆಳಗಾವಿ ಗ್ರಾಮಾಂತರ	ನಾಗೇಶ್ ಮನ್ನೋಳ್ಕರ್
ಖಾನಾಪುರ	ವಿಠಲ ಹಲಗೇಕರ್
ಕಿತ್ತೂರು	ಮಹಾಂತೇಶ್ ದೊಡ್ಡಗೌಡರ
ಬೈಲಹೊಂಗಲ	ಜಗದೀಶ್ ಚನ್ನಪ್ಪ ಮೆಟಗುಡ್ಡ
ಸವದತ್ತಿ? ಯಲ್ಲಮ್ಮ	ರತ್ನಾ ವಿಶ್ವನಾಥ್ ಮಾಮನಿ
ರಾಮದುರ್ಗ	ಚಿಕ್ಕರೇವಣ್ಣ
ಮುಧೋಳ(ಎಸ್‌ಸಿ)	ಗೋವಿಂದ ಕಾರಜೋಳ
ತೇರದಾಳ	ಸಿದ್ದು ಸವದಿ
ಜಮಖಂಡಿ	ಜಗದೀಶ್ ಗುಡಗುಂಟಿ
ಬೀಳಗಿ	ಮುರುಗೇಶ ನಿರಾಣಿ
ಬಾದಾಮಿ	ಶಾಂತಾ ಗೌಡ ಪಾಟೀಲ
ಬಾಗಲಕೋಟೆ	ವೀರಭದ್ರಯ್ಯ ಚರಂತಿಮಠ
ಹುನಗುಂದ	ದೊಡ್ಡನಗೌಡ ಜಿ. ಪಾಟೀಲ
ಮುದ್ದೇಬಿಹಾಳ	ಎ.ಎಸ್. ಪಾಟೀಲ ನಡಹಳ್ಳಿ
ಬಬಲೇಶ್ವರ	ವಿಜು ಗೌಡ ಎಸ್. ಪಾಟೀಲ
ವಿಜಯಪುರ ನಗರ	ಬಸನಗೌಡ ಪಾಟೀಲ ಯತ್ನಾಳ
ಸಿಂದಗಿ	ರಮೇಶ ಭೂಸನೂರ
ಅಫಜಲಪುರ	ಮಾಲೀಕಯ್ಯ ಗುತ್ತೇದಾರ
ಜೇವರ್ಗಿ	ಶಿವನಗೌಡ ಪಾಟೀಲ ರಡ್ಡೇವಾಡಗಿ
ಸುರಪುರ (ಎಸ್‌ಟಿ)	ನರಸಿಂಹ ನಾಯಕ (ರಾಜೂ ಗೌಡ)
ಶಹಾಪುರ	ಅಮೀನ್‌ರೆಡ್ಡಿ ಯಾಲಗಿ
ಯಾದಗಿರಿ	ವೆಂಕಟರೆಡ್ಡಿ ಮುದ್ನಾಳ
ಚಿತ್ತಾಪುರ (ಎಸ್‌ಸಿ)	ಮಣಿಕಂಠ ರಾಠೋಡ್
ಚಿಂಚೋಳಿ (ಎಸ್‌ಸಿ)	ಡಾ.ಅವಿನಾಶ್ ಜಾಧವ್
ಕಲಬುರಗಿ ಗ್ರಾ.(ಎಸ್‌ಸಿ)	ಬಸವರಾಜ ಮತ್ತಿಮೂಡ
ಕಲಬುರಗಿ ದಕ್ಷಿಣ	ದತ್ತಾತ್ರೇಯ ಪಾಟೀಲ ರೇವೂರ
ಕಲಬುರಗಿ ಉತ್ತರ	ಚಂದ್ರಕಾಂತ್ ಪಾಟೀಲ
ಆಳಂದ	ಸುಭಾಷ್ ಗುತ್ತೇದಾರ
ಬಸವಕಲ್ಯಾಣ	ಶರಣು ಸಲಗರ
ಹುಮ್ನಾಬಾದ್	ಸಿದ್ದು ಪಾಟೀಲ
ಬೀದರ್ ದಕ್ಷಿಣ	ಡಾ. ಶೈಲೇಂದ್ರ ಬೆಲ್ದಾಳೆ
ಔರಾದ್ (ಎಸ್‌ಸಿ)	ಪ್ರಭು ಚವ್ಹಾಣ್
ರಾಯಚೂರು ಗ್ರಾ.(ಎಸ್‌ಟಿ)	ತಿಪ್ಪರಾಜು ಹವಾಲ್ದಾರ್
ರಾಯಚೂರು	ಡಾ. ಶಿವರಾಜ ಪಾಟೀಲ
ದೇವದುರ್ಗ (ಎಸ್‌ಟಿ)	ಕೆ. ಶಿವನಗೌಡ ನಾಯಕ
ಲಿಂಗಸುಗೂರು (ಎಸ್‌ಸಿ)	ಮಾನಪ್ಪ ಡಿ. ವಜ್ಜಲ್
ಸಿಂಧನೂರು	ಕೆ. ಕರಿಯಪ್ಪ
ಮಸ್ಕಿ (ಎಸ್‌ಟಿ)	ಪ್ರತಾಪಗೌಡ ಪಾಟೀಲ
ಕುಷ್ಟಗಿ	ದೊಡ್ಡನಗೌಡ ಪಾಟೀಲ
ಕನಕಗಿರಿ (ಎಸ್‌ಸಿ)	ಬಸವರಾಜ ದಢೇಸಗೂರು
ಯಲಬುರ್ಗಾ	ಹಾಲಪ್ಪ ಬಸಪ್ಪ ಆಚಾರ್
ಶಿರಹಟ್ಟಿ (ಎಸ್)	ಡಾ. ಚಂದ್ರು ಲಮಾಣಿ
ಗದಗ	ಅನಿಲ್ ಮೆಣಸಿನಕಾಯಿ
ನರಗುಂದ	ಸಿ.ಸಿ. ಪಾಟೀಲ
ನವಲಗುಂದ	ಶಂಕರ ಪಾಟೀಲ ಮುನೇನಕೊಪ್ಪ
ಕುಂದಗೋಳ	ಎಂ.ಆರ್. ಪಾಟೀಲ
ಧಾರವಾಡ	ಅಮೃತ ಅಯ್ಯಪ್ಪ ದೇಸಾಯಿ
ಹುಬ್ಬಳ್ಳಿ–ಧಾರವಾಡ ಪೂರ್ವ (ಎಸ್‌ಸಿ)	ಡಾ. ಕ್ರಾಂತಿ ಕಿರಣ್
ಹುಬ್ಬಳ್ಳಿ–ಧಾರವಾಡ ಪಶ್ಚಿಮ	ಅರವಿಂದ ಬೆಲ್ಲದ
ಹಳಿಯಾಳ	ಸುನೀಲ್ ಹೆಗ್ಡೆ
ಕಾರವಾರ	ರೂಪಾಲಿ ನಾಯ್ಕ
ಕುಮಟಾ	ದಿನಕರ ಶೆಟ್ಟಿ
ಭಟ್ಕಳ	ಸುನೀಲ್ ನಾಯ್ಕ
ಶಿರಸಿ	ವಿಶ್ವೇಶ್ವರ ಹಗಡೆ ಕಾಗೇರಿ
ಯಲ್ಲಾಪುರ	ಶಿವರಾಂ ಹೆಬ್ಬಾರ್
ಬ್ಯಾಡಗಿ	ವಿರೂಪಾಕ್ಷಪ್ಪ ಬಳ್ಳಾರಿ
ಹಿರೇಕೆರೂರು	ಬಿ.ಸಿ. ಪಾಟೀಲ
ರಾಣೆಬೆನ್ನೂರು	ಅರುಣ್ ಕುಮಾರ್ ಪೂಜಾರ
ಹಡಗಲಿ (ಎಸ್‌ಸಿ)	ಕೃಷ್ಣಾ ನಾಯ್ಕ್
ವಿಜಯನಗರ	ಸಿದ್ಧಾರ್ಥ ಸಿಂಗ್
ಕಂಪ್ಲಿ (ಎಸ್‌ಟಿ)	ಟಿ.ಎಚ್. ಸುರೇಶ್ ಬಾಬು
ಸಿರಗುಪ್ಪ (ಎಸ್‌ಟಿ)	ಎಂ.ಎಸ್. ಸೋಮಲಿಂಗಪ್ಪ
ಬಳ್ಳಾರಿ (ಎಸ್‌ಟಿ)	ಬಿ. ಶ್ರೀರಾಮುಲು
ಬಳ್ಳಾರಿ ನಗರ	ಗಾಲಿ ಸೋಮಶೇಖರ ರೆಡ್ಡಿ
ಸಂಡೂರು (ಎಸ್‌ಟಿ)	ಶಿಲ್ಪಾ ರಾಘವೇಂದ್ರ
ಕೂಡ್ಲಿಗಿ (ಎಸ್‌ಟಿ)	ಲೋಕೇಶ್ ವಿ. ನಾಯಕ್
ಮೊಳಕಾಲ್ಮುರು (ಎಸ್‌ಟಿ)	ಎಸ್. ತಿಪ್ಪೇಸ್ವಾಮಿ
ಚಳ್ಳಕೆರೆ (ಎಸ್‌ಟಿ)	ಅನಿಲ್ ಕುಮಾರ್
ಚಿತ್ರದುರ್ಗ	ಜಿ.ಎಚ್. ತಿಪ್ಪಾರೆಡ್ಡಿ
ಹಿರಿಯೂರು	ಪೂರ್ಣಿಮಾ ಶ್ರೀನಿವಾಸ್
ಹೊಸದುರ್ಗ	ಎಸ್.ಲಿಂಗಮೂರ್ತಿ
ಹೊಳಲ್ಕೆರೆ (ಎಸ್‌ಸಿ)	ಎಂ. ಚಂದ್ರಪ್ಪ
ಜಗಳೂರು (ಎಸ್‌ಟಿ)	ಎಸ್.ವಿ. ರಾಮಚಂದ್ರ
ಹರಿಹರ	ಬಿ.ಪಿ. ಹರೀಶ್
ಹೊನ್ನಾಳಿ	ಎಂ.ಪಿ. ರೇಣುಕಾಚಾರ್ಯ
ಶಿವಮೊಗ್ಗ ಗ್ರಾ.(ಎಸ್‌ಸಿ)	ಅಶೋಕ್ ನಾಯ್ಕ್
ಭದ್ರಾವತಿ	ಮಂಗೋಟೆ ರುದ್ರೇಶ್
ತೀರ್ಥಹಳ್ಳಿ	ಆರಗ ಜ್ಞಾನೇಂದ್ರ
ಶಿಕಾರಿಪುರ	ಬಿ.ವೈ. ವಿಜಯೇಂದ್ರ
ಸೊರಬ	ಕುಮಾರ್ ಬಂಗಾರಪ್ಪ
ಸಾಗರ	ಹರತಾಳು ಎಚ್. ಹಾಲಪ್ಪ
ಕುಂದಾಪುರ	ಕಿರಣ್ ಕುಮಾರ್ ಕೊಡ್ಗಿ
ಉಡುಪಿ	ಯಶ್ಪಾಲ್ ಸುವರ್ಣ
ಕಾಪು	ಗುರ್ಮೆ ಸುರೇಶ್ ಶೆಟ್ಟಿ
ಕಾರ್ಕಳ	ವಿ. ಸುನಿಲ್ ಕುಮಾರ್
ಶೃಂಗೇರಿ	ಡಿ.ಎನ್. ಜೀವರಾಜ್
ಚಿಕ್ಕಮಗಳೂರು	ಸಿ.ಟಿ. ರವಿ

ಮೈಸೂರು ಮಿತ್ರ ಬುಧವಾರ 12 ಏಪ್ರಿಲ್ 2023

ಮಡಿಕೇರಿ ರಾಜಸೀಟು ಉದ್ಯಾನವನದಲ್ಲಿ
ಜಿಪ್‌ಲೈನ್ ಸಾಹಸ ಕ್ರೀಡೆ ಆರಂಭ





ಮಡಿಕೇರಿ, ಏ.11– ಸಸ್ಯಗಳ ಲೋಕ, ಪ್ರಾಕೃತಿಕ ಸೌಂದರ್ಯ ಒಳಗೊಂಡಿರುವ ರಾಜಸೀಟು ಉದ್ಯಾನವನದಲ್ಲಿ ಜಿಫ್‌ಲೈನ್ ಸಾಹಸ ಕ್ರೀಡೆಯು ಸೇರ್ಪಡೆಯಾಗಿದೆ.

ನಗರದ ರಾಜಸೀಟು ಉದ್ಯಾನವನದಲ್ಲಿ ಜಿಫ್‌ಲೈನ್ ಸಾಹಸ ಕ್ರೀಡೆಗೆ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಮತ್ತು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್.ಸುಂದರ ರಾಜ್ ಅವರು ಮಂಗಳವಾರ ಚಾಲನೆ ನೀಡಿದರು. ಸ್ವತಃ ತಾವೇ ಜಿಫ್‌ಲೈನ್‌ನಲ್ಲಿ ಸಾಹಸ ಕ್ರೀಡೆಯಲ್ಲಿ ಪಾಲ್ಗೊಂಡು ಗಮನ ಸೆಳೆದರು. ಬಳಿಕ ಜಿಫ್‌ಲೈನ್ ಸಾಹಸ ಕ್ರೀಡೆಯ ಅನುಭವ ಹಂಚಿಕೊಂಡ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಒಟ್ಟು 310 ಮೀಟರ್ ಉದ್ದದ ಜಿಫ್‌ಲೈನ್ ಅಳವಡಿಸಲಾಗಿದೆ ಎಂದರು.

ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಬೇಕು. ಜೊತೆಗೆ ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯಿಂದ ಸುರಕ್ಷತೆ ಸಂಬಂಧ ಪ್ರಮಾಣ ಪತ್ರ ಪಡೆಯಬೇಕು. ಇದರೊಂದಿಗೆ ಸಾಹಸ ಅಕಾಡೆಮಿಯ ಅಗತ್ಯ ಮಾರ್ಗದರ್ಶನ ಪಾಲಿಸುವಂತೆ ತೋಟಗಾರಿಕೆ ಇಲಾಖೆ ಉಪ ನಿರ್ದೇಶಕರಿಗೆ ಸೂಚಿಸಿದರು. ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಎಚ್.ಆರ್. ನಾಯಕ್ ಅವರು ಜಿಫ್‌ಲೈನ್ ಸಾಹಸ ಕ್ರೀಡೆಯಲ್ಲಿ ಪಾಲ್ಗೊಳ್ಳಲು ಒಬ್ಬರಿಗೆ 300 ರೂ. ನಿಗದಿ ಮಾಡಲಾಗಿದೆ ಎಂದರು. ಇಲಾಖಾ ಖಾಸಗಿ ಸಹಭಾಗಿತ್ವದಲ್ಲಿ ಜಿಪ್‌ಲೈನ್ ಸಾಹಸ ಕ್ರೀಡೆ ನಡೆಯಲಿದೆ. ಬೆಂಗಳೂರು ಸಂಸ್ಥೆಯವರು 5 ವರ್ಷದವರೆಗೆ ಇದನ್ನು ನಿರ್ವಹಿಸಲಿದ್ದಾರೆ ಎಂದು ನಾಯಕ್ ಹೇಳಿದರು. ಜಿಫ್‌ಲೈನ್ ಸಾಹಸ ಕ್ರೀಡೆಯ ಸುರಕ್ಷತೆ ಸಂಬಂಧಿಸಿದಂತೆ ನಿಧಿನ್ ಅವರು ಮಾಹಿತಿ ನೀಡಿದರು. ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಪ್ರಮೋದ್, ನಿರ್ಮಿತಿ ಕೇಂದ್ರದ ಎಂಜಿನಿಯರ್ ರಾಘವೇಂದ್ರ, ಪೊನ್ನಚ್ಚನ ಮಧು ಇತರರು ಇದ್ದರು.

'ಕೊಡವ' ಪದ ಬಳಕೆಗೆ ಕ್ರಮ ಕೈಗೊಳ್ಳದ ಸರ್ಕಾರ

ಹಿಂದುಳಿದ ವರ್ಗಗಳ ಆಯೋಗ ಅಧ್ಯಕ್ಷರೊಂದಿಗೆ ಸಿಎನ್‌ಸಿ ಚರ್ಚೆ



ಮಡಿಕೇರಿ, ಏ.11– ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ ಹೆಗಡೆ ಅವರನ್ನು ಭೇಟಿಯಾದ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ನಿಯೋಗ ಸರ್ಕಾರಿ ದಾಖಲೆಗಳಲ್ಲಿ 'ಕೊಡವ' ಎಂಬ ಶಾಸ್ತ್ರೀಯ ಪದ ಬಳಕೆಯ ಕುರಿತು ಚರ್ಚಿಸಿತು.

ಬೆಂಗಳೂರಿನ ದೇವರಾಜ ಅರಸು ಭವನದಲ್ಲಿರುವ ಹಿಂದುಳಿದ ವರ್ಗಗಳ ಆಯೋಗದ ಕಚೇರಿಯಲ್ಲಿ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಮತ್ತಿತರರು ಜಯಪ್ರಕಾಶ್ ಹೆಗಡೆ ಅವರನ್ನು ಭೇಟಿಯಾಗಿ ನ್ಯಾಯಾಲಯದ ಆದೇಶವಿದ್ದರೂ ಸರ್ಕಾರ 'ಕೊಡವ' ಪದ ಬಳಕೆಗೆ ಕ್ರಮ ಕೈಗೊಳ್ಳದಿರುವುದನ್ನು ಮತ್ತೊಮ್ಮೆ ಕಾನೂನಿನ ಮೂಲಕ ಪ್ರಶ್ನಿಸುವುದಾಗಿ ತಿಳಿಸಿದರು.

ಉಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಗೆಜೆಟ್ ಅಧಿಸೂಚನೆಯ ಮೂಲಕ ಎಲ್ಲಾ ಸರ್ಕಾರಿ ದಾಖಲೆಗಳಲ್ಲಿ ಕೊಡವ ಎಂಬ ಶಾಸ್ತ್ರೀಯ ಪದವನ್ನು ಅಳವಡಿಸುವ ಕುರಿತು ಚರ್ಚಿಸಲಾಗಿದೆ. 2021 ಡಿ.8 ರಂದು, ಡಾ.ದ್ವಾರಕನಾಥ್ ಆಯೋಗದ ವರದಿ ಕೂಡ ಇದನ್ನು ಶಿಫಾರಸು ಮಾಡಿದೆ. ಹೈಕೋರ್ಟ್ ತೀರ್ಪು ನೀಡಿ ಈಗಾಗಲೇ 16 ತಿಂಗಳು ಕಳೆದಿದೆ. ಆದರೆ ಆದೇಶವನ್ನು ಅನುಷ್ಠಾನಗೊಳಿಸುವ ಬದ್ಧತೆಯನ್ನು ಸರ್ಕಾರ ಪ್ರದರ್ಶಿಸುತ್ತಿಲ್ಲ. ಈಗಾಗಲೇ ಕರ್ನಾಟಕ ಹೈಕೋರ್ಟ್‌ನಲ್ಲಿ ಸಂಬಂಧಪಟ್ಟವರ ವಿರುದ್ಧ ನಾವು ನ್ಯಾಯಾಂಗ ನಿಂದನೆ ಪ್ರಕ್ರಿಯೆಗಳನ್ನು ಪ್ರಾರಂಭಿಸಿದ್ದೇವೆ ಎಂದು ನಾಚಪ್ಪ ವಿವರಿಸಿದರು.

ಕೊಡವರ ಮಾತೃಭೂಮಿ ಇದಾಗಿದ್ದು, ಕೊಡವ ಜನಾಂಗದ ಗುರುತು ಮತ್ತು ಅಸ್ತಿತ್ವವೇ ಇಲ್ಲಿದೆ. ಆದರೆ ಒಡೆದು ಆಳುವ ನೀತಿಯ ಜನಪ್ರತಿನಿಧಿಯೊಬ್ಬರು ಹಾಗೂ ವಿದ್ವಾಂಸರೊಬ್ಬರಿಂದ ಕೊಡವರ ಹಕ್ಕುಗಳಿಗೆ ದಕ್ಕೆಯಾಗುತ್ತಿದೆ. ವಲಸಿಗರು ತಾವೇ ಕೊಡವರೆಂದು ಪ್ರತಿಬಿಂಬಿಸಿಕೊಳ್ಳುವ ಮೂಲಕ ಈ ಮಣ್ಣಿನ ನೈಜ ಬುಡಕಟ್ಟು ಜನಾಂಗ ಕೊಡವರ ಹಕ್ಕುಗಳನ್ನು ಕಸಿದುಕೊಳ್ಳುವ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಕೊಡವ ಬ್ರ್ಯಾಂಡ್ ಅನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ ಎಂದು ವಿವರಿಸಿದರು.

ಸಿಎನ್‌ಸಿ ಪ್ರಮುಖರಾದ ಕಲಿಯಂಡ ಪ್ರಕಾಶ್, ಲೆಫ್ಟಿನೆಂಟ್ ಕರ್ನಲ್ ಬಿ.ಎಂ. ಪಾರ್ವತಿ, ಕಲಿಯಂಡ ಮೀನಾ ಪ್ರಕಾಶ್ ಮತ್ತಿತರರು ನಿಯೋಗದಲ್ಲಿದ್ದರು.

ಭೇಟಿಯ ನಂತರ ಮಾತನಾಡಿದ ಎನ್.ಯು.ನಾಚಪ್ಪ, ಆಯೋಗದ ಅಧ್ಯಕ್ಷ ಜಯಪ್ರಕಾಶ ಹೆಗಡೆ ಅವರು ಅತ್ಯಂತ ಪ್ರಾಮಾಣಿಕ ವ್ಯಕ್ತಿ. ಕೊಡವರ ಕಾನೂನುಬದ್ಧ ಆಕಾಂಕ್ಷೆಗಳಿಗೆ ಅವರು ವೈಯಕ್ತಿಕವಾಗಿ ಆಸಕ್ತಿ ವಹಿಸಿದರು. ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಚುನಾವಣೆ ಮುಗಿದ ತಕ್ಷಣ ಆಡಳಿತ ಲೋಪ ಸರಿಪಡಿಸಲಾಗುವುದು ಎಂದು ಭರವಸೆ ನೀಡಿರುವುದಾಗಿ ತಿಳಿಸಿದರು.

ಕುಶಾಲನಗರದ ಬಳಿ ಕಾವೇರಿ ನದಿಯಲ್ಲಿ ಮುಳುಗಿ ತಂದೆ–ಮಗ ಸಾವು

ಶಬರಿಮಲೆಗೆ ತೆರಳಲು ಸ್ನಾನಕ್ಕೆ ಇಳಿದಾಗ ದುರಂತ




ಕುಶಾಲನಗರ, ಏ.11– ಸ್ನಾನಕ್ಕೆಂದು ಕಾವೇರಿ ನದಿಗಿಳಿದ ಅಯ್ಯಪ್ಪಸ್ವಾಮಿ ಮಾಲಾಧಾರಿ ತಂದೆ ಮತ್ತು ಮಗ ನೀರು ಪಾಲಾದ ಘಟನೆ ಗುಡ್ಡೆಹೊಸೂರು ಗ್ರಾಪಂ ವ್ಯಾಪ್ತಿಯ ಚಿಕ್ಕ ಬೆಟಗೇರಿಯಲ್ಲಿ ಸಂಭವಿಸಿದೆ.

ಶನಿವಾರಸಂತೆ ನಿವಾಸಿಗಳಾದ ಮಣಿಕಂಠ (45) ಮತ್ತು ಅವರ ಪುತ್ರ ಪ್ರೀತಂ (15) ಮೃತ ದುರ್ದೈವಿಗಳು.

ಶಬರಿಮಲೆಗೆ ತೆರಳಲು ತಂದೆ–ಮಗ ಸೇರಿದಂತೆ 6 ಮಂದಿ ಮಾಲೆ ಧರಿಸಿದ್ದು, ಕುಶಾಲನಗರದ ಅಯ್ಯಪ್ಪಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಸಂಜೆ ಶಬರಿಮಲೆಗೆ ತೆರಳಲು ನಿರ್ಧರಿಸಿದ್ದರು. ಚಿಕ್ಕ ಬೆಟಗೇರಿಯ ಸಂಬಂಧಿ ರವಿ ಎಂಬುವರ ಮನೆಗೆ ಆಗಮಿಸಿ ಅವರೊಂದಿಗೆ ಶಬರಿಮಲೆಗೆ ತೆರಳುವ ಮುನ್ನ ಸಮೀಪದ ಕಾವೇರಿ ನದಿಗೆ ಮಧ್ಯಾಹ್ನ ಸ್ನಾನಕ್ಕೆ ತೆರಳಿದ್ದ ಸಂದರ್ಭ ಪ್ರೀತಂ ನೀರಿನಲ್ಲಿ ಮುಳುಗಿದನೆನ್ನಲಾಗಿದೆ. ಇದನ್ನು ಕಂಡ ತಂದೆ ಮಣಿಕಂಠ ಆತನ ರಕ್ಷಣೆಗೆ ಮುಂದಾದ ವೇಳೆ ನೀರಿನಲ್ಲಿ ಮುಳುಗಿ ಇಬ್ಬರು ಸಾವನ್ನಪ್ಪಿದರು ಎಂದು ಪ್ರತ್ಯಕ್ಷದರ್ಶಿಗಳು ಪೊಲೀಸರಿಗೆ ತಿಳಿಸಿದ್ದಾರೆ. ಸ್ಥಳಕ್ಕೆ ಕುಶಾಲನಗರ ಗ್ರಾಮಾಂತರ ಠಾಣೆ ಪೊಲೀಸರು, ಅಗ್ನಿಶಾಮಕ ದಳ ಸಿಬ್ಬಂದಿಗಳು ಭೇಟಿ ನೀಡಿ ರಾಫ್ಟ್ ಬೋಟ್ ಬಳಸಿ ನದಿಯಲ್ಲಿ ಮೃತದೇಹಗಳನ್ನು ಪತ್ತೆಹಚ್ಚಿ ಹೊರತೆಗೆದರು. ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವಿಶ್ವ ಚಿತ್ರಕಲಾ ದಿನದ ಅಂಗವಾಗಿ ಮತದಾನ ಮಾಡಿ ಸಂದೇಶದ ಚಿತ್ರಕಲಾ ಸ್ಪರ್ಧೆ

ಮಡಿಕೇರಿ, ಏ.11– ಕೊಡಗು ಜಿಲ್ಲಾ ಮತದಾರರ ಶಿಕ್ಷಣ ಮತ್ತು ಸಹಭಾಗಿತ್ವ ಸಮಿತಿ ವತಿಯಿಂದ ಮತದಾನದ ಮಹತ್ವ ಸಾರುವ ನಿಟ್ಟಿನಲ್ಲಿ ಮಡಿಕೇರಿ ತಾಲೂಕು ಜಾನಪದ ಪರಿಷತ್ ಸಹಯೋಗದಲ್ಲಿ ಏ.15 ರಂದು ವಿಶ್ವ ಚಿತ್ರಕಲಾ ದಿನಾಚರಣೆ ಸಂದರ್ಭ ಚಿತ್ರಕಲಾ ಸ್ಪರ್ಧೆ ಆಯೋಜಿಸಿದೆ.

ನಗರದ ರಾಜಾಸೀಟು ಉದ್ಯಾನವನದಲ್ಲಿ ಏ.15 ರಂದು ಬೆಳಗ್ಗೆ 10 ಗಂಟೆಯಿಂದ ಚಿತ್ರಕಲಾ ಸ್ಪರ್ಧೆಯು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕ ವಿಭಾಗದಲ್ಲಿ ಆಯೋಜಿಸಲ್ಪಟ್ಟಿದೆ. ವಿಶ್ವ ಚಿತ್ರಕಲಾ ದಿನದ ಪ್ರಯುಕ್ತ ಜಿಲ್ಲೆಯ ಚಿತ್ರ ಕಲಾವಿದರು ಕೂಡ ವೈವಿಧ್ಯಮಯ ಚಿತ್ರಕಲೆ ರಚಿಸಲಿದ್ದಾರೆ. ವಿದ್ಯಾರ್ಥಿಗಳು ಮತ್ತು ಸಾರ್ವಜನಿಕ ವಿಭಾಗದಲ್ಲಿ ನಡೆಯುವ ಚಿತ್ರಕಲಾ ಸ್ಪರ್ಧೆಯಲ್ಲಿ ಮತದಾನದ ಮಹತ್ವದ ವಿಷಯದಲ್ಲಿ ಚಿತ್ರಕಲೆ ರಚಿಸಬಹುದಾಗಿದೆ. ಪ್ರೌಢಶಾಲಾ ಮತ್ತು ಕಾಲೇಜು ವಿಭಾಗದಲ್ಲಿ ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆ ಆಯೋಜಿತವಾಗಿದ್ದರೆ, ಸಾರ್ವಜನಿಕರಿಗೆ ಮುಕ್ತ ವಿಭಾಗದಲ್ಲಿ ಸ್ಪರ್ಧೆ ಆಯೋಜಿಸಲ್ಪಟ್ಟಿದೆ. ಚಿತ್ರಕಲೆಗೆ ಅಗತ್ಯ ಪರಿಕರಗಳನ್ನು ಸ್ಪರ್ಧಿಗಳೇ ತರಬೇಕು.

ಇದೇ ಸಂದರ್ಭ 'ನಾನು ಮತದಾನ ಮಾಡುತ್ತೇನೆ' ಎಂಬ ಬೃಹತ್ ಕ್ಯಾನ್ವಸ್‌ನ್ನು ರಾಜಾಸೀಟು ಉದ್ಯಾನವನದಲ್ಲಿ ಕಲಾವಿದರು ರಚಿಸಲಿದ್ದು, ಸಾರ್ವಜನಿಕರು ಕೂಡ ಕ್ಯಾನ್ವಸ್‌ನಲ್ಲಿ ತಮ್ಮ ಸಂದೇಶ ಸಾರಲು ಅವಕಾಶವಿದೆ. ಚಿತ್ರಕಲಾ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಇಚ್ಛಿಸುವ ವಿದ್ಯಾರ್ಥಿಗಳು, ಸಾರ್ವಜನಿಕರು ಸ್ಪರ್ಧೆ ಜರುಗುವ ರಾಜಾಸೀಟ್‌ಗೆ ಏಪ್ರಿಲ್, 15 ರಂದು ಬೆಳಗ್ಗೆ 10 ಗಂಟೆಯೊಳಗೆ ಆಗಮಿಸಿ, ಸ್ಥಳದಲ್ಲಿಯೇ ಹೆಸರು ನೋಂದಾಯಿಸಬಹುದು. ಮಾಹಿತಿಗೆ 9844060174 ಅನಿಲ್ ಎಚ್.ಟಿ. ಅಧ್ಯಕ್ಷರು, ಮಡಿಕೇರಿ ತಾಲೂಕು ಜಾನಪದ ಪರಿಷತ್, ಮಡಿಕೇರಿ ಅನ್ನು ಸಂಪರ್ಕಿಸಬಹುದು ಎಂದು ಸ್ವೀಪ್ ಸಮಿತಿ ಪ್ರಕಟಣೆ ತಿಳಿಸಿದೆ.

ವಿರಾಜಪೇಟೆ, ಮಡಿಕೇರಿ ವಿಧಾನಸಭಾ ಕ್ಷೇತ್ರ

ಜೆಡಿಎಸ್‌ನಿಂದ ಪ್ರಬಲ ಅಭ್ಯರ್ಥಿಗಳು ಕಣಕ್ಕೆ



ವಿರಾಜಪೇಟೆ, ಏ.11– ವಿಧಾನಸಭಾ ಚುನಾವಣೆಗೆ ವಿರಾಜಪೇಟೆ ಮತ್ತು ಮಡಿಕೇರಿ ಕ್ಷೇತ್ರದಿಂದ ಜೆಡಿಎಸ್ ಪ್ರಭಲ ಅಭ್ಯರ್ಥಿಗಳನ್ನು ರಾಜ್ಯಾಧ್ಯಕ್ಷರೇ ಕಣಕ್ಕೆ ಇಳಿಸಲಿದ್ದಾರೆ ಎಂದು ವಿರಾಜಪೇಟೆ ತಾಲೂಕು ಜೆಡಿಎಸ್ ಅಧ್ಯಕ್ಷ ಪಿ.ಎ. ಮಂಜುನಾಥ್ ತಿಳಿಸಿದ್ದಾರೆ.

ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಪಕ್ಷದ ವತಿಯಿಂದ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಕ್ಷದಿಂದ ಐದು ಮಂದಿ ಟಿಕೆಟ್ ಆಕಾಂಕ್ಷಿಗಳಿದ್ದು, ಕೊಡಗಿನ ಎರಡು ಕ್ಷೇತ್ರಗಳಲ್ಲಿ ಅಭ್ಯರ್ಥಿಗಳು ಸ್ಪರ್ಧೆ ಮಾಡಲಿದ್ದಾರೆ. ಎರಡು ರಾಷ್ಟ್ರೀಯ ಪಕ್ಷದವರು ಜೆಡಿಎಸ್ ಮತಗಳ ಮೇಲೆ ಕಣ್ಣು ಹಾಕಿದ್ದಾರೆ. ಯಾವುದೇ ರಾಷ್ಟ್ರೀಯ ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳದೆ ಏಕಾಂಗಿಯಾಗಿ ಸ್ಪರ್ಧಿಸುತ್ತೇವೆ. ಪಕ್ಷದ ಕಾರ್ಯಕರ್ತರು ಸುಳ್ಳು ವದಂತಿಗಳಿಗೆ ಕಿವಿಕೊಡಬಾರದು. ಗೊಂದಲಕ್ಕೊಳಗಾಗದೆ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಬೇಕೆಂದು ಮಂಜುನಾಥ್ ಹೇಳಿದರು.

ಜಿಲ್ಲಾ ಜೆಡಿಎಸ್ ಹಿರಿಯ ಉಪಾಧ್ಯಕ್ಷ ಪಾಣತಲೆ ವಿಶ್ವನಾಥ್ ಮಾತನಾಡಿ ಕೊಡಗಿನ ಎರಡು ಕ್ಷೇತ್ರದಲ್ಲಿ ಜೆಡಿಎಸ್ ಪಕ್ಷ ಸ್ಪರ್ಧೆ ಮಾಡುವುದಿಲ್ಲ ಎಂದು ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳು ಅಪಪ್ರಚಾರ ನಡೆಸುತ್ತಿವೆ. ಆದರೆ ಜೆಡಿಎಸ್ ಪಕ್ಷ ಎರಡು ಕ್ಷೇತ್ರದಲ್ಲಿ ಪ್ರಭಲ ಅಭ್ಯರ್ಥಿಗಳು ಸ್ಪರ್ಧೆ ಮಾಡಲಿದ್ದಾರೆ ಎಂದರು.

ರಾಜ್ಯ ಜೆಡಿಎಸ್ ಕಾರ್ಯದರ್ಶಿ ಪಿ.ಎ. ಯೂಸುಫ್ ಕೊಂಡಂಗೇರಿ ಅವರು ಮಾತನಾಡಿ ಜೆಡಿಎಸ್ ಪಕ್ಷದ ಪಂಚರತ್ನ ಯೋಜನೆ ಅಭಿವೃದ್ಧಿ ಬಗ್ಗೆ ಮನೆ ಮನೆಗೆ ತೆರಳಿ ಜನರಿಗೆ ಮಾಹಿತಿ ನೀಡಬೇಕು. ಈ ಬಾರಿ ಚುನಾವಣೆಯಲ್ಲಿ ಜೆಡಿಎಸ್ ಪಕ್ಷ ರಾಜ್ಯದಲ್ಲಿ ಸರಕಾರ ರಚನೆಯಾಗಲಿದ್ದು. ಕೊಡಗು ಜಿಲ್ಲೆಯಲ್ಲಿ ಸ್ಪರ್ಧೆ ಬಯಸಿರುವ ಅಭ್ಯರ್ಥಿಗಳ ಪಟ್ಟಿಯನ್ನು ಜಿಲ್ಲಾ ಸಮಿತಿಯಿಂದ ರಾಜ್ಯ ವರಿಷ್ಠರಿಗೆ ಕಳುಹಿಸಲಾಗಿದೆ. ವರಿಷ್ಠರು ಈ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಲಿದ್ದಾರೆ ಎಂದರು. ಗೋಷ್ಠಿಯಲ್ಲಿ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಕಾರ್ಯದರ್ಶಿ ಟಿ.ಆರ್. ಹರ್ಷ, ನಗರ ಅಧ್ಯಕ್ಷ ಯೋಗೀಶ್‌ನಾಯ್ಡು ಉಪಸ್ಥಿತರಿದ್ದರು.

ಮಡಿಕೇರಿಗೆ ಅಪ್ಪಚ್ಚುರಂಜನ್, ವಿ.ಪೇಟೆಗೆ ಕೆ.ಜಿ. ಬೋಪಯ್ಯ ಬಿಜೆಪಿ ಅಭ್ಯರ್ಥಿ


ಅಪ್ಪಚ್ಚುರಂಜನ್


ಕೆ.ಜಿ.ಬೋಪಯ್ಯ

ಮಡಿಕೇರಿ, ಏ.11– ರಾಜ್ಯ ವಿಧಾನಸಭೆ ಚುನಾವಣೆಗೆ ಕೆಲವೇ ದಿನಗಳು ಬಾಕಿ ಇದ್ದು, ಭಾರತೀಯ ಜನತಾ ಪಕ್ಷ ಮಂಗಳವಾರ ರಾತ್ರಿ 189 ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿ, ಮಡಿಕೇರಿ ವಿಧಾನಸಭಾ ಕ್ಷೇತ್ರದಿಂದ ಅಪ್ಪಚ್ಚು ರಂಜನ್ ಮತ್ತು ವಿರಾಜಪೇಟೆ ಕ್ಷೇತ್ರದಿಂದ ಕೆ.ಜಿ. ಬೋಪಯ್ಯ ಅವರನ್ನು ಕಣಕ್ಕಿಳಿಸಲು ನಿರ್ಧರಿಸಿದೆ.

ಹಾಲಿ ಶಾಸಕರಾದ ಅಪ್ಪಚ್ಚುರಂಜನ್ ಅವರು ಈಗಾಗಲೇ ಐದು ಬಾರಿ ಶಾಸಕರಾಗಿದ್ದು, ಆರನೇ ಬಾರಿಗೆ ತಮ್ಮ ಅದೃಷ್ಟ ಪರೀಕ್ಷೆ ಮಾಡಲು ಬಿಜೆಪಿ ಅವಕಾಶ ಮಾಡಿಕೊಟ್ಟಿದೆ.

ಇದೇ ರೀತಿ ವಿರಾಜಪೇಟೆ ಹಾಲಿ ಶಾಸಕರಾದ ಕೆ.ಜಿ. ಬೋಪಯ್ಯನವರು ಮೂರು ಬಾರಿ ಶಾಸಕರಾಗಿದ್ದು, ನಾಲ್ಕನೇ ಬಾರಿ ಕಣಕ್ಕೆ ಇಳಿದಿದ್ದಾರೆ. ಹಾಲಿ ಶಾಸಕರ ಕಾರ್ಯವೈಖರಿ ಮತ್ತು ಗುಪ್ತಚರ ವರದಿ ಆಧರಿಸಿ ಗೆಲ್ಲುವ ಹಾಲಿ ಶಾಸಕರಿಗೆ ಟಿಕೆಟ್ ನೀಡಲು ಹೈಕಮಾಂಡ್ ತೀರ್ಮಾನಿಸಿ, ಇವರಿಬ್ಬರನ್ನು ಕಣಕ್ಕಿಳಿಸಲು ನಿರ್ಧರಿಸಿದೆ.

ತಮಗೆ ಟಿಕೆಟ್ ದೊರೆಯುವುದು ಖಚಿತವಾಗಿರುವುದನ್ನು ತಿಳಿದಿದ್ದ ಈ ಇಬ್ಬರು ಶಾಸಕರು ಈಗಾಗಲೇ ಕ್ಷೇತ್ರದಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರ ಜೊತೆಗೆ ಚುನಾವಣಾ ಪ್ರಚಾರವನ್ನು ಸದ್ದಿಲ್ಲದೆ ಆರಂಭಿಸಿದ್ದಾರೆ.

189 ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ

ಚಾಮರಾಜನಗರದಿಂದ ಸೋಮಣ್ಣ ಕಣಕ್ಕೆ

ಗುಂಡ್ಲುಪೇಟೆ– ನಿರಂಜನ್‌ಕುಮಾರ್, ಕೊಳ್ಳೇಗಾಲ– ಎನ್.ಮಹೇಶ್, ಹನೂರು– ಡಾ. ಪ್ರೀತಮ್ ನಾಗಪ್ಪಗೆ ಟಿಕೆಟ್ ಘೋಷಣೆ

ಆಕಾಂಕ್ಷಿಗಳಿಗೆ ತೀವ್ರ ನಿರಾಶೆ; ಕುತೂಹಲ ಮೂಡಿಸಿದ ಮುಂದಿನ ನಡೆ


ವಿ. ಸೋಮಣ್ಣ


ನಿರಂಜನ್‌ಕುಮಾರ್


ಎನ್. ಮಹೇಶ್


ಡಾ. ಪ್ರೀತಮ್

● ಸಿದ್ದಲಿಂಗಸ್ವಾಮಿ

ಚಾಮರಾಜನಗರ, ಏ.11– ಜಿಲ್ಲೆಯ ಎಲ್ಲಾ ನಾಲ್ಕು ವಿಧಾನಸಭಾ ಕ್ಷೇತ್ರಗಳು ಸೇರಿದಂತೆ ರಾಜ್ಯದ 189 ವಿಧಾನಸಭಾ ಕ್ಷೇತ್ರಗಳಿಗೆ ಬಿಜೆಪಿ ಅಭ್ಯರ್ಥಿಗಳ ಪಟ್ಟಿಯನ್ನು ಮಂಗಳವಾರ ರಾತ್ರಿ ಬಿಡುಗಡೆ ಮಾಡಲಾಗಿದ್ದು, ಟಿಕೆಟ್ ಆಕಾಂಕ್ಷಿಗಳಿಗೆ ತೀವ್ರ ನಿರಾಶೆಗೊಳಿಸಿದೆ.

ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ, ಗುಂಡ್ಲುಪೇಟೆ ಕ್ಷೇತ್ರದಿಂದ ಹಾಲಿ ಶಾಸಕ ಸಿ.ಎಸ್. ನಿರಂಜನ್ ಕುಮಾರ್, ಕೊಳ್ಳೇಗಾಲ ಮೀಸಲು ಕ್ಷೇತ್ರದಿಂದ ಮಾಜಿ ಸಚಿವ ಹಾಗೂ ಹಾಲಿ ಶಾಸಕ ಎನ್. ಮಹೇಶ್ ಹಾಗೂ ಹನೂರು ಕ್ಷೇತ್ರದಿಂದ ದಿ.ಎಚ್. ನಾಗಪ್ಪ ಅವರ ಪುತ್ರ ಡಾ. ಪ್ರೀತಮ್ ನಾಗಪ್ಪ ಅವರಿಗೆ ಟಿಕೆಟ್ ನೀಡಲಾಗಿದೆ.

ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಸ್ಪರ್ಧೆ ಮಾಡುತ್ತಿದ್ದು, ಕಾಂಗ್ರೆಸ್‌ನ ಹಾಲಿ ಶಾಸಕ ಸಿ. ಪುಟ್ಟರಂಗಶೆಟ್ಟಿ ವಿರುದ್ಧ ಪ್ರಬಲ ಪ್ರತಿಸ್ಪರ್ಧಿಯಾಗಿ ಕಣಕ್ಕೆ ಇಳಿಯುತ್ತಿದ್ದಾರೆ.

ಸೋಮಣ್ಣ ಅವರು ಮಂಗಳವಾರ ನಗರಕ್ಕೆ ದಿಢೀರ್ ಭೇಟಿ ನೀಡಿ ನಗರದಲ್ಲಿ ಉದ್ಯಮಿಯೊಬ್ಬರ ಮನೆಯನ್ನು ನೋಡಿಕೊಂಡು ಹೋಗಿದ್ದರು. ಅಲ್ಲದೇ ರೈತ ಸಮಾವೇಶದಲ್ಲಿ ಸೋಮಣ್ಣ ಚಾಮರಾಜನಗರದಲ್ಲಿ ಸ್ಪರ್ಧೆ ಮಾಡುವ ಬಗ್ಗೆ ಕೆಲವೊಂದು ಸುಳಿವುಗಳನ್ನು ನೀಡುವ ಮೂಲಕ ಕ್ಷೇತ್ರದಲ್ಲಿ ಸ್ಪರ್ಧೆ ಖಚಿತ ಎಂಬುದನ್ನು ಖಾತರಿ ಪಡಿಸಿದ್ದರು. ಅದರಂತೆ ಮಂಗಳವಾರ ರಾತ್ರಿ ಬಿಡುಗಡೆಯಾದ ಬಿಜೆಪಿ ಅಭ್ಯರ್ಥಿಗಳ ಮೊದಲ ಪಟ್ಟಿಯಲ್ಲಿ ಸೋಮಣ್ಣ ಹೆಸರು ಪ್ರಕಟವಾಗಿದೆ.

ಆಕಾಂಕ್ಷಿಗಳಿಗೆ ನಿರಾಸೆ: ಚಾಮರಾಜನಗರ ಹಾಗೂ ಹನೂರು ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಗಳ ಹೆಸರು ಪ್ರಕಟಗೊಂಡ ಹಿನ್ನೆಯಲ್ಲಿ ಜಿಲ್ಲೆಯಲ್ಲಿನ ಬಿಜೆಪಿ ಟಿಕೆಟ್‌ನ ಪ್ರಬಲ ಆಕಾಂಕ್ಷಿಗಳಿಗೆ ನಿರಾಸೆ ಮೂಡಿಸಿದೆ.

ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಜಿಪಂ ಮಾಜಿ ಅಧ್ಯಕ್ಷೆ ಜಿ. ನಾಗಶ್ರೀ ಪ್ರತಾಪ್, ಎಂ.ರಾಮಚಂದ್ರ, ವಿಧಾನ ಪರಿಷತ್ ಮಾಜಿ ಸದಸ್ಯ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ, ಕಾಡಾ ಅಧ್ಯಕ್ಷ ನಿಜಗುಣ ರಾಜು, ಕೆಆರ್‌ಡಿಐಎಲ್ ಅಧ್ಯಕ್ಷ ಎಂ. ರುದ್ರೇಶ್, ರೈತ ಮುಖಂಡರಾದ ಅಮ್ಮನಪುರ ಮಲ್ಲೇಶ್, ಡಾ.ಎ.ಆರ್. ಬಾಬು, ಪಿ. ವೃಷಬೇಂದ್ರಪ್ಪ ಸೇರಿದಂತೆ 10ಕ್ಕೂ ಹೆಚ್ಚು ಟಿಕೆಟ್ ಆಕಾಂಕ್ಷಿಗಳಿದ್ದರು. ಈಗ ಇವರೆಲ್ಲಿಗೂ ನಿರಾಶೆಯಾಗಿದೆ. ಇವರೆಲ್ಲರ ಮುಂದಿನ ನಡೆ ತೀವ್ರ ಕುತೂಹಲ ಮೂಡಿಸಿದೆ

ಉಳಿದಂತೆ ಹನೂರಿನಲ್ಲಿ ಪ್ರಬಲ ಆಕಾಂಕ್ಷಿಗಳಾಗಿದ್ದ ದತ್ತೇಶ್‌ಕುಮಾರ್, ವೆಂಕಟೇಶ್, ನಿಶಾಂತ್ ಅವರಿಗೂ ಬಿಜೆಪಿ ಟಿಕೆಟ್ ಕೈ ತಪ್ಪಿದೆ. ಗುಂಡ್ಲುಪೇಟೆಯಲ್ಲಿ ಚಾಮುಲ್ ನಿರ್ದೇಶಕ ಎಂ.ಪಿ. ಸುನೀಲ್ ಕೂಡ ಬಿಜೆಪಿ ಟಿಕೆಟ್ ಮೇಲೆ ಕಣ್ಣಿಟ್ಟಿದ್ದರು ಇವರಿಗೂ ನಿರಾಸೆಯಾಗಿದೆ. ಇವರ ನಡೆಯೂ ಸಹ ತೀವ್ರ ಕುತೂಹಲಕ್ಕೆ ಎಡೆ ಮಾಡಿಕೊಟ್ಟಿದೆ.

ಮಹಿಳಾ ಅಭ್ಯರ್ಥಿಗಿಲ್ಲ ಟಿಕೆಟ್



ಚಾಮರಾಜನಗರ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿಯ ಅಭ್ಯರ್ಥಿಗಳು ಘೋಷಣೆಯಾಗಿದ್ದು, ಮಹಿಳಾ ಅಭ್ಯರ್ಥಿಗೆ ಬಿಜೆಪಿ ವರಿಷ್ಠರು ಮಣೆ ಹಾಕಿಲ್ಲ.

ಚಾಮರಾಜನಗರ ಕ್ಷೇತ್ರದಿಂದ ಜಿಪಂ ಮಾಜಿ ಅಧ್ಯಕ್ಷರೂ ಆದ ಮಾಜಿ ಶಾಸಕ ಸಿ. ಗುರುಸ್ವಾಮಿ ಅವರ ಪುತ್ರಿ ನಾಗಶ್ರೀ ಪ್ರತಾಪ್‌ಗೆ ಟಿಕೆಟ್ ದೊರೆಯುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ, ನಿರೀಕ್ಷೆ ಹುಸಿಯಾಗಿದೆ.

ಬೆಂಬಲಿಗರ ಆಕ್ರೋಶ: ಎಲ್ಲಾ ಸಮೀಕ್ಷೆಗಳಲ್ಲಿ ನಾಗಶ್ರೀ ಪ್ರತಾಪ್ ಅವರ ಹೆಸರು ಮುಂಚೂಣಿಯಲ್ಲಿತ್ತು. ಹೀಗಾಗಿ, ಅವರಿಗೆ ಟಿಕೆಟ್ ನೀಡಬೇಕು. ನಾವು ಬಿಜೆಪಿ ಪರವಾಗಿ ಕೆಲಸ ಮಾಡಿ ಅವರನ್ನು ಗೆಲ್ಲಿಸುತ್ತೇವೆ. ಒಂದು ವೇಳೆ ಹೊರಗಿನವರಿಗೆ ಟಿಕೆಟ್ ನೀಡಿದರೆ ಬಿಜೆಪಿ ವಿರುದ್ಧವಾಗಿ ಪ್ರಚಾರ ಮಾಡುತ್ತೇವೆ ಎಂದು ಮಂಗಳವಾರ ಮಧ್ಯಾಹ್ನ ನಾಗಶ್ರೀ ಬೆಂಬಲಿಗರು ಆಕ್ರೋಶ ವ್ಯಕ್ತಪಡಿಸಿದ್ದರು.

ಚಾಮರಾಜನಗರ ವಿಧಾನಸಭಾ ಚುನಾವಣೆ

ನಾಳೆಯಿಂದ ನಾಮಪತ್ರ ಸಲ್ಲಿಕೆ ಆರಂಭ

ಚಾಮರಾಜನಗರ, ಏ.11– ಚುನಾವಣಾ ಆಯೋಗವು ವಿಧಾನಸಭಾ ಚುನಾವಣೆ ವೇಳಾಪಟ್ಟಿಯನ್ನು ಪ್ರಕಟಿಸಿದ್ದು, ಚಾಮರಾಜನಗರ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ವಿಧಾನಸಭಾ ಕ್ಷೇತ್ರಗಳ ಹನೂರು (ವಿಧಾನಸಭಾ ಕ್ಷೇತ್ರದ ಸಂಖ್ಯೆ–221), ಕೊಳ್ಳೇಗಾಲ (ಎಸ್.ಸಿ ವಿಧಾನಸಭಾ ಕ್ಷೇತ್ರದ ಸಂಖ್ಯೆ 222), ಚಾಮರಾಜನಗರ (ವಿಧಾನಸಭಾ ಕ್ಷೇತ್ರದ ಸಂಖ್ಯೆ–223) ಹಾಗೂ ಗುಂಡ್ಲುಪೇಟೆ (ವಿಧಾನಸಭಾ ಕ್ಷೇತ್ರದ ಸಂಖ್ಯೆ–224) ವಿಧಾನಸಭಾ ಕ್ಷೇತ್ರಗಳಲ್ಲಿ ಏ.13ರಿಂದ ಏ.20ರವರೆಗೆ ಸರ್ಕಾರಿ ದಿನಗಳನ್ನು ಹೊರತುಪಡಿಸಿ ಬೆಳಿಗ್ಗೆ 11 ರಿಂದ ಮಧ್ಯಾಹ್ನ 3 ಗಂಟೆಯೊಳಗೆ ಆಯಾ ವಿಧಾನಸಭಾ ಕ್ಷೇತ್ರಗಳ ಕೇಂದ್ರ ಸ್ಥಾನದಲ್ಲಿ ಸ್ಥಾಪಿಸಲಾಗಿರುವ ಚುನಾವಣಾ ಅಧಿಕಾರಿಗಳ ಕಚೇರಿಗಳಲ್ಲಿ ನಾಮಪತ್ರಗಳನ್ನು ಸ್ವೀಕರಿಸಲಾಗುವುದು.

ಹನೂರು ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹನೂರಿನ ಪಶು ವೈದ್ಯಕೀಯ ಆಸ್ಪತ್ರೆ ಸಭಾಂಗಣದಲ್ಲಿ, ಕೊಳ್ಳೇಗಾಲ (ಎಸ್.ಸಿ) ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೊಳ್ಳೇಗಾಲದ ತಾಲೂಕು ಆಡಳಿತ ಸೌಧದ ಮೊದಲನೆ ಮಹಡಿಯಲ್ಲಿರುವ ನ್ಯಾಯಾಲಯ ಸಭಾಂಗಣದ ಕೊಠಡಿ ಸಂಖ್ಯೆ 1ರ ಉಪವಿಭಾಗಾಧಿಕಾರಿಗಳ ಕಚೇರಿಯಲ್ಲಿ, ಚಾಮರಾಜನಗರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಚಾಮರಾಜನಗರ ತಾಲೂಕು ಆಡಳಿತ ಸೌಧದಲ್ಲಿರುವ ನ್ಯಾಯಾಲಯ ಸಭಾಂಗಣದಲ್ಲಿ, ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಗುಂಡ್ಲುಪೇಟೆ ತಾಲೂಕು ಕಚೇರಿಯ ನೆಲ ಮಹಡಿಯಲ್ಲಿರುವ ಸಭಾಭವನದಲ್ಲಿ ನಾಮಪತ್ರಗಳನ್ನು ಸ್ವೀಕರಿಸಲಾಗುವುದು.

ಹನೂರು ವಿಧಾನಸಭಾ ಕ್ಷೇತ್ರಕ್ಕೆ ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕ ಕೆ. ಮಧುಸೂದನ್ (ಮೊ.ಸಂಖ್ಯೆ 8277930760) ಚುನಾವಣಾಧಿಕಾರಿಯಾಗಿದ್ದಾರೆ. ಹನೂರು ತಾಲೂಕಿನ ತಹಶೀಲ್ದಾರ್ ವೈ.ಕೆ. ಗುರುಪ್ರಸಾದ್ (ಮೊ.ಸಂಖ್ಯೆ 9480950853) ಸಹಾಯಕ ಚುನಾವಣಾಧಿಕಾರಿಯಾಗಿದ್ದಾರೆ.

ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರಕ್ಕೆ (ಎಸ್.ಸಿ) ಉಪವಿಭಾಗಾಧಿಕಾರಿ ಗೀತಾ ಹುಡೇದ (ಮೊ.ಸಂಖ್ಯೆ 9663324288) ಚುನಾವಣಾಧಿಕಾರಿಯಾಗಿದ್ದಾರೆ. ಕೊಳ್ಳೇಗಾಲ ತಾಲೂಕು ತಹಶೀಲ್ದಾರ್ ಮಂಜುಳಾ. ಎಂ (ಮೊ.ಸಂಖ್ಯೆ 7892979474) ಸಹಾಯಕ ಚುನಾವಣಾಧಿಕಾರಿಯಾಗಿದ್ದಾರೆ.

ಚಾಮರಾಜನಗರ ವಿಧಾನಸಭಾ ಕ್ಷೇತ್ರಕ್ಕೆ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರಾದ ಯೋಗಾನಂದ (ಮೊ.ಸಂಖ್ಯೆ 8971674146) ಚುನಾವಣಾಧಿಕಾರಿಯಾಗಿದ್ದಾರೆ. ಚಾಮರಾಜನಗರ ತಾಲೂಕು ತಹಶೀಲ್ದಾರ್ ಬಸವರಾಜು ಐ.ಈ (ಮೊ.ಸಂಖ್ಯೆ 8105204059) ಸಹಾಯಕ ಚುನಾವಣಾಧಿಕಾರಿಯಾಗಿದ್ದಾರೆ.

ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಮಲ್ಲಿಕಾರ್ಜುನ .ಬಿ (ಮೊ.ಸಂಖ್ಯೆ 8310291951) ಚುನಾವಣಾಧಿಕಾರಿಯಾಗಿದ್ದಾರೆ. ಗುಂಡ್ಲುಪೇಟೆ ತಾಲೂಕು ತಹಶೀಲ್ದಾರ್ ಮಲ್ಲಿಕಾರ್ಜುನ್ (ಮೊ.ಸಂಖ್ಯೆ 9902993223) ಸಹಾಯಕ ಚುನಾವಣಾಧಿಕಾರಿಯಾಗಿದ್ದಾರೆ.

ಏ.14, ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆ



ಚಾಮರಾಜನಗರ, ಏ.11– ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ 132ನೇ ಜನ್ಮ ದಿನವನ್ನು ಏ.14 ರಂದು ಬೆಳಿಗ್ಗೆ 10.30 ಗಂಟೆಗೆ ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ನಗರದಲ್ಲಿ ಸರಳವಾಗಿ ಆಚರಿಸಲಾಗುವುದು. ಅಂದು ಬೆಳಗ್ಗೆ 10.30 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಗುವುದು. ಬಳಿಕ ಜಿಲ್ಲಾಡಳಿತ ಭವನದಲ್ಲಿರುವ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿ ಸರಳವಾಗಿ ಕಾರ್ಯಕ್ರಮ ನಡೆಯಲಿದೆ. ಈ ಕಾರ್ಯಕ್ರಮಕ್ಕೆ ಜಿಲ್ಲೆಯ ವಿವಿಧ ಸಂಘಟನೆಗಳ ಮುಖಂಡರು, ಸಾರ್ವಜನಿಕರು, ಅಧಿಕಾರಿಗಳು ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಸ್ವಾಭಿಮಾನ, ಸಂಸ್ಕಾರ ತುಂಬಿರುವ ಚಾ.ನಗರವನ್ನೂ ಮಾದರಿ ಜಿಲ್ಲೆಯಾಗಿ ಮಾಡುವೆ

- ಮಹದೇಶ್ವರ ಸ್ವಾಮಿ ಆಶೀರ್ವಾದ ಪಡೆದು ಕೆಲಸ ಮಾಡುವೆ
- ಜಿಲ್ಲೆಯ ಎಲ್ಲಾ ಕೆರೆಗಳಿಗೆ ಶೀಘ್ರ ನೀರು ತುಂಬಿಸುವೆ
- ಕೇಂದ್ರದ ಯೋಜನೆಗಳನ್ನೂ ಸದ್ಬಳಕೆ ಮಾಡಿಕೊಳ್ಳಿ

ಬಿಜೆಪಿ ರೈತ ಮೋರ್ಚಾ ಸಮಾವೇಶದಲ್ಲಿ ಸಚಿವ ಸೋಮಣ್ಣ



ಚಾಮರಾಜನಗರ, ಏ.11– ಚಾಮರಾಜನಗರ ಜಿಲ್ಲೆ ಅಭಿವೃದ್ಧಿಯಲ್ಲಿ ಹಿಂದುಳಿದಿರಬಹುದು. ಆದರೆ ಸ್ವಾಭಿಮಾನ, ಸಂಸ್ಕಾರದಲ್ಲಿ ಹಿಂದೆ ಬಿದ್ದಿಲ್ಲ. ಮಹದೇಶ್ವರ ಸ್ವಾಮಿ ಆಶೀರ್ವಾದ ಪಡೆದು ಜಿಲ್ಲೆಯನ್ನು ಮಾದರಿ ಜಿಲ್ಲೆಯನ್ನಾಗಿ ಮಾಡುವುದೇ ನನ್ನ ಗುರಿ ಎಂದು ವಸತಿ ಮತ್ತು ಮೂಲ ಸೌಕರ್ಯಗಳ ಸಚಿವ ವಿ. ಸೋಮಣ್ಣ ತಿಳಿಸಿದ್ದಾರೆ.

ನಗರದ ಸೂರ್ಯೋದಯ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಬಿಜೆಪಿ ರೈತ ಮೋರ್ಚಾದ ಸಮಾವೇಶದಲ್ಲಿ ಮಾತನಾಡಿದ ಅವರು, ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೊಳಿಸುವುದು ನಮ್ಮ ಕರ್ತವ್ಯವಾಗಿದೆ. ಜಿಲ್ಲೆಯ ಎಲ್ಲಾ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯ ಡಿಪಿಆರ್ ಎಸ್ ಆಗಿದ್ದು, ಶೀಘ್ರದಲ್ಲೇ ಕೆರೆಗಳ ಭರ್ತಿ ಮಾಡಲಾಗುವುದು ಎಂದರು.

ರೈತರು ರೈತರಾಗಿಯೇ ಇರಬಾರದು. ಬದಲಿಗೆ ಉದ್ಯಮಿಗಳಾಗಬೇಕು, ಮಾಲೀಕರಾಗಬೇಕೆಂಬ ಚಿಂತನೆಗಳಿಂದ ಪ್ರಧಾನಿ ನರೇಂದ್ರ ಮೋದಿಯವರ ಸರ್ಕಾರ ಸಾಕಷ್ಟು ಯೋಜನೆಗಳನ್ನು ಜಾರಿಗೊಳಿಸಿದ್ದು, ಇವುಗಳ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸರ್ಕಾರದ ಯೋಜನೆ ತಿಳಿಸಿ: ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯೋಜನೆಗಳನ್ನು ಮಹಿಳಾ ಮೋರ್ಚಾ ಸೇರಿದಂತೆ ಪಕ್ಷದ ವಿವಿಧ ಮೋರ್ಚಾಗಳ ಪದಾಧಿಕಾರಿಗಳು ಜನರಿಗೆ ತಿಳಿಸುವ ಕೆಲಸ ಮಾಡಬೇಕು. ಜೊತೆಗೆ 26 ವರ್ಷಗಳಲ್ಲಿ ಜಿಲ್ಲೆಯಲ್ಲಿ ಆಗದಿರುವ ಅಭಿವೃದ್ಧಿ ಕೆಲಸಗಳು ಮುಂದಿನ 5 ವರ್ಷದಲ್ಲಿ ಮಾಡಲು ಎಲ್ಲರೂ ಬಿಜೆಪಿ ಬೆಂಬಲಿಸಲೆಂದು ಮತದಾರರಲ್ಲಿ ಅರಿವು ಮೂಡಿಸಬೇಕು ಎಂದು ಸಚಿವರು ತಿಳಿಸಿದರು.

ಬಿಜೆಪಿ ಕಾರ್ಯಕರ್ತರು, ಮುಖಂಡರು ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಜಿಲ್ಲೆಯ ನಾಲ್ಕು ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವಿಗೆ ಶ್ರಮಿಸಬೇಕು ಎಂದು ಕರೆ ನೀಡಿದರು.

ಜಿಲ್ಲಾ ಬಿಜೆಪಿ ಚುನಾವಣಾ ಉಸ್ತುವಾರಿ ಕೋಟೆ ಎಂ. ಶಿವಣ್ಣ ಮಾತನಾಡಿ, ನಾನು ಕಳೆದ ಒಂದೂವರೆ ತಿಂಗಳಿನಿಂದ ಜಿಲ್ಲೆಯ ನಾಲ್ಕು ಕ್ಷೇತ್ರಗಳಿಗೆ ಭೇಟಿ ಮಾಡಿದ್ದೇನೆ. ಎಲ್ಲೆಡೆ ಬಿಜೆಪಿ ಪರವಾಗಿ ಅಲೆಯಿದ್ದು, ಈ ಬಾರಿ ಜಿಲ್ಲೆಯ ನಾಲ್ಕು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಇಂದು ನಡೆಯುತ್ತಿರುವ ರೈತ ಸಮಾವೇಶದಲ್ಲಿ ನಿರೀಕ್ಷೆಗೂ ಮೀರಿ ಜನರು ಬಂದಿರುವುದು ಪಕ್ಷಕ್ಕೆ ಮತ್ತಷ್ಟು ಬಲ ತುಂಬಿದಂತಾಗಿದೆ. ರೈತರ ಅಭಿವೃದ್ಧಿಗಾಗಿ ಕೇಂದ್ರದ ನರೇಂದ್ರ ಮೋದಿ ಸರ್ಕಾರ, ರಾಜ್ಯದಲ್ಲಿ ರೈತ ನಾಯಕ ಬಿ.ಎಸ್. ಯಡಿಯೂರಪ್ಪ ಅವರ ಸರ್ಕಾರದ ಅವಧಿ ಹಾಗೂ ಪ್ರಸ್ತುತ ಬೊಮ್ಮಾಯಿ ಸರ್ಕಾರ ಸಾಕಷ್ಟು ಯೋಜನೆಗಳನ್ನು ಜಾರಿಗೊಳಿಸಿದೆ. ಇವುಗಳ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯಸಭಾ ಸದಸ್ಯ ವೀರಣ್ಣ, ರಾಜ್ಯ ಪ್ರಧಾನ ಕಾರ್ಯದರ್ಶಿ ಶಿವಪ್ರಸಾದ್, ಮೈಸೂರು ರಾಜೇಂದ್ರ, ಬಿಜೆಪಿ ಜಿಲ್ಲಾಧ್ಯಕ್ಷ ಜಿ. ನಾರಾಯಣ್ ಪ್ರಸಾದ್, ಮಾಜಿ ಶಾಸಕ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ, ಕೇಂದ್ರ ಬರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ, ಜಿಪಂ ಮಾಜಿ ಅಧ್ಯಕ್ಷೆ ಜಿ. ನಾಗಶ್ರೀ ಪ್ರತಾಪ್, ನಗರಸಭೆ ಅಧ್ಯಕ್ಷೆ ಆಶಾ ನಟರಾಜು, ಕಾಡಾ ಅಧ್ಯಕ್ಷ ನಿಜಗುಣ ರಾಜು, ಸುಂದರ್, ಬಸವಣ್ಣ, ಡಾ.ಎ.ಆರ್. ಬಾಬು, ಮಂಗಲ ಶಿವಕುಮಾರ್, ಹನುಮಂತ ಶೆಟ್ಟಿ, ಆಲೂರು ನಟರಾಜು, ಅರಕಲವಾಡಿ ನಾಗೇಂದ್ರ, ಯು.ಎಂ. ಪ್ರಭುಸ್ವಾಮಿ, ಮಲ್ಲಿಕಾರ್ಜುನ್ ಇತರರಿದ್ದರು.

ಮೈಸೂರು ಮಿತ್ರ ಬುಧವಾರ 12 ಏಪ್ರಿಲ್ 2023

ಎರಡು ಕ್ಷೇತ್ರದಲ್ಲಿ ಸ್ಪರ್ಧಿಸುವ ಅವಕಾಶ ಖುಷಿ ತಂದಿದೆ



ಬೆಂಗಳೂರು, ಏ.11– ರಾಷ್ಟ್ರೀಯ ಪಕ್ಷ ಎರಡು ಕ್ಷೇತ್ರದಲ್ಲಿ ಸ್ಪರ್ಧಿಸಲು ನನಗೆ ಅವಕಾಶ ನೀಡಿರುವುದರಿಂದ ತುಂಬಾ ಖುಷಿಯಾಗಿದೆ. ಎಲ್ಲಾ ಚಾಮುಂಡೇಶ್ವರಿಯ ಆಶೀರ್ವಾದ ಎಂದು ವಿ.ಸೋಮಣ್ಣ ಹೇಳಿದ್ದಾರೆ.

ವರುಣಾ ಹಾಗೂ ಚಾಮರಾಜನಗರ ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಅವಕಾಶ ಸಿಕ್ಕಿರುವ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಅವರು, ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದಿಂದ ಟಿಕೆಟ್ ಮಿಸ್ ಆಗಿದ್ದಕ್ಕೆ ಬೇಸರ ಇಲ್ಲ. ಹೈಕಮಾಂಡ್ ಆದೇಶವನ್ನು ಪಾಲಿಸುತ್ತೇನೆ. ಜನ, ಕಾರ್ಯಕರ್ತರ ಆಶೀರ್ವಾದ ನನ್ನ ಮೇಲಿದೆ. ಕ್ಷೇತ್ರದಲ್ಲಿ 50 ವರ್ಷಕ್ಕೆ ಬೇಕಾಗುವಷ್ಟು ಕೆಲಸ ಮಾಡಿದ್ದೀನಿ. ಬಿಜೆಪಿ ಪ್ರಮುಖರು ನನ್ನ ಕೈಬಿಟ್ಟಿಲ್ಲ ಎಲ್ಲರೂ ನನ್ನ ಸರಳತೆಯನ್ನು ಇಷ್ಟಪಟ್ಟಿದ್ದಾರೆ. ಜನರಿಗೋಸ್ಕರ ತುಂಬಾ ಕೆಲಸ ಮಾಡಿದ್ದೀನಿ, ಮಾಡುತ್ತಿದ್ದೇನೆ ಎಂದು ತಿಳಿಸಿದ್ದಾರೆ.

ಸೋಮಣ್ಣ ಅವರಿಗೆ ಚಾಮರಾಜನಗರ, ವರುಣಾ ವಿಧಾನಸಭಾ ಕ್ಷೇತ್ರದ ಟಿಕೆಟ್ ಘೋಷಣೆ ಆಗುತ್ತಿದ್ದಂತೆ ಗೋವಿಂದರಾಜನಗರದ ಕಾರ್ಯಕರ್ತರು ಹಾಗೂ ಬೆಂಬಲಿಗರು ಅವರ ಮನೆ ಮುಂದೆ ಜಮಾಯಿಸಿ, ಈ ಕ್ಷೇತ್ರವನ್ನು ಬಿಟ್ಟು ಹೋಗಬೇಡಿ ಎಂದು ಕಣ್ಣೀರಿಟ್ಟು ಗೋಗರೆದರು. ಸೋಮಣ್ಣ ಅವರನ್ನು ಸಮಾಧಾನಪಡಿಸಲು ಪ್ರಯತ್ನಿಸಿದರು.

ಸಿಂಹ ಅಭಿನಂದನೆ: ಚಾಮರಾಜನಗರ ಹಾಗೂ ವರುಣಾ ಕ್ಷೇತ್ರಗಳಲ್ಲಿ ವಿ.ಸೋಮಣ್ಣ ಅವರನ್ನು ಕಣಕ್ಕಿಳಿಸಿರುವ ಹಿನ್ನೆಲೆಯಲ್ಲಿ ಸಂಸದ ಪ್ರತಾಪ್ ಸಿಂಹ, ತಮ್ಮ ಟ್ವಿಟರ್ ಪ್ರೊಫೈಲ್‌ಗೆ ಸೋಮಣ್ಣ ಅವರ ಫೋಟೋ ಹಾಕುವ ಮೂಲಕ ವಿಶೇಷ ಅಭಿನಂದನೆ ತಿಳಿಸಿದ್ದಾರೆ.

ಸೇಫ್ ಗೇಮ್ ಆಡುತ್ತಿದ್ದ ಅಶೋಕ್‌ಗೆ 'ಅಗ್ನಿ ಪರೀಕ್ಷೆ'

ಬೆಂಗಳೂರು: ವಿಧಾನಸಭಾ ಚುನಾವಣೆಯಲ್ಲಿ ಕನಕಪುರ ವಿಧಾನಸಭಾ ಕ್ಷೇತ್ರ ರಣರೋಚಕ ಕ್ಷೇತ್ರವಾಗಿ ಬದಲಾಗಿದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ವಿರುದ್ಧ ಬಿಜೆಪಿ ಹೈಕಮಾಂಡ್ ಕಂದಾಯ ಸಚಿವ ಆರ್.ಅಶೋಕ್ ಅವರನ್ನ ಕಣಕ್ಕಿಳಿಸಿದೆ. ಆರ್. ಅಶೋಕ್ ಅವರು ಪದ್ಮನಾಭನಗರದ ಜೊತೆಗೆ ಕನಕಪುರದಿಂದಲೂ ಸ್ಪರ್ಧಿಸಲು ಬಿಜೆಪಿ ಟಿಕೆಟ್ ಘೋಷಣೆ ಮಾಡಿದೆ. ಪದ್ಮನಾಭನಗರದಲ್ಲಿ ಆರ್.ಅಶೋಕ್ ಹೊಂದಾಣಿಕೆಯ ರಾಜಕೀಯ ಮಾಡುತ್ತಾರೆ ಅನ್ನೋ ಆರೋಪವಿತ್ತು. ಇದುವರೆಗೂ ಸೇಫ್ ಗೇಮ್ ಆಡುತ್ತಿದ್ದ ಆರ್.ಅಶೋಕ್ ಅವರಿಗೆ ಬಿಜೆಪಿ ಹೈಕಮಾಂಡ್ ಭರ್ಜರಿ ಟಾಸ್ಕ್ ನೀಡಿದೆ. ಈ ಬಾರಿ ಶತಾಯಗತಾಯ ಕನಕಪುರ ಗೆಲ್ಲಲು ಆರ್. ಅಶೋಕ್ ಅಖಾಡಕ್ಕೆ ಇಳಿಯಬೇಕಿದೆ.

ಒಕ್ಕಲಿಗ ಸಮುದಾಯದ ನಾಯಕನಿಗೆ ಅದೇ ಸಮುದಾಯದ ಮತಗಳು ನಿರ್ಣಾಯಕ ಆಗಿರುವ ಕ್ಷೇತ್ರದಲ್ಲೇ ಟಿಕೆಟ್ ನೀಡಲಾಗಿದೆ. ಯಾರೂ ನಿರೀಕ್ಷೆ ಮಾಡದ ಕನಕಪುರ ಕ್ಷೇತ್ರವನ್ನು ಆರ್. ಅಶೋಕ್‌ಗೆ ಬಿಜೆಪಿ ಹೈಕಮಾಂಡ್ ನೀಡಿದೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಕೆಪಿಸಿಸಿ ಸಾರಥಿ ಡಿ.ಕೆ ಶಿವಕುಮಾರ್‌ಗೆ ಸಚಿವ ಆರ್. ಅಶೋಕ್ ಎದುರಾಳಿಯಾಗಿದ್ದಾರೆ.

ಒಂದನೇ ಪುಟದಿಂದ

189 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ

ಶ್ರೀರಂಗಪಟ್ಟಣ ಇಂಡುವಾಳು ಸಚ್ಚಿದಾನಂದ, ನಾಗಮಂಗಲ ಶ್ರೀಮತಿ ಸುಧಾ ಶಿವರಾಂ, ಕೆ.ಆರ್.ಪೇಟೆ ಡಾ. ಕೆ.ಸಿ.ನಾರಾಯಣಗೌಡ, ಹಾಸನದ ಬೇಲೂರಿಂದ ಹುಲ್ಲಹಳ್ಳಿ ಕೆ.ಸುರೇಶ್, ಹಾಸನದಿಂದ ಜೆ.ಪ್ರೀತಂಗೌಡ, ಹೊಳೆನರಸೀಪುರದಿಂದ ದೇವರಾಜೇಗೌಡ, ಅರಕಲಗೂಡು ಯೋಗಾ ರಮೇಶ್ ಮತ್ತು ಸಕಲೇಶಪುರದಿಂದ ಸಿಮೆಂಟ್ ಮಂಜುಗೆ ಬಿಜೆಪಿ ಟಿಕೆಟ್ ನೀಡಲಾಗಿದೆ. ಆದರೆ ಮೈಸೂರು ಜಿಲ್ಲೆಯ ಕೆ.ಆರ್., ಹೆಚ್.ಡಿ.ಕೋಟೆ ಕ್ಷೇತ್ರದ ಅಭ್ಯರ್ಥಿ ಪ್ರಕಟಿಸಿಲ್ಲ.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವರ ವಿರುದ್ಧ ಪ್ರಬಲ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಮೂಲಕ ಹೊಸ ಪ್ರಯೋಗ ಮಾಡಿದೆ. ಸಚಿವ ವಿ.ಸೋಮಣ್ಣ ಅವರು ಪ್ರತಿನಿಧಿಸುವ ಗೋವಿಂದರಾಜನಗರ ಕ್ಷೇತ್ರದ ಬದಲು ಚಾಮರಾಜನಗರ ಹಾಗೂ ಸಿದ್ದರಾಮಯ್ಯ ಸ್ಪರ್ಧಿಸುವ ವರುಣಾದಿಂದ ಕಣಕ್ಕಿಳಿಸಿದೆ. ಅದೇ ರೀತಿ ಕಂದಾಯ ಸಚಿವ ಆರ್. ಅಶೋಕ್ ಅವರನ್ನು ಸ್ವಕ್ಷೇತ್ರ ಪದ್ಮನಾಭನಗರದ ಜೊತೆಗೆ ಡಿ.ಕೆ.ಶಿವಕುಮಾರ್ ಎದುರಾಳಿಯಾಗಿ ಕನಕಪುರದಲ್ಲೂ ಸ್ಪರ್ಧಿಸುವಂತೆ ಟಾಸ್ಕ್ ನೀಡಿದೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಪುತ್ರ ವಿಜಯೇಂದ್ರ ಅವರಿಗೆ ನಿರೀಕ್ಷೆಯಂತೆ ಶಿಕಾರಿಪುರದಲ್ಲೇ ಅವಕಾಶ ಮಾಡಿಕೊಡಲಾಗಿದೆ. ಗುಜರಾತ್ ಮಾದರಿಯ ಪ್ರಯೋಗಕ್ಕೆ ವರಿಷ್ಠರು ಪ್ರಯತ್ನ ನಡೆಸಿದರೂ ಕೊನೆ ಗಳಿಗೆಯಲ್ಲಿ ಅದನ್ನು ಕೈ ಬಿಟ್ಟಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶಿಗ್ಗಾಂವಿಯಿಂದ ಕಣಕ್ಕಿಳಿಯಲು ಅವಕಾಶ ಮಾಡಿಕೊಟ್ಟಿದ್ದರೆ, ಸಂಪುಟದ ಬಹುತೇಕ ಸಚಿವರಿಗೆ ಅವಕಾಶ ದೊರೆತ್ತಿದ್ದು, ಮೀನುಗಾರಿಕೆ ಸಚಿವ ಅಂಗಾರ ಅವರನ್ನು ಕೈ ಬಿಡಲಾಗಿದೆ.

ವಿಧಾನಸಭಾ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ಅವಕಾಶ ಕಲ್ಪಿಸಿದ್ದು, ಸಚಿವ ಶ್ರೀರಾಮುಲು ಅವರ ಕ್ಷೇತ್ರ ಬದಲಿಸಿದ್ದಾರೆ. ಪುತ್ರನಿಗೆ ಟಿಕೆಟ್ ನೀಡುವಂತೆ ಬೇಡಿಕೆ ಇಟ್ಟಿದ್ದ ಸಚಿವ ಎಂಟಿಬಿ ನಾಗರಾಜ್‌ಗೂ ಅವಕಾಶ ಸಿಕ್ಕಿದೆ. ನಿರೀಕ್ಷೆಯಂತೆ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಹಾಗೂ ಮಾಜಿ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಟಿಕೆಟ್ ವಂಚಿತರಾಗಿದ್ದಾರೆ. ಸುದ್ದಿಗೋಷ್ಠಿಯಲ್ಲಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಪಟ್ಟಿ ಬಿಡುಗಡೆ ಮಾಡಿದ್ದು, ಒಬಿಸಿ 32, ಎಸ್‌ಸಿ 30, ಎಸ್‌ಟಿ 16 ಅಭ್ಯರ್ಥಿಗಳಿಗೆ ಮೊದಲ ಪಟ್ಟಿಯಲ್ಲೇ ಅವಕಾಶ ನೀಡಲಾಗಿದೆ ಎಂದು ತಿಳಿಸಿದ್ದಾರೆ. ಗೋಕಾಕ್‌ನಿಂದ ರಮೇಶ್ ಜಾರಕಿಹೊಳಿ, ಅರಭಾವಿಯಿಂದ ಬಾಲಚಂದ್ರ ಜಾರಕಿಹೊಳಿ, ಕುಡಚಿಯಿಂದ ರಾಜೀವ್, ನಿಪ್ಪಾಣಿಯಿಂದ ಶಶಿಕಲಾ ಜೊಲ್ಲೆ, ವಿಜಯಪುರದಿಂದ ಬಸನಗೌಡ ಪಾಟೀಲ ಯತ್ನಾಳ್ ಅವರಿಗೆ ನಿರೀಕ್ಷೆಯಂತೆ ಸ್ಪರ್ಧೆಗೆ ಅನುವು ಮಾಡಿಕೊಡಲಾಗಿದೆ. ಪಟ್ಟಿ ಬಿಡುಗಡೆಗೂ ಮುನ್ನ ಮಾತನಾಡಿದ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯಕರ್ತರ ಅಭಿಪ್ರಾಯ ಸಂಗ್ರಹಿಸಿ ಅಭ್ಯರ್ಥಿಗಳ ಪಟ್ಟಿ ತಯಾರಿಸಲಾಗಿದೆ. ಸುಮಾರು 25 ಸಾವಿರ ಕಾರ್ಯಕರ್ತರ ಅಭಿಪ್ರಾಯ ಸಂಗ್ರಹಿಸಲಾಗಿದೆ ಎಂದು ತಿಳಿಸಿದರು. ಪ್ರಸಕ್ತ ವಿಧಾನಸಭಾ ಚುನಾವಣೆಯ 224 ಕ್ಷೇತ್ರಗಳ ಪೈಕಿ ಪ್ರತಿ ಪಕ್ಷಗಳಾದ ಕಾಂಗ್ರೆಸ್ ಎರಡು ಹಂತದಲ್ಲಿ 166 ಕ್ಷೇತ್ರಗಳ ಅಭ್ಯರ್ಥಿಗಳನ್ನು ಹಾಗೂ ಜೆಡಿಎಸ್ ಮೊದಲ ಪಟ್ಟಿಯಲ್ಲಿ 93 ಕ್ಷೇತ್ರಗಳ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿವೆ.

ಡಿ.ಕೆ.ಶಿವಕುಮಾರ್ ವಿರುದ್ಧ ಅಶೋಕ್

ಅವರನ್ನು ಚಾಮರಾಜನಗರಕ್ಕೆ ಎತ್ತಂಗಡಿ ಮಾಡಲಾಗಿದೆ. ಇದರ ಜೊತೆಗೆ ಮಾಜಿ ಮುಖ್ಯಮಂತ್ರಿ ಹಾಗೂ ಹಾಲಿ ವಿಧಾನಸಭಾ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ ವಿರುದ್ಧ ವರುಣಾದಿಂದ ಸ್ಪರ್ಧಿಸಲು ಟಾಸ್ಕ್ ನೀಡಲಾಗಿದೆ. ವರುಣಾ ಕ್ಷೇತ್ರದಲ್ಲಿ ವೀರಶೈವ ಲಿಂಗಾಯತ ಸಮುದಾಯ ಅತೀ ದೊಡ್ಡ ಮತ ಬ್ಯಾಂಕ್ ಆಗಿದ್ದು, ಅದನ್ನು ಸಾರಾಸಗಟಾಗಿ ಗಿಟ್ಟಿಸಿಕೊಂಡು ಸಿದ್ದರಾಮಯ್ಯರಿಗೆ ಸೆಡ್ಡು ಹೊಡೆಯುವ ತಂತ್ರಗಾರಿಕೆ ಬಿಜೆಪಿ ಹೈಕಮಾಂಡ್‌ದಾಗಿದೆ. ಇದಕ್ಕಾಗಿ ಈ ಸಮುದಾಯದ ಹಿರಿಯ ನಾಯಕ ವಿ.ಸೋಮಣ್ಣ ಅವರನ್ನು ಇಲ್ಲಿಂದ ಸ್ಪರ್ಧೆಗಿಳಿಸುತ್ತಿದೆ ಎಂದು ಹೇಳಲಾಗುತ್ತಿದೆ.

ಈ ಇಬ್ಬರು ನಾಯಕರಿಗೆ ಮಾತ್ರ ಎರಡು ಕಡೆ ಸ್ಪರ್ಧಿಸುವ ಸವಾಲು ಕಲ್ಪಿಸಲಾಗಿದೆ. ಇದರೊಂದಿಗೆ ಈ ನಾಯಕರ ಸಾಮರ್ಥ್ಯ ಪರೀಕ್ಷೆಗೆ ಹೈಕಮಾಂಡ್ ಮುಂದಾಗಿರುವುದು ರಾಜ್ಯ ಬಿಜೆಪಿ ವಲಯದಲ್ಲಿ ಅಚ್ಚರಿ ಮೂಡಿಸಿದೆ.

ಜೋಶಿ ಆಟಕ್ಕೆ ಶೆಟ್ಟರ್ ಗಲಿಬಿಲಿ

ಗೋಶಾಲೆಗಾದರೂ ಬಿಡಬಹುದಿತ್ತು, ಆದರೆ ನೇರ ಕಸಾಯಿಖಾನೆಗೇ ಕಳಿಸುತ್ತಿರುವುದು ದುರಂತ! ಎಂದು ಕಾಂಗ್ರೆಸ್ ಕಿಚಾಯಿಸಿದೆ. ಸಂತೋಷ್ ಆಟಕ್ಕೆ ಯಡಿಯೂರಪ್ಪ ಬಲಿ. ಪ್ರಹ್ಲಾದ್ ಜೋಶಿ ಆಟಕ್ಕೆ ಜಗದೀಶ್ ಶೆಟ್ಟರ್ ಬಲಿ. ನಾಗಪುರದ ಕರುಳುಬಳ್ಳಿಯ ಸಂಬಂಧವನ್ನೇ ಬಳಸಿ ಬಿಜೆಪಿಯಲ್ಲಿ ಪ್ರಾಬಲ್ಯ ಸಾಧಿಸಿರುವ ಪ್ರಹ್ಲಾದ್ ಜೋಶಿ ಲಿಂಗಾಯತ ನಾಯಕರನ್ನು ಹೊಂಡಕ್ಕೆ ಕೆಡವುದರಲ್ಲಿ ಯಶಸ್ವಿಯಾಗಿದ್ದಾರೆ. ಮಾಜಿ ಸಿಎಂ ಒಬ್ಬರಿಗೆ ಟಿಕೆಟ್ ನಿರಾಕರಿಸುವಂತಹ ಅವಮಾನ ಇನ್ನೊಂದಿಲ್ಲ' ಎಂದು ಕಾಂಗ್ರೆಸ್ ಕುಟುಕಿದೆ. ಪಕ್ಷದ ಸಂಘಟನೆಯಲ್ಲಿ ತೊಡಗಿಕೊಳ್ಳುವ ಉದ್ದೇಶಕ್ಕಾಗಿ ಸ್ವ–ಇಚ್ಛೆಯಿಂದ ಚುನಾವಣಾ ರಾಜಕೀಯದಿಂದ ನಿವೃತ್ತಿ ಆಗುತ್ತಿರುವೆ' ಎಂದು ಮಂಗಳವಾರ ಶಿವಮೊಗ್ಗದಲ್ಲಿ ಸುದ್ದಿಗೋಷ್ಠಿಯಲ್ಲಿ ಶಾಸಕ ಕೆ.ಎಸ್.ಈಶ್ವರಪ್ಪ ಸ್ಪಷ್ಟಪಡಿಸಿದರು. ಆ ಬಗ್ಗೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ಪತ್ರ ಬರೆದಿರುವೆ ಎಂದು ತಿಳಿಸಿದ್ದಾರೆ. ಇತ್ತ ಮಾಜಿ ಸಿಎಂ ಹಾಗೂ ಹುಬ್ಬಳ್ಳಿ ಕೇಂದ್ರ ಬಿಜೆಪಿ ಶಾಸಕ ಜಗದೀಶ್ ಶೆಟ್ಟರ್ ಅವರಿಗೆ ಹೈಕಮಾಂಡ್ ಟಿಕೆಟ್ ನಿರಾಕರಿಸಿರುವ ಸುದ್ದಿ ಹಿನ್ನೆಲೆಯಲ್ಲಿ ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.


ರಾಜಕೀಯ ನಿವೃತ್ತಿ ಘೋಷಣೆ

ಎಂದು ತಿಳಿಸಿದ್ದಾರೆ. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಧಿಕಾರದಿಂದ ಕೆಳಗಿಳಿದ ಸ್ವಲ್ಪ ದಿನದಲ್ಲೇ ಚುನಾವಣಾ ರಾಜಕೀಯದಿಂದ ದೂರ ಸರಿಯುವುದಾಗಿ ಘೋಷಣೆ ಮಾಡಿದ್ದರು. ವಿಧಾನಸಭೆ ಚುನಾವಣೆ ನಾಮಪತ್ರ ಸಲ್ಲಿಕೆಗೆ ಒಂದೆರಡು ದಿನವಿರುವ ಸಂದರ್ಭದಲ್ಲೇ ಈಶ್ವರಪ್ಪ ಇಂತಹ ಘೋಷಣೆ ಮಾಡಿದ್ದಾರೆ. ಇದಕ್ಕೂ ಮೊದಲು ಮಾಯಕೊಂಡದ ಎಸ್.ಎ. ರವೀಂದ್ರನಾಥ್, ಬೈಂದೂರಿನ ಹಾಲಾಡಿ ಶ್ರೀನಿವಾಸ ಶೆಟ್ಟಿ ಚುನಾವಣಾ ರಾಜಕೀಯಕ್ಕೆ ನಿವೃತ್ತಿ ಘೋಷಿಸಿದ್ದರು. ಮುಂದಿನ ಒಂದೆರಡು ದಿನಗಳಲ್ಲಿ ಇಂತಹವರ ಸಂಖ್ಯೆ ಬಿಜೆಪಿಯಲ್ಲಿ ಮತ್ತಷ್ಟು ಹೆಚ್ಚಲಿದೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ. ವಿಧಾನಸಭಾ ಚುನಾವಣಾ ಕಣಕ್ಕೆ ಇಳಿಯಲೇ ಬೇಕೆಂದು ಹೋರಾಟ ನಡೆಸಿದ್ದ ಈಶ್ವರಪ್ಪ ಈಗಾಗಲೇ ಶಿವಮೊಗ್ಗ ವಿಧಾನಸಭಾ ಕ್ಷೇತ್ರದಲ್ಲಿ ಒಂದು ಸುತ್ತಿನ ಪ್ರಚಾರ ಮುಗಿಸಿದ್ದರು. ಬೊಮ್ಮಾಯಿ ಸಂಪುಟದಲ್ಲಿ ಮತ್ತೆ ಮಂತ್ರಿಯಾಗಲೇಬೇಕೆಂದು ಅವರ ವಿರುದ್ಧ ಸೆಟೆದು ನಿಂತಿದ್ದಲ್ಲದೆ, ಮಂತ್ರಿ ಮಾಡದಿದ್ದರೆ, ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನದಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಎಚ್ಚರಿಕೆ ನೀಡಿದ್ದರು. ಇಷ್ಟೆಲ್ಲ ರಾಜಕೀಯ ಹುರುಪಿನಿಂದ ಇದ್ದ ಈಶ್ವರಪ್ಪ ಏಕಾಏಕಿ ಇಂತಹ ನಿರ್ಧಾರ ಕೈಗೊಂಡಿರುವುದು ಪಕ್ಷದ ವೇದಿಕೆಯಲ್ಲಿ ಭಾರೀ ಚರ್ಚೆಗೆ ಗ್ರಾಸವಾಗಿದೆ.

ಮೈಸೂರು ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರ ತಪಾಸಣೆ

● ಹೊರ ಜಿಲ್ಲೆ, ಅಂತರರಾಜ್ಯಗಳಿಂದ ಬರುವ ಸಾರಿಗೆ ಬಸ್ ಪ್ರಯಾಣಿಕರ ಮೇಲೆ ತೀವ್ರ ನಿಗಾ ● ಮೈಸೂರಿನ ಕೆಎಸ್‌ಆರ್‌ಟಿಸಿ ಸಬರ್ಬನ್ ಬಸ್ ನಿಲ್ದಾಣ ಪ್ರವೇಶದ ಬಳಿ ಚೆಕ್‌ಪೋಸ್ಟ್ ● ಜಿಎಸ್‌ಟಿ ಬಿಲ್ ಇಲ್ಲದ ಕಾಶ್ಮೀರಿ ಶಾಲುಗಳು, ಡ್ರೆಸ್ ಮೆಟೀರಿಯಲ್ ವಶಪಡಿಸಿಕೊಂಡ ಸ್ಥಿರ ಕಣ್ಗಾವಲು ತಂಡ (ಎಸ್‌ಎಸ್‌ಟಿ)ದ ಅಧಿಕಾರಿಗಳು ● ಇನ್ಸ್‌ಪೆಕ್ಟರ್ ಪಿ.ಪಿ. ಸಂತೋಷ್ ನೇತೃತ್ವದ ಲಷ್ಕರ್ ಠಾಣೆ ಪೊಲೀಸರಿಂದ ಚೆಕ್‌ಪೋಸ್ಟ್ ಸಿಬ್ಬಂದಿಗೆ ನೆರವು





ಮೈಸೂರಿನ ಕೆಎಸ್‌ಆರ್‌ಟಿಸಿ ಸಬರ್ಬನ್ ಬಸ್ ನಿಲ್ದಾಣದ ಚೆಕ್‌ಪೋಸ್ಟ್‌ನಲ್ಲಿ ಸ್ಟ್ಯಾಟಿಕ್ ಸರ್ವೇಲೆನ್ಸ್ ತಂಡದ ಅಧಿಕಾರಿ, ಮೈಸೂರು ಮಹಾನಗರ ಪಾಲಿಕೆ ಜೂನಿಯರ್ ಇಂಜಿನಿಯರ್ ಕೆ. ಮಣಿ, ಲಷ್ಕರ್ ಠಾಣೆ ಇನ್ಸ್‌ಪೆಕ್ಟರ್ ಪಿ.ಪಿ. ಸಂತೋಷ್ ಪ್ರಯಾಣಿಕರ ಲಗೇಜ್‌ಗಳನ್ನು ಪರಿಶೀಲಿಸುತ್ತಿರುವುದು. ಪೊಲೀಸ್ ಸಿಬ್ಬಂದಿ ಹಾಜರಿದ್ದಾರೆ.

ಮೈಸೂರು, ಏ. 11 (ಆರ್‌ಕೆ)– 2023ರ ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ ಮಾದರಿ ನೀತಿ ಸಂಹಿತೆ ಜಾರಿಗೆ ಬಂದ ನಂತರ ಇದೇ ಮೊದಲ ಬಾರಿ ಮೈಸೂರಿನ ಹೃದಯ ಭಾಗದ ಕೆಎಸ್‌ಆರ್‌ಟಿಸಿ ಗ್ರಾಮಾಂತರ ಬಸ್ ನಿಲ್ದಾಣ (ಸಬರ್ಬನ್ ಬಸ್ ಸ್ಟ್ಯಾಂಡ್) ದಲ್ಲಿ ಚೆಕ್‌ಪೋಸ್ಟ್ ಆರಂಭಿಸಲಾಗಿದೆ.

ಹೊರ ರಾಜ್ಯ, ಅಂತರ ಜಿಲ್ಲೆಗಳಿಂದ ಬರುವ ಸಾರಿಗೆ ಬಸ್‌ಗಳು ಪ್ರವೇಶಿಸುವ ಸ್ಥಳದಲ್ಲಿ ಟೆಂಟ್ ನಿರ್ಮಿಸಿ ಚೆಕ್‌ಪೋಸ್ಟ್ ವ್ಯವಸ್ಥೆ ಮಾಡಲಾಗಿದ್ದು, ಕಂದಾಯ ಇಲಾಖೆ ಹಾಗೂ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳ ನೇತೃತ್ವದಲ್ಲಿ ಸ್ಥಿರ ಕಣ್ಗಾವಲು ತಂಡ (ಸ್ಟ್ಯಾಟಿಕ್ ಸರ್ವೇಲೆನ್ಸ್ ಟೀಂ)ದ ಸಿಬ್ಬಂದಿಯನ್ನು ಮೂರು ಪಾಳಿಯಲ್ಲಿ ಕರ್ತವ್ಯಕ್ಕೆ ನಿಯೋಜಿಸಲಾಗಿದೆ.

ಕೆಎಸ್‌ಆರ್‌ಟಿಸಿ ಸಬರ್ಬನ್ ಬಸ್ ನಿಲ್ದಾಣದ ಪ್ರವೇಶ ದ್ವಾರದಲ್ಲಿ ಇರುವ ಚೆಕ್‌ಪೋಸ್ಟ್ ಅಧಿಕಾರಿಗಳು ಅಲ್ಲಿ ಇಳಿಯುವ ಪ್ರಯಾಣಿಕರ ಲಗೇಜ್‌ಗಳನ್ನು ಪರಿಶೀಲಿಸುವರು. ಕಡೇ ಪ್ರಯಾಣಿಕರ ತಪಾಸಣೆ ಮಾಡಿದ ನಂತರವಷ್ಟೇ ಬಸ್ ಮುಂದಕ್ಕೆ ಸಾಗುವಂತೆ ವ್ಯವಸ್ಥೆ ಮಾಡಲಾಗಿದೆ.

ದಿನದ 24 ಗಂಟೆಯೂ ಮೂರು ಪಾಳಿಯಲ್ಲಿ ಕೆಲಸ ನಿರ್ವಹಿಸಲಿರುವ ಸ್ಟ್ಯಾಟಿಕ್ ಸರ್ವೇಲೆನ್ಸ್ ಟೀಂ ಅಧಿಕಾರಿ, ಸಿಬ್ಬಂದಿ ಬರುವ ಬಸ್‌ಗಳನ್ನು ನಿಲ್ಲಿಸಿ ಇಳಿಯುವ ಪ್ರತಿಯೊಬ್ಬ ಪ್ರಯಾಣಿಕರು ಹಾಗೂ ಅವರ ಲಗೇಜ್‌ಗಳನ್ನು ತಪಾಸಣೆ ಮಾಡುತ್ತಿದ್ದು, ಒಂದು ವೇಳೆ ಸಂಶಯ ಬಂದರೆ ಅಥವಾ ಬಿಲ್‌ಗಳಿಲ್ಲದೆ ಅಧಿಕ ಮೊತ್ತದ ವಸ್ತುಗಳನ್ನು ಕೊಂಡೊಯ್ಯುತ್ತಿದ್ದರೆ, ಅದನ್ನು ವಶಪಡಿಸಿಕೊಂಡು ವಿಚಾರಣೆ ನಡೆಸುವರು.

ಇಂದು ಬೆಳಗ್ಗೆ ಬೆಂಗಳೂರು ಬಸ್ಸಿನಲ್ಲಿ ಬಂದ ಅಂತರರಾಜ್ಯ ಪ್ರಯಾಣಿಕರಿಬ್ಬರು ಜಿಎಸ್‌ಟಿ ಬಿಲ್ ಇಲ್ಲದೇ ದೊಡ್ಡ ದೊಡ್ಡ ಬ್ಯಾಗ್‌ಗಳಲ್ಲಿ ತಂದಿದ್ದ ಲಕ್ಷಾಂತರ ರೂ. ಮೌಲ್ಯದ ಕಾಶ್ಮೀರಿ ಶಾಲು, ಡ್ರೆಸ್ ಮೆಟೀರಿಯಲ್‌ಗಳನ್ನು ಎಸ್‌ಎಸ್‌ಟಿ ಅಧಿಕಾರಿಗಳು ವಶಕ್ಕೆ ಪಡೆದು, ವಾಣಿಜ್ಯ ತೆರಿಗೆ ಅಧಿಕಾರಿಗಳಿಗೆ ಒಪ್ಪಿಸಿದರು.

ರಾಜ್ಯದ ಬೇರೆ ಬೇರೆ ಜಿಲ್ಲೆಗಳು, ತಮಿಳುನಾಡು, ಕೇರಳ, ಆಂಧ್ರ ಪ್ರದೇಶ, ಮಹಾರಾಷ್ಟ್ರ, ಗೋವಾ ರಾಜ್ಯಗಳಿಂದ ಬರುವ ಬಸ್‌ಗಳ ಮೇಲೆ ತೀವ್ರ ನಿಗಾ ಇರಿಸಿರುವ ಅಧಿಕಾರಿಗಳು ಆ ಪ್ರಯಾಣಿಕರ ಲಗೇಜುಗಳನ್ನು ತಪಾಸಣೆ ನಡೆಸುತ್ತಿದ್ದಾರೆ. ಸ್ಟ್ಯಾಟಿಕ್ ಸರ್ವೇಲೆನ್ಸ್ ಟೀಂ, ಫ್ಲೈಯಿಂಗ್ ಸ್ಕ್ವಾಡ್ ಜೊತೆಗೆ ಲಷ್ಕರ್ ಠಾಣೆ ಎಎಸ್‌ಐಗಳು, ಸಿಬ್ಬಂದಿಗಳು, ಚೆಕ್‌ಪೋಸ್ಟ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇನ್ಸ್‌ಪೆಕ್ಟರ್ ಪಿ.ಪಿ. ಸಂತೋಷ್ ಅವರು ಪ್ರತೀ 2 ಗಂಟೆಗೊಮ್ಮೆ ಗಸ್ತು ಮಾಡಿ ಚೆಕ್‌ಪೋಸ್ಟ್ ಕಾರ್ಯನಿರ್ವಹಣೆ ಮೇಲ್ವಿಚಾರಣೆ ನಡೆಸುತ್ತಿದ್ದಾರೆ.

ಮೈಸೂರು ಜಿಲ್ಲಾಡಳಿತ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಮೈಸೂರು ಸುತ್ತಮುತ್ತಲಿನ 22 ಕಡೆ ನಗರ ಸಂಪರ್ಕಿಸುವ ರಾಜ್ಯ, ರಾಷ್ಟ್ರೀಯ ಹೆದ್ದಾರಿಗಳು, ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಸ್ಥಾಪಿಸಿರುವ ಚೆಕ್‌ಪೋಸ್ಟ್‌ಗಳ ಜೊತೆಗೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲೂ ಚೆಕ್‌ಪೋಸ್ಟ್ ಸ್ಥಾಪಿಸಿ ತಪಾಸಣಾ ಕಾರ್ಯ ನಡೆಸುತ್ತಿದ್ದಾರೆ.

ಮೈಸೂರಿನ ರಿಂಗ್ ರಸ್ತೆ ಜಂಕ್ಷನ್‌ಗಳು, ಮೈಸೂರು–ಬೆಂಗಳೂರು ಹೆದ್ದಾರಿ, ಕೆಆರ್‌ಎಸ್ ರಸ್ತೆ, ಹುಣಸೂರು ರಸ್ತೆ, ಬೋಗಾದಿ ರಸ್ತೆ, ಹೆಚ್.ಡಿ. ಕೋಟೆ ರಸ್ತೆ, ನಂಜನಗೂಡು ರಸ್ತೆ, ತಿ. ನರಸೀಪುರ ರಸ್ತೆ, ಬನ್ನೂರು ರಸ್ತೆ ಹಾಗೂ ಮಹದೇವಪುರ ರಸ್ತೆಗಳ ಚೆಕ್‌ಪೋಸ್ಟ್‌ಗಳಲ್ಲೂ ದಿನದ 24 ಗಂಟೆಯೂ ಅಧಿಕಾರಿಗಳು ಆ ಮಾರ್ಗ ಸಂಚರಿಸುವ ವಾಹನಗಳನ್ನು ತಡೆದು ನಿಲ್ಲಿಸಿ ತಪಾಸಣೆ ಮಾಡುತ್ತಿರುವ ಜೊತೆಗೆ ಮೈಸೂರು ನಗರದ ಬಿ.ಎನ್. ರಸ್ತೆಯಲ್ಲಿರುವ ಕೆಎಸ್‌ಆರ್‌ಟಿಸಿ ಸಬರ್ಬನ್ ಬಸ್ ನಿಲ್ದಾಣದಲ್ಲೂ ಪ್ರಯಾಣಿಕರ ಲಗೇಜುಗಳನ್ನು ಪರಿಶೀಲಿಸುತ್ತಿದ್ದು, ಚುನಾವಣಾ ಅಕ್ರಮ ತಡೆಗೆ ಕಟ್ಟುನಿಟ್ಟಿನ ಕ್ರಮ ವಹಿಸಲಾಗುತ್ತಿದೆ.

ಹುಲಿ ಸಂರಕ್ಷಣೆ ಜೊತೆಗೆ ಕಾಡಂಚಿನ ಜನರ ಬದುಕು ಸುಧಾರಿಸುವ ಕಾರ್ಯವೂ ಆಗಬೇಕಿದೆ

ಗ್ಲೋಬಲ್ ಟೈಗರ್ ಫೋರಂನ ಕಾರ್ಯದರ್ಶಿ ರಾಜೇಶ್ ಗೋಪಾಲ್ ಅಭಿಮತ



ಮೈಸೂರು, ಏ.11(ಎಂಟಿವೈ)– ಹುಲಿ ಸಂರಕ್ಷಣೆ ನಿಟ್ಟಿನಲ್ಲಿ ಕಾಡಂಚಿನ ಜನರ ಜೀವನೋಪಾಯಕ್ಕೆ ಧಕ್ಕೆಯಾಗದಂತೆ ಸುಸ್ಥಿರ ಅಭಿವೃದ್ಧಿ, ಜೀವವೈವಿಧ್ಯತೆ, ಪರಿಸರ ಸ್ನೇಹಿ ಹೂಡಿಕೆಯನ್ನು ಪ್ರೇರೇಪಿಸುವ ಅವಶ್ಯಕತೆ ಇದೆ ಎಂದು ಗ್ಲೋಬಲ್ ಟೈಗರ್ ಫೋರಂನ ಕಾರ್ಯದರ್ಶಿ ರಾಜೇಶ್ ಗೋಪಾಲ್ ಅಭಿಪ್ರಾಯಪಟ್ಟಿದ್ದಾರೆ.

ಹುಲಿ ಯೋಜನೆಯ 50ನೇ ವರ್ಷಾಚರಣೆ ಅಂಗವಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಆವರಣದ ಕಾವೇರಿ ಸಭಾಂಗಣದಲ್ಲಿ ನಡೆದ ಕಾರ್ಯಾಗಾರದಲ್ಲಿ 'ಭಾರತದಲ್ಲಿ ಹುಲಿ ಯೋಜನೆ' ವಿಷಯ ಕುರಿತು ಮಾತನಾಡಿದ ಅವರು, ಹುಲಿ ಯೋಜನೆ ಆರಂಭವಾಗಿ 50 ವರ್ಷ ಕಳೆದಿದೆ. ಈ ಹಾದಿಯಲ್ಲಿ ಸಾಕಷ್ಟು ಸವಾಲುಗಳು ಎದುರಾಗಿವೆ. ಈ ಯೋಜನೆಯಿಂದ ಹುಲಿಗಳ ಸಂರಕ್ಷಣೆ ಸಾಧ್ಯವಾಗಿದೆ. ಆದರೂ ಇನ್ನಷ್ಟು ಬದಲಾವಣೆ ತರುವ ಅಗತ್ಯವಿದೆ. ಇದರಿಂದಾಗಿ ಅಮೃತ್ ಕಾಲ್ ಕಾ ಟೈಗರ್ ವಿಷನ್‌ನಲ್ಲಿ ಘೋಷಿಸಿರುವಂತೆ ಪ್ರಾಣಿಗಳು, ಕಾಡು ಹಾಗೂ ಕಾಡಂಚಿನಲ್ಲಿ ವಾಸಿಸುವವರಿಗೆ ತೊಂದರೆಯಾಗದಂತೆ ಸಂರಕ್ಷಣೆ ಕೈಗೊಳ್ಳುವ ಬಗ್ಗೆ ಚಿಂತನೆ ನಡೆಸುವತ್ತ ಗಮನ ಹರಿಸಬೇಕು ಎಂದರು.

ಅರಣ್ಯ ಹಾಗೂ ವನ್ಯಜೀವಿಗಳಿಗೆ ಧಕ್ಕೆಯಾಗುವ ಚಟುವಟಿಕೆಗಳು ಹೆಚ್ಚಾಗುವ ಮುನ್ನವೇ ಆ ಜಾಗದಲ್ಲಿ ಪರಿಸರ ಸ್ನೇಹಿ ಯೋಜನೆಗಳು ಹಾಗೂ ಉದ್ದಿಮೆಗಳನ್ನು ಆರಂಭಿಸುವ ಆಲೋಚನೆ ಮಾಡಬೇಕಾಗಿದೆ. ಹುಲಿ ಹೊಂದಿರುವ ಕಾಡುಗಳನ್ನು ಹುಲಿ ಸಂರಕ್ಷಿತ ಪ್ರದೇಶಗಳ ವ್ಯಾಪ್ತಿಯಲ್ಲಿ ತರುವುದು, ನಿರ್ವಹಣೆಗಾಗಿ ವಿಶೇಷ ಹುಲಿ ಕಾರ್ಯಸೂಚಿಯನ್ನು ಆಶ್ರಯಿಸುವುದರಿಂದ ಹುಲಿ ಸಂರಕ್ಷಣೆಯಲ್ಲಿ ಸುಧಾರಣೆ ಕಂಡುಕೊಳ್ಳಲು ಸಾಧ್ಯವಿದೆ. ಹುಲಿಗಳು ಹೆಚ್ಚಾಗಿ ವಾಸಿಸುವ ಮತ್ತು ವಿವಿಧ ಕ್ಲಿಷ್ಟಕರ ಸವಾಲುಗಳನ್ನು ಎದುರಿಸುತ್ತಿರುವ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹುಲಿಗಳ ಸಂಖ್ಯೆ ಹಾಗೂ ಇನ್ನಿತರ ವನ್ಯಜೀವಿಗಳ ಸಂಖ್ಯೆ ಹೆಚ್ಚಿಸಲು ಅಗತ್ಯ ವ್ಯವಸ್ಥೆ ಮಾಡಲು ನಿರ್ಣಯ ಕೈಗೊಳ್ಳಬೇಕು. ಕಾಡಂಚಿನ ಪ್ರದೇಶಗಳಲ್ಲಿ ಸಂರಕ್ಷಣೆಗೆ ಸ್ಥಳೀಯರ ಸಹಕಾರ ಪಡೆಯಬೇಕು. ಹುಲಿ ಸಂರಕ್ಷಿತ ಪ್ರದೇಶ ಮತ್ತು ಪರಿಸರ ಸೂಕ್ಷ್ಮ ವಲಯವನ್ನು ಜಿಲ್ಲೆಯೊಂದಿಗೆ ಜೋಡಣೆ ಮಾಡುವಾಗ ಯಾರಿಗೂ ತೊಂದರೆಯಾಗದಂತೆ ಸೂಕ್ತ ಯೋಜನೆ ರೂಪಿಸಬೇಕೆಂದು ಸಲಹೆ ನೀಡಿದರು.



ಸಂಪನ್ಮೂಲ ವ್ಯಕ್ತಿ ರಾಖಿ ಯಾದವ್ ಅವರು, ಬೆಂಗಳೂರಿನ ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್ ನಗರೀಕರಣದಿಂದಾಗಿ ಯಾವ ರೀತಿ ಸಮಸ್ಯೆ ಎದುರಿಸುತ್ತಿದೆ ಎಂಬುದನ್ನು ವಿವರಿಸಿದರು. ಉದ್ಯಾನದ ಸುತ್ತಲ ಪ್ರದೇಶವನ್ನು ಹೆಚ್ಚಿಸಿದಲ್ಲಿ ಸ್ಥಳೀಯರ ವಿರೋಧ ಎದುರಿಸಬೇಕಾಗುತ್ತದೆ. ಹಾಗಾಗಿ ಎಲ್ಲರ ಸಹಕಾರದೊಂದಿಗೆ ಈ ಸಂರಕ್ಷಣೆ ಮಾಡಬೇಕಿದೆ ಎಂದರು. ಲಕ್ಷ ದ್ವೀಪದಲ್ಲಿ ಸಮುದ್ರದಲ್ಲಿರುವ ಹುಲ್ಲನ್ನು ಅಲ್ಲಿನ ಆಮೆಗಳು ತಿಂದು ಖಾಲಿ ಮಾಡುತ್ತಿವೆ ಇದರಿಂದ ಅಲ್ಲಿ ಮಂಶಾಭಿವೃದ್ಧಿ ಹೊಂದುತ್ತಿದ್ದ ಮೀನುಗಳು ಕಾಣೆಯಾಗಿರುವುದಲ್ಲದೇ ಸಮುದ್ರದಲ್ಲಿನ ಜೀವವೈವಿಧ್ಯತೆಯಲ್ಲಿ ಬದಲಾವಣೆಯಾಗಿರುವ ಕುರಿತು ಪ್ರಾತ್ಯಕ್ಷಿಕೆ ನೀಡಲಾಯಿತು.

ಮುಕ್ತ-ನ್ಯಾಯಸಮ್ಮತ ಚುನಾವಣೆ ಹಿನ್ನೆಲೆಯಲ್ಲಿ

ಉದಯಗಿರಿ, ಗಾಂಧಿನಗರದಲ್ಲಿ ಪೊಲೀಸ್ ಪಥ ಸಂಚಲನ



ಮೈಸೂರು, ಏ.11(ಆರ್‌ಕೆ)–ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಮೈಸೂರು ಪೊಲೀಸರು ನಗರದಾದ್ಯಂತ ಠಾಣಾವಾರು ಪಥ ಸಂಚಲನದ ಮೂಲಕ ಮುಕ್ತ, ನ್ಯಾಯಸಮ್ಮತ ಹಾಗೂ ಶಾಂತಿಯುತ ಮತದಾನದ ನಿಟ್ಟಿನಲ್ಲಿ ಸಾರ್ವಜನಿಕರಲ್ಲಿ ವಿಶ್ವಾಸ ಮೂಡಿಸಿದರು.

ಯಾವುದೇ ಭಯ, ಒತ್ತಡ, ಆಮಿಷಕ್ಕೆ ಒಳಗಾಗದೇ ನಿರ್ಭೀತಿಯಿಂದ ಮತದಾನ ಮಾಡುವಂತೆ ಅರಿವು ಮೂಡಿಸುತ್ತಿರುವ ಪೊಲೀಸರು, ನಿಮ್ಮೊಂದಿಗೆ ನಾವಿದ್ದೇವೆ. ದುಷ್ಟಶಕ್ತಿಗಳು, ಸಮಾಜಘಾತುಕ ವ್ಯಕ್ತಿಗಳಿಗೆ ಹೆದರದೇ ನಿಮ್ಮ ಹಕ್ಕು ಚಲಾಯಿಸುವಂತೆ ಸಂದೇಶ ರವಾನಿಸುತ್ತಿದ್ದಾರೆ.

ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ್ ತಳವಾರ ನೇತೃತ್ವದಲ್ಲಿ ಎನ್.ಆರ್.ಠಾಣೆ ಪೊಲೀಸರು ಇಂದು ಠಾಣಾ ವ್ಯಾಪ್ತಿಯ ಗಾಂಧಿನಗರದ ಪ್ರಮುಖ ರಸ್ತೆಗಳಲ್ಲಿ ಪಥ ಸಂಚಲನ ನಡೆಸಿದರೆ, ಉದಯಗಿರಿ ಠಾಣೆ ಇನ್ಸ್‌ಪೆಕ್ಟರ್ ಸುಧಾಕರ್ ನೇತೃತ್ವದಲ್ಲಿ ವ್ಯಾಪ್ತಿಯ ಅಜೀಜ್‌ಸೇಠ್ ನಗರ, ಬೀಡಿ ಕಾಲೋನಿ, ಕಲ್ಯಾಣಗಿರಿ, ರಾಘವೇಂದ್ರನಗರ ಹಾಗೂ ಜೆಎಸ್‌ಎಸ್ ಲೇಔಟ್‌ನ ಮುಖ್ಯ ರಸ್ತೆಗಳಲ್ಲಿ ಸಂಜೆ ಪಥ ಸಂಚಲನ ನಡೆಸಿದರು. ಎರಡೂ ಠಾಣೆಗಳ ಸಿವಿಲ್ ಪೊಲೀಸ್, ಸಿಐಎಸ್‌ಎಫ್, ಕಮಾಂಡೋ ಪಡೆ, ಅರೆಮಿಲಿಟರಿ ಪಡೆ ಸಿಬ್ಬಂದಿ, ಎಸಿಪಿಗಳಾದ ಶಾಂತಮಲ್ಲಪ್ಪ, ಅಶ್ವತ್ಥನಾರಾಯಣ, ಇನ್ಸ್‌ಪೆಕ್ಟರ್‌ಗಳು ಪಥ ಸಂಚಲನದಲ್ಲಿ ಪಾಲ್ಗೊಂಡಿದ್ದರು.



ನಾನು ಸಿನಿಮಾದಲ್ಲಿ ಮಾಡಿದ ದುಷ್ಟ ಪಾತ್ರಗಳು 'ಜೆಸಿಬಿ' ಪಕ್ಷಗಳಲ್ಲೇ ತುಂಬಿವೆ

● ಆಮ್ ಆದ್ಮಿ ಪಕ್ಷದ ಪ್ರಚಾರ ಸಮಿತಿ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು ಲೇವಡಿ ● ಎನ್.ಆರ್.ಕ್ಷೇತ್ರದ ಆಮ್ ಅಭ್ಯರ್ಥಿ ಧರ್ಮಶ್ರೀ ಸಿಂಗ್ ಪರ ಪ್ರಚಾರ ● ಸ್ವಚ್ಛತೆಯ ಪ್ರತೀಕವಾದ ಪೊರಕೆಯಿಂದ ಇಂತಹ ದುಷ್ಟರನ್ನು ಗುಡಿಸಿ ಹೊರಹಾಕಿ ● ಅಭಿವೃದ್ಧಿಯನ್ನೇ ಮೂಲಮಂತ್ರವಾಗಿಸಿಕೊಂಡಿರುವ ಆಮ್ ಆದ್ಮಿ ಬೆಂಬಲಿಸಲು ಮನವಿ

ಮೈಸೂರು,ಏ.11(ಎಂಟಿವೈ)– ರಾಜ್ಯವನ್ನು ಲೂಟಿ ಹೊಡೆಯುತ್ತಿರುವ ಜೆಸಿಬಿ ಪಕ್ಷಗಳನ್ನು ದೂರವಿಟ್ಟು ಅಭಿವೃದ್ಧಿಯೊಂದೇ ಮೂಲ ಮಂತ್ರವಾಗಿರುವ ಆಮ್ ಆದ್ಮಿ ಪಕ್ಷಕ್ಕೆ ಬೆಂಬಲ ನೀಡುವಂತೆ ಎಎಪಿ ಪ್ರಚಾರ ಸಮಿತಿ ಅಧ್ಯಕ್ಷ ನಟ ಮುಖ್ಯಮಂತ್ರಿ ಚಂದ್ರು ಮನವಿ ಮಾಡಿದ್ದಾರೆ.

ಮೈಸೂರಿನ ಎನ್.ಆರ್.ವಿಧಾನಸಭಾ ಕ್ಷೇತ್ರದ ಎಎಪಿ ಅಭ್ಯರ್ಥಿ ಧರ್ಮಶ್ರೀ ಸಿಂಗ್ ಪರ ಕ್ಷೇತ್ರದ ವಿವಿಧೆಡೆ ರೋಡ್ ಶೋ ಮೂಲಕ ಬಿರುಸಿನ ಪ್ರಚಾರ ನಡೆಸಿ ಮಾತನಾಡಿದ ಅವರು, ರಾಜ್ಯದಲ್ಲಿ ಜೆಸಿಬಿ ಎಂದು ಕರೆಯುವ ಕಾಂಗ್ರೆಸ್, ಜೆಡಿಎಸ್ ಹಾಗೂ ಬಿಜೆಪಿ ಲೂಟಿ ಮಾಡುತ್ತಿವೆ. ಈ ಪಕ್ಷಗಳಿಂದ ರಾಜ್ಯದ ಜನತೆಗೆ ಯಾವುದೇ ಪ್ರಯೋಜನವಿಲ್ಲ. ರಾಜ್ಯದಲ್ಲಿ ಇಷ್ಟು ವರ್ಷ ಕಾಂಗ್ರೆಸ್, ಜೆಡಿಎಸ್ ಹಾಗೂ ಈ ಮಧ್ಯೆ ಬಿಜೆಪಿ ಅಧಿಕಾರ ನಡೆಸಿದೆ. ಈ ಪಕ್ಷಗಳು ರಾಜ್ಯದ ಹಿತವನ್ನು ಬಲಿಕೊಟ್ಟು ತಮ್ಮ ಹಿತವನ್ನಷ್ಟೇ ಕಾಪಾಡಿಕೊಂಡಿವೆ ಎಂದು ಆರೋಪಿಸಿದರು.



ಈ ಜೆಸಿಬಿ ಪಕ್ಷಗಳಲ್ಲಿ ದರೋಡೆಕೋರರು, ಕಳ್ಳರು, ಸುಳ್ಳರು, ಕುಟುಂಬ ರಾಜಕಾರಣ, ಕೋಮುವಾದಿಗಳು, ಸರ್ವಾಧಿಕಾರಿಗಳು, ಖಜಾನೆ ಲೂಟಿ ಮಾಡುವವರೇ ತುಂಬಿದ್ದಾರೆ. ನಾನು ನೂರಾರು ಸಿನಿಮಾದಲ್ಲಿ ಅಭಿನಯಿಸಿದ್ದೇನೆ. ಕಳ್ಳ–ಸುಳ್ಳ, ಮಾನಭಂಗ ಮಾಡುವ, ರೇಗಿಸುವ ಪಾತ್ರ ಸೇರಿದಂತೆ ಅಯೋಗ್ಯನ ಪಾತ್ರಗಳನ್ನು ಮಾಡಿಕೊಂಡು ಬಂದಿದ್ದೇನೆ. ಸಿನಿಮಾದಲ್ಲಿ ನಾನು ಮಾಡಿದ ಪಾತ್ರಧಾರಿಗಳು ಈಗ ಜೆಸಿಬಿ ಪಕ್ಷದಲ್ಲಿದ್ದಾರೆ ಎಂದು ಕಿಡಿಕಾರಿದ್ದಾರೆ.

ದೆಹಲಿ ಮುಖ್ಯಮಂತ್ರಿ ಅರವಿಂದ ಕ್ರೇಜಿವಾಲ್ ಪ್ರಾಮಾಣಿಕ ವ್ಯಕ್ತಿ. ದೇಶದಲ್ಲಿ ಬದಲಾವಣೆ ತರಲು ನಾಲ್ಕನೇ ಪಕ್ಷವಾಗಿ ಆಮ್ ಆದ್ಮಿ ಪಕ್ಷವನ್ನು ಸ್ಥಾಪಿಸಿದ್ದಾರೆ. ಈಗಾಗಲೇ ದೆಹಲಿ ಹಾಗೂ ಪಂಜಾಬ್‌ನಲ್ಲಿ ಆಮ್ ಆದ್ಮಿ ಪಕ್ಷದ ಸರ್ಕಾರ ಅಧಿಕಾರ ನಡೆಸಿ, ಅಲ್ಲಿನ ಜನರ ಹಿತ ಕಾಯಲು ಅನೇಕ ಜನಪರ ಯೋಜನೆಗಳನ್ನು ಜಾರಿಗೆ ತಂದಿದೆ. ಇದೀಗ ರಾಜ್ಯ ರಾಜಕಾರಣದ ಶುದ್ಧೀಕರಣದ ಸಮಯ ಬಂದಿದೆ. ಚುನಾವಣೆಯಲ್ಲಿ ಜೆಸಿಬಿ ಪಕ್ಷಗಳಿಗೆ ತಕ್ಕ ಪಾಠ ಕಲಿಸಬೇಕಾಗಿದೆ. ನಮ್ಮಲ್ಲಿ ಮಹಿಳೆಯರು ಊಟವನ್ನೂ ಬಡಿಸುತ್ತಾರೆ, ಕಸವನ್ನೂ ಗುಡಿಸುತ್ತಾರೆ. ಶುದ್ಧೀಕರಣದ ಸಂಕೇತವಾಗಿರುವ ಪೊರಕೆ ಹಿಡಿದು ಭ್ರಷ್ಟಾಚಾರವನ್ನೇ ಪ್ರಮುಖವಾಗಿಸಿಕೊಂಡಿರುವ ಪಕ್ಷಗಳ ಅಭ್ಯರ್ಥಿಗಳ ಮುಖ ಕೆರೆದು ಓಡಿಸಬೇಕು. ಎನ್.ಆರ್.ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿಯಾಗಿರುವ ಧರ್ಮಶ್ರೀ ಅವರಿಗೆ ಬೆಂಬಲ ನೀಡಬೇಕು. ನಮ್ಮ ಮನೆಯ ಹೆಣ್ಣು ಮಗಳನ್ನು ವಿವಾಹ ಮಾಡಿಕೊಡಲು ಸಮರ್ಥ ವರನನ್ನು ಹುಡುಕುವಂತೆ ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳಲ್ಲಿ ಜನರ ಸೇವೆ ಮಾಡಲು ಬದ್ಧವಾಗಿರುವ ಎಎಪಿ ಪಕ್ಷದ ಅಭ್ಯರ್ಥಿಗೆ ಮತ ಹಾಕುವಂತೆ ಮನವಿ ಮಾಡಿದರು.

ಎನ್.ಆರ್.ಕ್ಷೇತ್ರದ ಎಎಪಿ ಅಭ್ಯರ್ಥಿ ಧರ್ಮಶ್ರೀ ಸಿಂಗ್ ಮಾತನಾಡಿ, ದೆಹಲಿಯಲ್ಲಿ ಮುಖ್ಯಮಂತ್ರಿ ಅರವಿಂದ ಕ್ರೇಜಿವಾಲ್ ಜನಪರ ಕೆಲಸ ಮಾಡಿ ಮನೆ ಮಾತಾಗಿದ್ದಾರೆ. ದೆಹಲಿಯಲ್ಲಿ ಪ್ರತಿಯೊಂದು ಸರ್ಕಾರಿ ಶಾಲೆಯಲ್ಲಿ ಈಜುಕೊಳ ನಿರ್ಮಿಸಿದ್ದಾರೆ. ಎಲ್ಲಾ ಕಡೆಯೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ನಿರ್ಮಿಸಿದ್ದಾರೆ. ಇಂತಹ ಸರ್ಕಾರವನ್ನು ರಾಜ್ಯದಲ್ಲೂ ಅಧಿಕಾರಕ್ಕೆ ತರಬೇಕು. ಜೆಸಿಬಿ ಪಕ್ಷ, ಎಸ್‌ಡಿಪಿಐಗೆ ಬೆಂಬಲ ನೀಡಬಾರದು. ಇಷ್ಟು ದಿನ ಎಲ್ಲಾ ಪಕ್ಷಗಳು ಜಾತಿ, ಧರ್ಮ, ಹಣ ಹಾಗೂ ತೋಳ್ಬಲದ ಮೇಲೆ ಮತ ಕೇಳಿದ್ದಾರೆ. ಈಗ ನಾವು ಅಭಿವೃದ್ಧಿ ಕೆಲಸ ಮುಂದಿಟ್ಟುಕೊಂಡು ಮತಯಾಚನೆ ಮಾಡುತ್ತಿದ್ದೇವೆ. ನಮ್ಮ ಪಕ್ಷ ಮಹಿಳೆಯರಿಗೆ ಎಲ್ಲಾ ರೀತಿಯ ಸೌಲಭ್ಯ ನೀಡುತ್ತದೆ. ಈಗಾಗಲೇ ದೆಹಲಿಯಲ್ಲಿ ಮಹಿಳೆಯರಿಗೆ ಸಾರಿಗೆ ಬಸ್‌ನಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ನಾವು ಉಚಿತವಾಗಿ ಕೊಡುವುದು ಎಲ್ಲಾ ಜನರ ಹಣದಿಂದಲೇ. ಈಗ ಎಲ್ಲಾ ವಸ್ತುಗಳಿಗೂ ದುಬಾರಿ ತೆರಿಗೆ ಕಟ್ಟುವ ಸ್ಥಿತಿ ಒದಗಿದೆ. ನಾವು ಹುಟ್ಟಿನಿಂದ ಸಾಯುವವರೆಗೂ ಜಿಎಸ್‌ಟಿ ಕಟ್ಟಬೇಕಾಗಿದೆ. ಇಂತಹ ಸರ್ಕಾರ ಕಿತ್ತೊಗೆಯುವ ಸಮಯ ಬಂದಿದೆ. ಜನ ಕಟ್ಟಿದ ತೆರಿಗೆ ಹಣವನ್ನು ನಾವು ಜನರಿಗಾಗಿಯೇ ಬಳಸುತ್ತೇವೆ. ತೆರಿಗೆ ಕಟ್ಟುವುದು ನಮ್ಮ ಕರ್ತವ್ಯವಾಗಿದ್ದರೆ, ಅವುಗಳಿಂದ ಸೌಲಭ್ಯ ಪಡೆಯುವುದು ನಮ್ಮ ಅಧಿಕಾರ. ಯಾವ ಪಕ್ಷಗಳು ನಮ್ಮ ಅಧಿಕಾರದ ಬಗ್ಗೆ ಯೋಚಿಸುತ್ತಿಲ್ಲ. ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿ ಮುಂದುವರೆಯುತ್ತಿದ್ದಾರೆ. ಅದಕ್ಕಾಗಿ ಆಮ್ ಆದ್ಮಿ ಪಕ್ಷ ನರಸಿಂಹರಾಜ, ಚಾಮರಾಜ, ಕೃಷ್ಣರಾಜ ಕ್ಷೇತ್ರಗಳಲ್ಲಿ ಮಹಿಳಾ ಅಭ್ಯರ್ಥಿಗಳನ್ನೇ ಕಣಕ್ಕಿಳಿಸಿದೆ. ಪೊರಕೆ ಗುರುತು ಲಕ್ಷ್ಮಿ ಸಂಕೇತವಾಗಿದ್ದು, ಈ ಬಾರಿ ನಮಗೆ ಬೆಂಬಲ ನೀಡುವಂತೆ ಮನವಿ ಮಾಡಿದರು. ಯರಗನಹಳ್ಳಿ ವೃತ್ತದಿಂದ ಆರಂಭವಾದ ರೋಡ್ ಶೋ, ವಿವಿಧ ರಸ್ತೆಗಳಲ್ಲಿ ಸಾಗಿತು. ಈ ಸಂದರ್ಭದಲ್ಲಿ ದೆಹಲಿಯ ಸಾಹಿತಿ ಶೆಹನಾಜಿ ಹಿಂದುಸ್ಥಾನಿ, ಆಪ್ ಮುಖಂಡ ಇಸ್ಮಾಯಿಲ್ ಹಾಗೂ ಇನ್ನಿತರರಿದ್ದರು.

ಮೈಸೂರು ಮಿತ್ರ

ತಂದೆ, ತಾಯಿ ಕಳೆದುಕೊಂಡ ನನಗೆ ಧೈರ್ಯ ತುಂಬಿದ

ಕ್ಷೇತ್ರದ 'ಕೈ' ಮುಖಂಡರ ಸಲಹೆಯಂತೆ ಚುನಾವಣೆ ಎದುರಿಸುವೆ

ನಂಜನಗೂಡು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ

ನಂಜನಗೂಡು, ಏ.11– ತಿಂಗಳೊಳಗೆ ತಂದೆ, ತಾಯಿ ಇಬ್ಬರನ್ನು ಕಳೆದುಕೊಂಡ ನನಗೆ ಧೈರ್ಯ ತುಂಬಿದ ಕ್ಷೇತ್ರದ ಜನತೆ ಹಾಗೂ ಮುಖಂಡರ ಮಾರ್ಗದರ್ಶನದಂತೆ ಚುನಾವಣೆ ಎದುರಿಸುವೆ ಎಂದು ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ ತಿಳಿಸಿದರು.

ನಗರದ ನಂದಿ ಕನ್ವೆನ್ಷನ್ ಹಾಲ್‌ನಲ್ಲಿ ಕಾಂಗ್ರೆಸ್ ಪಕ್ಷದಿಂದ ಆಯೋಜಿಸಿದ್ದ ದಿವಂಗತ ಆರ್.ಧ್ರುವನಾರಾಯಣ ಅವರ ಪತ್ನಿ ವೀಣಾ ಧ್ರುವನಾರಾಯಣ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಅವರು ಮಾತನಾಡಿದರು.

ನಾನು ಹುಟ್ಟುವ ಮುನ್ನವೇ ನನ್ನ ತಂದೆ ಆರ್.ಧ್ರುವನಾರಾಯಣ ಅವರು ಸಾರ್ವಜನಿಕ ಜೀವನದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಹಾಗಾಗಿ ಕುಟುಂಬದವರಿಗೆ ಹೆಚ್ಚು ಸಮಯ ಕೊಡಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ನಾನು, ನನ್ನ ತಮ್ಮ ನಮ್ಮ ತಾಯಿ ವೀಣಾ ಅವರೊಂದಿಗೆ ಹೆಚ್ಚು ಸಮಯ ಕಳೆಯುತ್ತಿದ್ದೆವು. ತಂದೆ ಅವರ ಸಾವು ಬರಸಿಡಿಲಿನಂತೆ ನಮಗೆ ಎದುರಾಯಿತು. ನಂತರ ಕೆಲವೇ ದಿನಗಳಲ್ಲಿ ತಾಯಿಯೂ ನಿಧನರಾಗಿದ್ದು, ಆ ನೋವನ್ನು ಇಮ್ಮಡಿಗೊಳಿಸಿದೆ. ಆ ನೋವಿನಿಂದ ಹೊರಬರಲು ಸಾಕಷ್ಟು ಸಮಯದ ಅಗತ್ಯವಿದೆ. ಇಂತಹ ಸಂದರ್ಭ ನಮ್ಮ ಕುಟುಂಬದೊಂದಿಗೆ ಕ್ಷೇತ್ರ ಜನರು, ಮುಖಂಡರು ಹಾಗೂ ಕಾಂಗ್ರೆಸ್ ನಾಯಕರು ಜೊತೆಗಿದ್ದು ಧೈರ್ಯ ತುಂಬಿದ್ದು ನಮಗೆ ಶಕ್ತಿ ಬಂದಂತಾಗಿದೆ ಎಂದರು.



ತಂದೆಯವರು ಜನರೊಂದಿಗೆ ಇದ್ದಿದ್ದರಿಂದಾಗಿ ನಾನು ಅವರ ಹಾದಿಯಲ್ಲೇ ಸಾಗಬೇಕೆಂಬ ಜನರ ಆಸೆಯಂತೆ ಚುನಾವಣೆಗೆ ಬಂದಿದ್ದೇನೆ. ಇಂತಹ ಪರಿಸ್ಥಿತಿಯಲ್ಲಿ ಕಾರ್ಯಕರ್ತರೇ ನನಗೆ ಶಕ್ತಿ. ನನ್ನ ಪರಿಸ್ಥಿತಿ ಕುರಿತು ಒಂದು ಭಿನ್ನವತ್ತಲೆ ಬರೆದಿದ್ದೇನೆ. ಅದನ್ನು ಪ್ರತಿ ಮನೆಗೂ ತಲುಪಿಸುವ ಮೂಲಕ ನನಗೆ ಶಕ್ತಿ ತುಂಬಬೇಕು. ಪಕ್ಷದ ನಾಯಕರು, ಮುಖಂಡರು ಹಾಗೂ ಕಾರ್ಯಕರ್ತರು ಹೇಗೆ ಸಲಹೆ, ಮಾರ್ಗದರ್ಶನ ನೀಡುತ್ತಾರೋ ಹಾಗೇ ಮುಂದುವರೆಯುತ್ತೇನೆ ಎಂದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಶ್ರೀಕಂಠು ಮಾತನಾಡಿ, ಅತ್ಯಂತ ಕಿರಿಯ ವಯಸ್ಸಿನಲ್ಲೇ ಧ್ರುವನಾರಾಯಣ್ ಪತ್ನಿ ವೀಣಾ ಅವರು ಕ್ಯಾನ್ಸರ್‌ಗೆ ತುತ್ತಾಗಿದ್ದು ಬಹಳ ನೋವಿನ ಸಂಗತಿ. ಅವರಿಗೆ ಸೂಕ್ತ ಚಿಕಿತ್ಸೆ ಕೊಡಿಸಿ ಮಗುವಿನ ರೀತಿ ಪತ್ನಿಯನ್ನು ನೋಡಿಕೊಳ್ಳುತ್ತಿದ್ದ ಧ್ರುವನಾರಾಯಣ ಬಹಳ ಸಂಕಷ್ಟದಲ್ಲಿದ್ದರೂ ಹೊರಗೆ ಸದಾ ನಗುಮುಖದಿಂದ ಇರುತ್ತಿದ್ದರು. ಪತ್ನಿ ಸಾವು ಕಣ್ಣೆದುರಿಗೆ ಇದೆ ಎಂಬುದು ಧ್ರುವನಾರಾಯಣ ಅವರಿಗೆ ಗೊತ್ತಿತ್ತು. ಆದರೆ ಅದನ್ನು ನೋಡುವುದು ಬೇಡ ಎಂದು ಅವರೇ ಮೊದಲು ಇಹಲೋಕ ತ್ಯಜಿಸಿದ್ದು ಬಹಳ ನೋವಿನ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು.

ತಂದೆ ತಾಯಿ ಇಬ್ಬರನ್ನು ಕಳೆದುಕೊಂಡಿರುವ ದರ್ಶನ್ ಧ್ರುವನಾರಾಯಣ ಅವರಿಗೆ ಕೇವಲ ಅನುಕಂಪದಿಂದ ಮಾತ್ರ ಚುನಾವಣೆ ಎದುರಿಸಲು ಸಾಧ್ಯವಿಲ್ಲ. ತಮ್ಮ ತಮ್ಮ ಬೂತ್‌ಗಳಲ್ಲಿ ಕಾರ್ಯಕರ್ತರು ನಿಗಾವಹಿಸುವ ಮೂಲಕ ಮತಬೇಟೆ ಮಾಡಬೇಕು. ಕುಟುಂಬದಲ್ಲಿ ತಬ್ಬಲಿಯಾಗಿರುವ ದರ್ಶನ್ ಅವರನ್ನು ರಾಜಕೀಯದಲ್ಲೂ ತಬ್ಬಲಿ ಮಾಡದಂತೆ ಕಾರ್ಯಕರ್ತರು ಎಚ್ಚರಿಕೆ ವಹಿಸಬೇಕು ಎಂದರು.

ಇದೇ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ, ಜಿಪಂ ಮಾಜಿ ಸದಸ್ಯೆ ಎಂ.ಲತಾ, ಕೆಪಿಸಿಸಿ ಹಿಂದುಳಿದ ವರ್ಗಗಳ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ಟಿ.ಗಿರೀಶ್, ಎಸ್ಸಿ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ದೊರೆಸ್ವಾಮಿ ನಾಯಕ, ಕೆಪಿಸಿಸಿ ಸದಸ್ಯ ಅಕ್ಬರ್ ಅಲಿಂ, ತಾಪಂ ಮಾಜಿ ಅಧ್ಯಕ್ಷ ಬಿ.ಎಂ.ನಾಗೇಶ್‌ರಾಜ್, ನಗರಸಭಾ ಸದಸ್ಯೆ ಗಾಯತ್ರಿ, ಮಹೇಶ್, ಪ್ರದೀಪ್, ಗಂಗಾಧರ್, ಮುಖಂಡರಾದ ಶಿವಪ್ಪದೇವರು, ಶಂಕರಪ್ಪ, ವಿಜಯ್‌ಕುಮಾರ್, ನಾಗರಾಜಯ್ಯ, ಎಂ.ರಾಜು, ಯುವ ಕಾಂಗ್ರೆಸ್ ಅಧ್ಯಕ್ಷ ಅಶೋಕ್ ಸೇರಿದಂತೆ ಇತರರಿದ್ದರು.

> ದರ್ಶನ್ ಪರಿಸ್ಥಿತಿ ಕಂಡು ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡ, ಮಾಜಿ ಸಿಎಂ ಕುಮಾರಸ್ವಾಮಿ ಸೇರಿದಂತೆ ಸ್ಥಳೀಯ ನಾಯಕರು ಚರ್ಚೆ ನಡೆಸಿ ನಂಜನಗೂಡು ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಕಣಕ್ಕಿಳಿಸುವುದಿಲ್ಲ ಎಂಬ ನಿರ್ಧಾರಕ್ಕೆ ಬಂದಿರುವುದು ಸ್ವಾಗತಾರ್ಹ. ಜೆಡಿಎಸ್ ಮುಖಂಡರನ್ನು ವಿಶ್ವಾಸಕ್ಕೆ ಪಡೆದು ಚುನಾವಣೆ ಎದುರಿಸಲಾಗುವುದು.
> - ಕಳಲೆ ಎನ್.ಕೇಶವ ಮೂರ್ತಿ, ಮಾಜಿ ಶಾಸಕ.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಪ್ರವೀಣ (ಕ): ಬೆ.10.30ಕ್ಕೆ, ಗುರುದೇವ್ ಹೊಯ್ಸಳ (ಕ): ಮ.1.05ಕ್ಕೆ, ದಸರಾ (ತೆ): ಮ.3.45ಕ್ಕೆ, ರಾವಣಾಸುರ (ತೆ): ಸಂ.6.55ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 2	ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ): ಬೆ.11ಕ್ಕೆ, ಮ.1.05ಕ್ಕೆ, ಮ.3.10ಕ್ಕೆ, ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಸಂ.5.10ಕ್ಕೆ, ರಾ.7.30ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ರಾಮಾಚಾರಿ 2.0 (ಕ): ಬೆ.10.45ಕ್ಕೆ, ಆಗಸ್ಟ್ 16 1947(ತ): ಮ.1.30ಕ್ಕೆ, ಪೆಂಟಗನ್ (ಕ): ಸಂ.4.20ಕ್ಕೆ, ಗುಮ್ರಾಹ್ (ಹಿಂ): ರಾ.7.30ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಗುರುದೇವ್ ಹೊಯ್ಸಳ (ಕ): ಬೆ.10.50ಕ್ಕೆ, ರಾ.7.40ಕ್ಕೆ, ರಾ.10.15ಕ್ಕೆ, ವೀರಂ (ಕ): ಮ.1.30ಕ್ಕೆ, ಸಂ.4.35ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಗುರುದೇವ್ ಹೊಯ್ಸಳ (ಕ): ಬೆ.10.20ಕ್ಕೆ, ವೀರಂ (ಕ): ಮ.1.05ಕ್ಕೆ, ರಾ.7.15ಕ್ಕೆ, ರಾವಣಾಸುರ (ತೆ): ಸಂ.4.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಬೆ.10.25ಕ್ಕೆ, ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ): ಮ.12.45ಕ್ಕೆ, ಸಂ.5.40ಕ್ಕೆ, ರಾ.7.50ಕ್ಕೆ, ರಾಮಾಚಾರಿ 2.0(ಕ): ಮ.2.55ಕ್ಕೆ, ದಸರಾ (ತೆ): ರಾ.10ಕ್ಕೆ.
ಸ್ಕ್ರೀನ್ 3	ವೀರಂ (ಕ): ಬೆ.10.10ಕ್ಕೆ, ರಾವಣಾಸುರ (ತೆ): ಮ.1.25ಕ್ಕೆ, ಗುರುದೇವ ಹೊಯ್ಸಳ (ಕ): ಸಂ.4.20ಕ್ಕೆ, ರಾ.9.50ಕ್ಕೆ, ನಮ್ ನಾಣಿ ಮದುವೆ ಪ್ರಸಂಗ (ಕ): ರಾ.7.05ಕ್ಕೆ.
ಸ್ಕ್ರೀನ್ 4	ಪ್ರವೀಣ (ಕ): ಬೆ.11.10ಕ್ಕೆ, ಗುರುದೇವ ಹೊಯ್ಸಳ (ಕ): ಮ.1.45ಕ್ಕೆ, ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಸಂ.4.30ಕ್ಕೆ, ರಾ.10.20ಕ್ಕೆ, ಪೆಂಟಗನ್ (ಕ): ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ರಾವಣಸುರ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಹೊಯ್ಸಳ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪ್ರದರ್ಶನ ಇರುವುದಿಲ್ಲ	
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ರಾವಣಸುರ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ವೀರಂ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
1947 (ತ)	4 ಪ್ರದರ್ಶನಗಳು
ಸಂಗಂ	
ರಾವಣಸುರ (ತೆ)	4 ಪ್ರದರ್ಶನಗಳು
ಲಿಡೋ	
ಕಬ್ಜ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವೀರಂ (ಕ)	4 ಪ್ರದರ್ಶನಗಳು
ಪ್ರಭಾ	
ವೀರಂ (ಕ)	4 ಪ್ರದರ್ಶನಗಳು

ತಂದೆ ಪರ ಸುನೀಲ್ ಬೋಸ್ ಕ್ಯಾಂಪೇನ್



ತಿ.ನರಸೀಪುರ, ಏ.11– ಈ ಬಾರಿಯ ಚುನಾವಣೆಯಲ್ಲಿ ತಿ.ನರಸೀಪುರ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವಿಗೆ ಕಾರ್ಯತಂತ್ರ ರೂಪಿಸಿರುವ ಮುಖಂಡ ಸುನೀಲ್ ಬೋಸ್ ಅವರು ತಮ್ಮ ತಂದೆ, ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ.ಹೆಚ್.ಸಿ.ಮಹದೇವಪ್ಪ ಪರ ಭರ್ಜರಿ ಕ್ಯಾಂಪೇನ್ ನಡೆಸುತ್ತಿದ್ದು, ಯುವಕರು, ಹಿರಿಯರು ಸೇರಿದಂತೆ ಎಲ್ಲಾ ವರ್ಗದ ಜನರನ್ನೂ ಭೇಟಿಯಾಗಿ ಮತಯಾಚಿಸುತ್ತಿದ್ದಾರೆ.

ತಾಲೂಕಿನ ತಲಕಾಡು ಹೋಬಳಿ ವ್ಯಾಪ್ತಿಯಲ್ಲಿ ಪಕ್ಷದ ಸಂಘಟನೆಗೆ ಆದ್ಯತೆ ನೀಡಿರುವ ಅವರು, ಬನ್ನೂರು ಪಟ್ಟಣದಲ್ಲಿ ಕಾಂಗ್ರೆಸ್‌ಗೆ ಬೆಂಬಲ ಸೂಚಿಸಿರುವ ವಿಶೇಷಚೇತನರ ಸಭೆಯಲ್ಲಿ ಭಾಗವಹಿಸಿ ಅವರೆಲ್ಲರ ಅಹವಾಲುಗಳನ್ನು ಆಲಿಸಿದರು. ಅಲ್ಲದೇ ಚುನಾವಣೆ ಬಳಿಕ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಿದ್ದಂತೆ ವಿಶೇಷಚೇತನರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುತ್ತೇನೆ ಎಂಬ ಭರವಸೆ ನೀಡಿದರು.

> ಸಮಾಜದಲ್ಲಿ ನೊಂದವರಿಗೆ ಮತ್ತು ನಿರ್ಲಕ್ಷ್ಯಕ್ಕೆ ಒಳಗಾದವರಿಗೆ ಸಾಮಾಜಿಕ ನ್ಯಾಯ ನೀಡುವ ಏಕೈಕ ಪಕ್ಷ ಕಾಂಗ್ರೆಸ್. ವಿಶೇಷಚೇತನರ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಕಾಂಗ್ರೆಸ್ ಪ್ರಣಾಳಿಕೆ ಎಲ್ಲಾ ವರ್ಗದ ಜನರ ಬದುಕನ್ನು ಹಸನು ಮಾಡಲು ಪೂರಕವಾಗಿದೆ.
> - ಸುನೀಲ್ ಬೋಸ್, ಕಾಂಗ್ರೆಸ್ ಮುಖಂಡ.

ಕಾಂಗ್ರೆಸ್‌ಗೆ ಬೆಂಬಲ ಸೂಚಿಸಿದ ನೂರಾರು ವಿಶೇಷಚೇತನರು ಸಿಗುವ ಮಾಸಾಶನದಲ್ಲಿ ಜೀವನ ನಿರ್ವಹಣೆ ಮಾಡುತ್ತಿದ್ದೇವೆ. ಆದರೂ ಸ್ವಂತ ನಿವೇಶನ ಮತ್ತು ಮನೆ ಇಲ್ಲದಿರುವುದು ಬದುಕು ನಡೆಸಲು ದುಸ್ತರವಾಗಿದೆ. ಹಾಗಾಗಿ ಮುಂದೆ ಅಧಿಕಾರಕ್ಕೆ ಬರುವ ಸರ್ಕಾರ ವಿಶೇಷಚೇತನರ ಮೀಸಲು ಹಣದಲ್ಲಿ ನಿವೇಶನ ಕಲ್ಪಿಸಿ, ಸ್ವಂತ ಸೂರು ಕಟ್ಟಿಕೊಳ್ಳಲು ಅನುದಾನ ನೀಡಬೇಕೆಂದು ಮನವಿ ಮಾಡಿದರು.

ಪುರಸಭೆ ಮಾಜಿ ಅಧ್ಯಕ್ಷ ಮುನಾವರ್ ಪಾಷ, ಮಾಜಿ ಉಪಾಧ್ಯಕ್ಷ ಬಿ.ಎಸ್.ರಾಮಲಿಂಗೇಗೌಡ, ಸಹಾಯಕ ಪ್ರಾಧ್ಯಾಪಕ ಡಾ.ಬಿ.ಕೆ.ಜ್ಞಾನಪ್ರಕಾಶ್, ವಕೀಲ ಬಿ.ಶಿವಮೂರ್ತಿ, ಒಕ್ಕಲಿಗರ ಸಂಘದ ಉಪಾಧ್ಯಕ್ಷ ಬಿ.ಸಿ.ಮಹೇಶ್, ಮುಖಂಡರಾದ ಶಿವನಂಜೇಗೌಡ, ರಾಜಾನಂದ, ಸತ್ಯಬಾಬುಗೌಡ, ಸತೀಶ್, ವೆಂಕಟೇಶ್, ಸೋಮಣ್ಣ, ಕಾರ್ ಮಹೇಶ್, ರಮೇಶ್, ಮನು ಇನ್ನಿತರರಿದ್ದರು.



ಹುಣಸೂರಲ್ಲಿ ಅಮುಲ್‌ನೊಂದಿಗೆ ಕೆಎಂಎಫ್ ವಿಲೀನ ಕೈ ಬಿಡುವಂತೆ ಒತ್ತಾಯಿಸಿ ದಸಂಸ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ಉಪವಿಭಾಗಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದರು. ಈ ವೇಳೆ ದಸಂಸ ಸಂಚಾಲಕ ನಿಂಗರಾಜ್ ಮಲ್ಲಾಡಿ, ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್, ತಾಲೂಕು ಅಧ್ಯಕ್ಷ ಚಿಕ್ಕಣ್ಣ, ತಾಲೂಕು ಪ್ರಧಾನ ಕಾರ್ಯದರ್ಶಿ ರಾಮೇಗೌಡ, ರಾಜು, ರಾಮಕೃಷ್ಣ, ಕೆಂಪರಾಜು, ದೇವೇಂದ್ರ, ಗಜೇಂದ್ರ, ಶಿವಣ್ಣ, ಬಸವರಾಜು, ಧನಂಜಯ ಇತರರಿದ್ದರು.

ಕೆ.ಆರ್.ನಗರದಲ್ಲಿ "ವನಸುಮ" ಕೃತಿ ಲೋಕಾರ್ಪಣೆ

ಸಮಾಜ ಬದಲಾಗದಿದ್ದರೇ ದೇಶದ ಬದಲಾವಣೆ ಅಸಾಧ್ಯ

ನಿವೃತ್ತ ಲೋಕಾಯುಕ್ತ ಎನ್.ಸಂತೋಷ್ ಹೆಗ್ಡೆ ಅಭಿಪ್ರಾಯ

ಕೆ.ಆರ್.ನಗರ, ಏ.11– ಪ್ರಸ್ತುತ ಸಮಾಜ ಶ್ರೀಮಂತರು ಮತ್ತು ಅಧಿಕಾರದಲ್ಲಿರುವವರ ಹಿಂದೆ ಬಿದ್ದಿದೆ. ಹೀಗಾಗಿ ಜನರು ತಮ್ಮ ಭಾವನೆಗಳನ್ನು ಬದಲಾಯಿಸಿಕೊಳ್ಳದಿದ್ದರೇ ದೇಶ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ ಎಂದು ನಿವೃತ್ತ ಲೋಕಾಯುಕ್ತ ಎನ್.ಸಂತೋಷ್ ಹೆಗ್ಡೆ ಅಭಿಪ್ರಾಯಪಟ್ಟರು.



ಪಟ್ಟಣದ ಪಿಎಲ್‌ಡಿ ಬ್ಯಾಂಕ್ ಸಮುದಾಯ ಭವನದಲ್ಲಿ ಕೆ.ಆರ್.ಲಕ್ಕೇಗೌಡರ ಜೀವನ ಕಥನ "ವನಸುಮ" ಕೃತಿ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಸಮಾಜ ಬದಲಾಗದಿದ್ದರೇ ದೇಶದ ಬದಲಾವಣೆ ಅಸಾಧ್ಯ. ಆದರೆ ಕೆ.ಆರ್.ಲಕ್ಕೇಗೌಡರ ಜೀವನ ಕಥನ ಓದಿದ ನಂತರ ಇಂತಹ ವ್ಯಕ್ತಿಗಳು ಇದ್ದಾಗ ಮಾತ್ರ ಸಮ ಸಮಾಜ ನಿರ್ಮಾಣವಾಗಲಿದೆ ಎಂದರು.

ಇಂದು ಜೈಲಿಗೆ ಹೋಗಿ ಬಂದವರನ್ನು ಬರಮಾಡಿಕೊಳ್ಳಲು ಹಾರ–ತುರಾಯಿಗಳನ್ನು ಹಿಡಿದು ಜೈಲಿನ ಬಳಿ ಕಾದು ಬಂದವರಿಗೆ ಜೈಕಾರ ಹಾಕುತ್ತಾ ಮೆರವಣಿಗೆಯಲ್ಲಿ ಕರೆ ತರುತ್ತಿರುವುದು ಬೇಸರ ತರಿಸಿದೆ ಎಂದರು.

ಹಿಂದಿನ ಕಾಲದಲ್ಲಿ ಜೈಲಿಗೆ ಹೋಗಿ ಬಂದ ವ್ಯಕ್ತಿ ಹತ್ತಿರ ಹೋಗಕೊಡದು. ಅವನ ಸಂಗ ಮಾಡಬಾರದು ಎಂದು ನಮ್ಮ ಹಿರಿಯರು ಹೇಳುತ್ತಿದ್ದರು. ಆದರೆ ಇಂದು ರಾಜಕಾರಣಿಗಳು ಸೇರಿದಂತೆ ಕಳ್ಳಕಾಕರ ಹಿಂದೆ ಜನರ ದಂಡನ್ನು ನೋಡಿದರೆ ಸಮಾಜ ಎತ್ತ ಸಾಗುತ್ತಿದೆ ಎಂದು ಭಯವಾಗುತ್ತಿದೆ ಎಂದರು.

ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಮಾತನಾಡಿ, ಹಿಂದಿನ ಜೀವನಕ್ಕೂ ಇಂದಿನ ಜೀವನಕ್ಕೂ ಬಹಳ ವ್ಯತ್ಯಾಸವಿದೆ ಅಂದಿನ ಶಿಕ್ಷಣಕ್ಕೂ ಇಂದಿನ ಶಿಕ್ಷಣಕ್ಕೂ ವ್ಯತ್ಯಾಸವಿದ್ದು, ಇಂದಿನ ಶಿಕ್ಷಣ ಮಟ್ಟವು ಉತ್ತಮವಾಗಿದೆ. ಆದರೆ ಜೀವನ ಮಾತ್ರ ಇಂದಿಗಿಂತಲೂ ಹಿಂದೆ ಉತ್ತಮವಾಗಿತ್ತು. ಜೀವನದುದ್ದಕ್ಕೂ ಹೋರಾಡಿ ಸಮಾಜದಲ್ಲಿ ತುಳಿತಕ್ಕೆ ಒಳಗಾದವರ ಬಗ್ಗೆ ಕಾಳಜಿ ಇಟ್ಟು ಅವರ ಸೇವೆ ಮಾಡಿದಂತಹ ಲಕ್ಕೇಗೌಡರ ಜೀವನ ಚರಿತ್ರೆಯನ್ನು ಇಂದಿನ ಯುವ ಪೀಳಿಗೆಗೆ ಪರಿಚಯಿಸಿದ ಸಂಪಾದಕರನ್ನು ಅಭಿನಂದಿಸುತ್ತೇನೆ ಎಂದರು.

ಶಾಸಕ ಸಾ.ರಾ.ಮಹೇಶ್, ಎಂಎಲ್‌ಸಿ ಅಡಗೂರು ಎಚ್.ವಿಶ್ವನಾಥ್, ದೀನಬಂಧು ಟ್ರಸ್ಟ್ ಅಧ್ಯಕ್ಷ ಪ್ರೊ.ಜಿ.ಎಸ್.ಜಯದೇವ್, ವಿಶ್ರಾಂತ ಕೆ.ಆರ್.ಲಕ್ಕೇಗೌಡ, ನವನಗರ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ಸಂಪಾದಕ ಡಾ.ದೀಪು ಮಾತನಾಡಿದರು.

ವೇದಿಕೆಯಲ್ಲಿ ಎಂಎಲ್‌ಸಿ ಮರಿತಿಬ್ಬೇಗೌಡ, ಮಾಜಿ ಎಂಎಲ್‌ಸಿ ಕೆ.ಟಿ.ಶ್ರೀಕಂಠೇಗೌಡ. ಟಿ.ಕೆ.ಚಿನ್ನಸ್ವಾಮಿ, ಜಿಪಂ ಮಾಜಿ ಉಪಾಧ್ಯಕ್ಷ ಎ.ಎಸ್.ಚನ್ನಬಸಪ್ಪ, ಮಾಜಿ ಮುಡಾ ಅಧ್ಯಕ್ಷ ಹೆಚ್.ಎನ್.ವಿಜಯ್ ಕುಮಾರ್, ಮಾಜಿ ಜಿಪಂ ಸದಸ್ಯೆ ಕಲ್ಪನಾ, ಮೈಮುಲ್ ಮಾಜಿ ಅಧ್ಯಕ್ಷ ಎ.ಟಿ.ಸೋಮಶೇಖರ್, ಎಸ್.ಪಿ.ತಮ್ಮಯ್ಯ, ಎಸ್.ಆರ್.ರಾಮೇಗೌಡ, ವೈ.ಆರ್.ಪ್ರಕಾಶ್, ಗಣೇಶ್, ಕೆ.ಪಿ.ಪ್ರಭುಶಂಕರ್, ನಿವೃತ್ತ ಶಿಕ್ಷಣಾಧಿಕಾರಿ ರಾಜು, ಲಕ್ಕೇಗೌಡರ ಶ್ರೀಮತಿ ಜಯಲಕ್ಷಮ್ಮ ಮತ್ತು ಪುತ್ರರಾದ ಹೇಮಂತ್ ಕುಮಾರ್, ಕೆ.ಎಲ್.ರಮೇಶ್, ಕೆ.ಎಲ್.ಜಗದೀಶ್ ಸೇರಿದಂತೆ ಇನ್ನಿತರರಿದ್ದರು.

ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಮತ್ತೊಂದು ಅವಕಾಶ ಕೊಡಿ

ಶಾಸಕ ಬಿ.ಹರ್ಷವರ್ಧನ್ ಮನವಿ

ಮಲ್ಲುಂಡಿ, ಏ.11– ನನ್ನ ಅಧಿಕಾರವಧಿಯಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದ್ದೇನೆ ಹೀಗಾಗಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಮತ್ತೊಂದು ಅವಕಾಶ ನೀಡುವಂತೆ ಶಾಸಕ ಬಿ.ಹರ್ಷವರ್ಧನ್ ಮನವಿ ಮಾಡಿದರು.

ನಂಜನಗೂಡು ವಿಧಾನಸಭಾ ಕ್ಷೇತ್ರದ ಕುರಿಹುಂಡಿ, ತರಗನಹಳ್ಳಿ, ಕಡಬೂರು, ರಾಜೂರು, ಎಂ.ಕೊಂಗಳ್ಳಿ, ಮಾದಾಪುರ, ದುಗ್ಗಹಳ್ಳಿ, ಕಾರ್ಯ, ಶೆಟ್ಟಹಳ್ಳಿ, ಯಲ್ಲಹಳ್ಳಿ ಗ್ರಾಮಗಳಲ್ಲಿ ಮತಯಾಚಿಸಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಪಕ್ಷದ ಪರ ಜನತೆ ಒಲವು ವ್ಯಕ್ತಪಡಿಸುತ್ತಿದ್ದು, ಕಳೆದ 8 ವರ್ಷಗಳಿಂದ ಪ್ರಧಾನಿ ಮೋದಿ ಅವರು ದೇಶದ ಅಭಿವೃದ್ಧಿಗಾಗಿ ಕೈಗೊಂಡಿರುವ ಕಾರ್ಯಗಳು ಜನರ ಮೆಚ್ಚುಗೆಗೆ ಪಾತ್ರವಾಗಿದೆ. ನಾನು ಶಾಸಕನಾದ ಬಳಿಕ ಕ್ಷೇತ್ರಕ್ಕೆ 832 ಕೋಟಿ ರೂ. ಅನುದಾನ ತಂದು ಎಲ್ಲಾ ವರ್ಗದವರ ಅಭಿವೃದ್ಧಿಗೆ ಆದ್ಯತೆ ನೀಡಿದ್ದೇನೆ. ಅಲ್ಲದೇ ಸಮುದಾಯ ಭವನ, ಅಂಗನವಾಡಿ, ಶಾಲಾ ಕಟ್ಟಡ, ಸಿಸಿ ರಸ್ತೆ, ಚರಂಡಿ, ಕುಡಿಯುವ ನೀರು ಸೇರಿದಂತೆ ಮೂಲ ಸೌಕರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದೇನೆ ಎಂದರು.



ಈ ಹಿಂದಿನ ಕಾಂಗ್ರೆಸ್ ಸರ್ಕಾರದಲ್ಲಿ ಕ್ಷೇತ್ರ ಅಭಿವೃದ್ಧಿಯಾಗಿರಲಿಲ್ಲ. ನಾನು ಶಾಸಕನಾದ ಬಳಿಕ ಕ್ಷೇತ್ರವನ್ನು ಹಂತ ಹಂತವಾಗಿ ಅಭಿವೃದ್ಧಿ ಪಡಿಸಿದ್ದೇನೆ. ಹೀಗಾಗಿ ಮತ್ತಷ್ಟು ಅಭಿವೃದ್ಧಿಗಾಗಿ ಮತ್ತೊಂದು ಅವಕಾಶ ನೀಡಿ ಎಂದು ಮನವಿ ಮಾಡಿದರು.

ಜಿಪಂ ಮಾಜಿ ಸದಸ್ಯರಾದ ಚಿಕ್ಕರಂಗನಾಯಕ, ಎಸ್.ಎಂ. ಕೆಂಪಣ್ಣ, ಮುಖಂಡರಾದ ಸುಬ್ಬಣ್ಣ, ಹೆಚ್.ಎಂ.ಕೆಂಡಗಣ್ಣಪ್ಪ ಸೋಮಣ್ಣ, ಶಿವಣ್ಣ, ಬಸಪ್ಪ, ಬಸವರಾಜ್, ನಟರಾಜ್, ಮಲ್ಲಿಕಾರ್ಜುನ, ಪರಶಿವಮೂರ್ತಿ, ಅಬ್ದುಲ್ ರಜಾಕ್, ನವೀನ, ಪ್ರಜ್ವಲ್ ಶಶಿ ಸೇರಿದಂತೆ ಇತರರಿದ್ದರು.

ಪಕ್ಷೇತರ ಅಭ್ಯರ್ಥಿಗೆ ಬಿರ್ಸಾಮುಂಡಾ ಸೇವಾ ಸಮಿತಿ ಬೆಂಬಲ



ಹೆಚ್.ಡಿ.ಕೋಟೆ, ಏ.11– ಈ ಬಾರಿಯ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿ ಜಿ.ಎನ್.ದೇವದತ್ತ ಅವರನ್ನು ಬಿರ್ಸಾಮುಂಡಾ ಸೇವಾ ಸಮಿತಿ ಬೆಂಬಲಿಸಲಿದೆ ಎಂದು ಸಮಿತಿಯ ಪ್ರಧಾನ ಕಾರ್ಯದರ್ಶಿ ಬಿ.ಎಂ.ನಟರಾಜು ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದುವರೆಗೂ ಕ್ಷೇತ್ರದ ಶಾಸಕರಾಗಿ ಆಯ್ಕೆಯಾದವರು ಆದಿವಾಸಿಗಳ ಸಮಸ್ಯೆಗಳನ್ನು ಬಗೆಹರಿಸಲು ವಿಫಲವಾಗಿದ್ದಾರೆ. ಅರಣ್ಯ ಹಕ್ಕು ಕಾಯಿದೆ ಹಾಗೂ ಡಾ.ಮುಜಫರ್ ಅಸಾದಿ ವರದಿ ಜಾರಿಗೆ ಯಾರೊಬ್ಬರೂ ಅಧಿವೇಶನದಲ್ಲಿ ದನಿ ಎತ್ತಲಿಲ್ಲ ಹೀಗಾಗಿ ನಾವು ಈ ಬಾರಿ ರಾಷ್ಟ್ರೀಯ ಹಾಗೂ ಪ್ರಾದೇಶಿಕ ಪಕ್ಷಗಳಿಗೆ ಬೆಂಬಲ ನೀಡದೆ, ಪಕ್ಷೇತರ ಅಭ್ಯರ್ಥಿಗೆ ಬೆಂಬಲ ನೀಡುತ್ತಿದ್ದೇವೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಅಧ್ಯಕ್ಷ ಎಲೆಹುಂಡಿ ಶೇಖರ್, ಶ್ರೀಧರ್, ಲಿಂಗಮ್ಮ, ಮಹದೇವು ಇದ್ದರು.



ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅವರ ಸಮ್ಮುಖದಲ್ಲಿ ತಿ.ನರಸೀಪುರ ಪುರಸಭೆ 4 ವಾರ್ಡ್ ಪಕ್ಷೇತರ ಸದಸ್ಯರಾದ ಎಲ್.ಮಂಜುನಾಥ್ ನೇತೃತ್ವದಲ್ಲಿ ವೀರಶೈವ ಲಿಂಗಾಯತ ಮುಖಂಡರಾದ ಯಜಮಾನ ಶಿವಕುಮಾರ, ಲೋಕೇಶ್, ಮಂಜು, ರಾಜು ಹಾಗೂ ಒಕ್ಕಲಿಗ ಮುಖಂಡರಾದ ಕುಮಾರ್, ಯಜಮಾನ ಗೋವಿಂದ, ಕುಮಾರ್, ಮಹದೇವ್, ಮಡಿವಾಳ ಸಮಾಜದ ಮುಖಂಡರಾದ ಯಜಮಾನ ಸಿದ್ದರಾಜು, ಆಟೋ ಕುಮಾರ್, ರಾಜು, ಮರಿಸ್ವಾಮಿ, ಮಾದಿಗ ಸಮಾಜದ ಮುಖಂಡರಾದ ನಿಂಗರಾಜು, ರಾಚಪ್ಪ, ಗೋಪಿ, ಮರಿಲಿಂಗಯ್ಯ, ಮಾದೇಶ್, ಸ್ವಾಮಿ, ದೊರೆಸ್ವಾಮಿ, ಕೆಂಪರಾಜು, ಪ್ರದೀಪ್ ಕುಮಾರ್, ಬಾಲು ಸೇರಿದಂತೆ 100ಕ್ಕೂ ಹೆಚ್ಚು ಮುಖಂಡರು ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡರು.

ಚುನಾವಣೆಯಲ್ಲಿ ಮತದಾರರು ನನ್ನನ್ನು ಆಶೀರ್ವದಿಸಲಿದ್ದಾರೆ

● ಶಾಸಕ ಎಂ.ಅಶ್ವಿನ್‌ಕುಮಾರ್ ವಿಶ್ವಾಸ ● ವೀರಶೈವ ಮುಖಂಡರು ಜೆಡಿಎಸ್ ಸೇರ್ಪಡೆ

ತಿ.ನರಸೀಪುರ, ಏ.11– ಕ್ಷೇತ್ರದಲ್ಲಿ ಜೆಡಿಎಸ್ ಪಕ್ಷ ಸದೃಢವಾಗಿದ್ದು, ಈ ಬಾರಿಯ ಚುನಾವಣೆಯಲ್ಲಿ ಕ್ಷೇತ್ರದ ಮತದಾರರು ನನ್ನನ್ನು ಆಶೀರ್ವದಿಸಲಿದ್ದಾರೆ ಎಂದು ಶಾಸಕ ಎಂ.ಅಶ್ವಿನ್‌ಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕಿನ ಬೆನಕನಹಳ್ಳಿ ಗ್ರಾಮದಲ್ಲಿ ಹಿರಿಯ ವೀರಶೈವ ಮುಖಂಡ ಬಸಪ್ಪ ಸೇರಿದಂತೆ ಕಾಂಗ್ರೆಸ್ ತೊರೆದ ವೀರಶೈವ ಮುಖಂಡರನ್ನು ಪಕ್ಷಕ್ಕೆ ಬರಮಾಡಿಕೊಂಡು ಅವರು ಮಾತನಾಡಿದರು.



ಗ್ರಾಮದ ವೀರಶೈವ ಮುಖಂಡರಾದ ನಾಡಗೌಡ ರಾಜಶೇಖರ್ ಹಾಗೂ ಹಿರಿಯ ಕಾಂಗ್ರೆಸ್ ಮುಖಂಡ ಬಸಪ್ಪ ಅವರ ಮಾರ್ಗದರ್ಶನದಲ್ಲಿ ಸಮುದಾಯದವರು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಗೊಂಡಿರುವುದು ಸಂತಸ ತಂದಿದೆ. ತಾಲೂಕಿನಾದ್ಯಂತ ವಿವಿಧ ಪಕ್ಷಗಳನ್ನು ತೊರೆದು ಸಾವಿರಾರು ಮುಖಂಡರು ಪಕ್ಷ ಸೇರ್ಪಡೆಯಾಗುತ್ತಿದ್ದಾರೆ. ಚುನಾವಣೆ ಸಮೀಪಿಸುತ್ತಿರುವಂತೆ ಪಕ್ಷ ಸೇರ್ಪಡೆಯಾಗುವವರ ಸಂಖ್ಯೆ ಮತ್ತಷ್ಟು ಹೆಚ್ಚಲಿದೆ ಎಂದರು.

ಕ್ಷೇತ್ರದಲ್ಲಿ ಕಾರ್ಯಕರ್ತರು ಪಕ್ಷ ಸಂಘಟನೆಗೆ ಹಗಲಿರುಳು ಶ್ರಮಿಸುತ್ತಿದ್ದಾರೆ. ಜೆಡಿಎಸ್ ಪ್ರಾದೇಶಿಕ ಪಕ್ಷವಾಗಿದ್ದು, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸಾರಥ್ಯದಲ್ಲಿ ರಾಜ್ಯಾದ್ಯಂತ ಹಿಂದುಳಿದವರು, ದೀನ ದಲಿತರು, ಪ.ಜಾತಿ ಮತ್ತು ಪಂಗಡದವರ ಪರ ಕೆಲಸ ಮಾಡುವ ಏಕೈಕ ಪಕ್ಷವಾಗಿದೆ. ಪಂಚರತ್ನ ಯೋಜನೆಯನ್ನು ಜಾರಿಗೆ ತಂದು ಹಿಂದುಳಿದವರು, ನಿರುದ್ಯೋಗಿಗಳು, ಕಾರ್ಮಿಕರು ಮತ್ತಿತರ ವರ್ಗಗಳ ಕಲ್ಯಾಣ ಮಾಡುವ ಸದುದ್ದೇಶ ಹೊಂದಿರುವ ಕುಮಾರಸ್ವಾಮಿಯವರ ಆಶಯಕ್ಕೆ ನಾವೆಲ್ಲರೂ ಪೂರಕವಾಗಿ ಕೆಲಸ ಮಾಡಿದ್ದೇ ಆದಲ್ಲಿ ಮುಂದಿನ 5 ವರ್ಷಗಳಲ್ಲಿ ರಾಜ್ಯದ ಅಭಿವೃದ್ಧಿಯ ಚಿತ್ರಣವೇ ಬದಲಾಗಲಿದೆ ಎಂದರು.

ಕಳೆದ ಚುನಾವಣೆಯಲ್ಲಿ ಕ್ಷೇತ್ರದ ಜನತೆ ನೀಡಿದ ಸಹಕಾರವನ್ನು ನಾನೆಂದಿಗೂ ಮರೆಯಲಾರೆ. ತಮ್ಮ ಮನೆ ಮಗನಂತೆ ಕಂಡು ನನಗೆ ಅತ್ಯಧಿಕ ಮತಗಳನ್ನು ನೀಡಿ ಅಭೂತಪೂರ್ವ ಜಯ ತಂದು ಕೊಟ್ಟ ನಿಮ್ಮೆಲ್ಲರ ಆಶಯಕ್ಕೆ ಅನುಗುಣವಾಗಿ ಕಳೆದ 5 ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿದ್ದೇನೆ. ಯಾರೊಬ್ಬರಿಗೂ ಕೇಡುಕನ್ನು ಬಯಸದೇ, ಯಾವುದೇ ಆರೋಪಕ್ಕೆ ಕಿವಿಗೊಡದೇ ಕ್ಷೇತ್ರದ ಅಭಿವೃದ್ಧಿ ಕಡೆಗೆ ಮಾತ್ರ ಗಮನ ಕೇಂದ್ರೀಕರಿಸಿ, ಸಿಕ್ಕ ಅನುದಾನ ಸದ್ಬಳಕೆ ಮಾಡಿಕೊಂಡು ನನ್ನ ಮಿತಿಯಲ್ಲಿ ಆಗಬಹುದಾದ ಕೆಲಸವನ್ನು ನಿರ್ವಂಚನೆಯಿಂದ ಮಾಡಿದ್ದೇನೆ. ಹಾಗಾಗಿ ಈಗ ಮತ್ತೆ ನಿಮ್ಮ ಬಳಿಗೆ ಆಶೀರ್ವಾದ ಪಡೆಯಲು ಬಂದಿದ್ದೇನೆ. ಕಳೆದ ಬಾರಿ ನೀಡಿದ ಸಹಕಾರವನ್ನು ಈ ಬಾರಿಯೂ ನೀಡುವ ಮೂಲಕ ಮತ್ತೊಂದು ಅವಧಿಗೆ ನಿಮ್ಮ ಸೇವೆ ಮಾಡಲು ಅವಕಾಶ ಕಲ್ಪಿಸಿ ಕೊಡಿ ಎಂದು ಮನವಿ ಮಾಡಿದರು.

ಶಾಸಕ ಅಶ್ವಿನ್ ಕುಮಾರ್ ಬೆನಕನಹಳ್ಳಿ ಗ್ರಾಮ ಪ್ರವೇಶಿಸುತ್ತಿದ್ದಂತೆ ನೆರೆದಿದ್ದ ನೂರಾರು ಗ್ರಾಮಸ್ಥರು ಪಟಾಕಿ ಸಿಡಿಸಿ ಅದ್ದೂರಿ ಸ್ವಾಗತ ನೀಡಿದರು. ಕ್ಷೇತ್ರ ಜೆಡಿಎಸ್ ಅಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ, ಜಿಪಂ ಮಾಜಿ ಸದಸ್ಯ ಸಿದ್ದಾರ್ಥ, ಪ್ರಭುಸ್ವಾಮಿ, ಲಿಂಗಪ್ಪಾಜಿ, ಎಪಿಎಂಸಿ ಮಾಜಿ ಅಧ್ಯಕ್ಷ ಮಹದೇವಯ್ಯ, ಮೂಗೂರು ಶಿವಮೂರ್ತಿ, ಯುವ ಮುಖಂಡ ಸಂಪತ್, ಸೋಸಲೆ ರಾಜೇಶ್, ರಾಜಣ್ಣ, ಚಿಕ್ಕಬೂಹಳ್ಳಿ ನಾಗರಾಜು, ಮಹದೇವಸ್ವಾಮಿ, ಶಂಭುದೇವನಪುರ ರಮೇಶ್, ವಿ.ಒ.ಹುಂಡಿ ಸಂತೋಷ, ಗ್ರಾಪಂ ಸದಸ್ಯ ಅಶೋಕ್, ಪರಮೇಶ್ ಸೇರಿದಂತೆ ಇತರರಿದ್ದರು.

> ಈ ಹಿಂದಿನಿಂದಲೂ ಕಾಂಗ್ರೆಸ್ ಬೆಂಬಲಿಸುತ್ತಾ ಬಂದಿದ್ದೆ. ಆದರೆ ಈ ಬಾರಿ ಜೆಡಿಎಸ್ ಸೇರ್ಪಡೆಗೊಂಡಿದ್ದು, ಕ್ಷೇತ್ರದಲ್ಲಿ ಅಶ್ವಿನ್ ಕುಮಾರ್ ಗೆಲುವಿಗೆ ಶ್ರಮಿಸುತ್ತೇನೆ. ಶಾಸಕರ ಸರಳತೆ, ಸಜ್ಜನಿಕೆ ಮೆಚ್ಚಿ, ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರ ರೈತಪರ ನಿಲುವನ್ನು ಬೆಂಬಲಿಸಿ ಪಕ್ಷದ ಪರ ಕೆಲಸ ಮಾಡುತ್ತೇನೆ.
> -ಬಸಪ್ಪ, ವೀರಶೈವ ಮುಖಂಡ.

ಕೃಷ್ಣ ನಿಧನ



ಹುಣಸೂರು, ಏ.11– ತಾಲೂಕಿನ ತಟ್ಟೆಕೆರೆ ಗ್ರಾಮದ ನಿವಾಸಿ, ದಸಂಸ ಹೋರಾಟಗಾರ ಕೃಷ್ಣ(53) ಮಂಗಳವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ, ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಗ್ರಾಮದ ಸ್ಮಶಾನದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸರ್ವಮಂಗಳಮ್ಮ



ಬೆಟ್ಟದಪುರ, ಏ.11– ಗ್ರಾಮದ ನಿವಾಸಿ ಸರ್ವಮಂಗಳಮ್ಮ(90) ಮಂಗಳವಾರ ಮಧ್ಯಾಹ್ನ ನಿಧನರಾದರು. ಮೃತರು ಓರ್ವ ಪುತ್ರಿ, ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ಗ್ರಾಮದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಮುಲ್–ನಂದಿನಿ ವಿಲೀನಕ್ಕೆ ಕೈ ಹಾಕಿದರೆ ರಾಜ್ಯಾದ್ಯಂತ ಉಗ್ರ ಹೋರಾಟ

ಸಾಮೂಹಿಕ ನಾಯಕತ್ವದ ರಾಜ್ಯ ರೈತ ಸಂಘ ಎಚ್ಚರಿಕೆ



ಮೈಸೂರು, ಏ.11(ಪಿಎಂ)– ಗುಜರಾತ್‌ನ ಹಾಲು ಉತ್ಪಾದಕ ಸಂಸ್ಥೆ 'ಅಮುಲ್'ನೊಂದಿಗೆ ಕರ್ನಾಟಕದ ಹಾಲು ಮಹಾಮಂಡಳಿ (ಕೆಎಂಎಫ್–ನಂದಿನಿ) ವಿಲೀನ ಪ್ರಕ್ರಿಯೆಗೆ ಕೈ ಹಾಕಿದರೆ ಸಾಮೂಹಿಕ ನಾಯಕತ್ವದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಸಂಘದ ಮೈಸೂರು ಜಿಲ್ಲಾಧ್ಯಕ್ಷ ಹಾಗೂ ರಾಜ್ಯ ಕೋರ್ ಕಮಿಟಿ ಸದಸ್ಯ ವಿದ್ಯಾಸಾಗರ್ ಟಿ.ರಾಮೇಗೌಡ ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಂದಿನಿ ಹಾಲಿನ ಉತ್ಪನ್ನಗಳು ಕೇವಲ ಉತ್ಪನ್ನ ಮಾತ್ರವಲ್ಲ, ರಾಜ್ಯ ಸುಮಾರು 26 ಲಕ್ಷ ರೈತರ ಬದುಕಿನ ಭಾಗವಾಗಿದೆ. ಹೀಗಾಗಿ ಅದನ್ನು ಅಮುಲ್ ಜೊತೆ ವಿಲೀನಗೊಳಿಸಿ ಬ್ರ್ಯಾಂಡ್ ನುಂಗಿಹಾಕುವ ಯತ್ನಕ್ಕೆ ಮುಂದಾದರೆ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಂದಿನಿಯಿಂದಾಗಿ ರಾಜ್ಯದ 27 ಸಾವಿರ ಹಳ್ಳಿಗಳಲ್ಲಿ 15,043 ಹಾಲು ಉತ್ಪಾದಕ ಸಹಕಾರ ಸಂಘಗಳು ಈಗಲೂ ಸಕ್ರಿಯವಾಗಿವೆ. ಸುಮಾರು 70 ಸಾವಿರದಿಂದ 80 ಲಕ್ಷ ಲೀಟರ್ ಹಾಲು, 8ರಿಂದ 10 ಲಕ್ಷ ಲೀಟರ್ ಮೊಸರು ಪ್ರತಿದಿನ ಉತ್ಪಾದನೆ ಯಾಗುತ್ತಿದೆ. 2022ರ ಸಾಲಿನಲ್ಲಿ ನಂದಿನಿಯ ವಾರ್ಷಿಕ ವಹಿವಾಟು ಸುಮಾರು 19,784 ಕೋಟಿ ರೂ. ಇದ್ದರೆ, ವಾರ್ಷಿಕ ಆದಾಯವು 4,924 ಕೋಟಿ ರೂ. ಇದೆ. ಇಂತಹ ಲಾಭದಾಯಕ ಸಂಸ್ಥೆಯನ್ನು ಮುಚ್ಚುವ ಯತ್ನ ಮಾಡಿದರೆ ಸಹಿಸಲಾಗದು. ಆದ್ದರಿಂದ ರಾಜ್ಯದ ರೈತರು ಹಾಗೂ ಜನತೆ ನಂದಿನಿ ಉಳಿಸಿ ಅಭಿಯಾನದಲ್ಲಿ ಪಾಲ್ಗೊಳ್ಳಬೇಕು ಎಂದು ಕೋರಿದರು. ಸಂಘದ ಪದಾಧಿಕಾರಿಗಳಾದ ಇಮ್ಮಾವು ರಘು, ಸತೀಶ್‌ರಾವ್, ವರಕೋಡು ಕೃಷ್ಣೇಗೌಡ, ಕೆ.ಜಿ.ಶಿವಪ್ರಸಾದ್ ಗೋಷ್ಠಿಯಲ್ಲಿದ್ದರು.

ಎನ್‌ಸಿಇಆರ್‌ಟಿ ಕ್ರಮಕ್ಕೆ ದಲಿತ ವೇಲ್‌ಫೇರ್ ಟ್ರಸ್ಟ್ ಅಸಮಾಧಾನ



ಮೈಸೂರು,ಏ.11(ಪಿಎಂ)– ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯು (ಎನ್‌ಸಿಇಆರ್‌ಟಿ) 12ನೇ ತರಗತಿಯ ರಾಜ್ಯಶಾಸ್ತ್ರ ಪಠ್ಯ ಪುಸ್ತಕದಿಂದ ಮಹಾತ್ಮ ಗಾಂಧಿ ಹತ್ಯೆ ಹಾಗೂ ಆರ್‌ಎಸ್‌ಎಸ್ ನಿಷೇಧ ಕುರಿತ ಕೆಲವು ವಿವರಗಳನ್ನು ಕೈಬಿಟ್ಟಿದೆ ಎಂದು ದಲಿತ ವೇಲ್‌ಫೇರ್ ಟ್ರಸ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಟ್ರಸ್ಟ್ ಅಧ್ಯಕ್ಷ ಶಾಂತರಾಜು, ಬಿಜೆಪಿ ಸರ್ಕಾರದಿಂದ ಇತಿಹಾಸ ತಿರುಚುವ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿದೆ. ಎನ್‌ಇಪಿಯಲ್ಲಿಯೂ ತಿರುಚಿದ್ದಾರೆ. ದಿನ ಬೆಳಗಾದರೆ ಕೋಮು ಸಂಘರ್ಷಕ್ಕೆ ಕುಮ್ಮಕ್ಕು ನೀಡಲಾಗುತ್ತಿದೆ. ಬಿಜೆಪಿ ಅಧಿಕಾರದಲ್ಲಿದ್ದರೆ ದಲಿತರು, ಹಿಂದುಳಿದವರು ಹಾಗೂ ಅಲ್ಪಸಂಖ್ಯಾತರ ಮೇಲಿನ ಶೋಷಣೆ ತಪ್ಪುವುದಿಲ್ಲ ಎಂದು ಕಿಡಿಕಾರಿದರು.

12ನೇ ತರಗತಿಯ ರಾಜ್ಯಶಾಸ್ತ್ರ ಪಠ್ಯ ಪುಸ್ತಕದಿಂದ ಕೈಬಿಟ್ಟಿರುವ ಅಂಶಗಳನ್ನು ಪುನರ್ ಸೇರ್ಪಡೆಗೆ ಕ್ರಮ ವಹಿಸಬೇಕು. ದಲಿತರು, ಹಿಂದುಳಿದವರು, ಅಲ್ಪ ಸಂಖ್ಯಾತರು ಯಾವುದೇ ಕಾರಣಕ್ಕೂ ಬಿಜೆಪಿಗೆ ಮತ ಹಾಕಬಾರದು ಎಂದು ಮನವಿ ಮಾಡಿದರು. ನಿವೃತ್ತ ಪ್ರಾಧ್ಯಾಪಕ ಪ್ರೊ.ನಂಜರಾಜ ಅರಸ್, ಲೇಖಕ ಸಿದ್ದಸ್ವಾಮಿ, ಟ್ರಸ್ಟ್‌ನ ಚಿಕ್ಕಅನ್ನದಾನಿ ಗೋಷ್ಠಿಯಲ್ಲಿದ್ದರು.